3. ವಿತ್ತೀಯ ಕಾರ್ಯಕಲಾಪ.

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಎಸ್. ರಾಜೇಂದ್ರನ್(ಕೆಜಿಎಫ್): ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಟೂರಿಸಂ ಅಂಡ್ ಡೆವಲಪ್‌ಮೆಂಟ್ ಮಿನಿಸ್ಟರ್ ಇಲ್ಲ, I am bringing it to your notice. ಅವರು ಒಂದು ಗೋಲ್ಡನ್ ಸಫಾರಿ ಎಂದು ಹೊಸ ಸ್ಟೈಲೀಷ್ ಟೂರಿಸಂ ಸೆಂಟರನ್ನು ಮಾಡಬೇಕೆಂದು ಗೋಲ್ಡನ್ ಸಫಾರಿ ಎಂದು ಮಾಡಿದ್ದಾರೆ. ಅದಕ್ಕೆ ಬಜೆಟ್ ಎಷ್ಟು ಎಂದರೆ, ಒಂದು ಸಾವಿರ ಕೋಟಿ ರೂಪಾಯಿಗಳು, ನಿಮಗೆ ಎಲ್ಲಿಂದ ಒಂದು ಸಾವಿರ ಕೋಟಿ ರೂಪಾಯಿಗಳು ಬರುತ್ತೆ, ಕೇಂದ್ರ ಸರ್ಕಾರದಿಂದ ಬರುತ್ತದೆಯೇ, ಇಲ್ಲ ಪ್ರೈವೇಟ್ ಕಂಪನಿಯಿಂದ ಕೊಡುತ್ತಾರೆಯೇ, ಹೇಗೆ ಫಂಡ್‌ನಿಂದ ನಿಮಗೆ ಒಂದು ಕೋಟಿ ರೂಪಾಯಿಗಳು ಬಂದಿದೆ. ಯಾವ ಯಾವ ಏರಿಯಾಗಳನ್ನು ತಾವು ಸೆಲೆಕ್ಟ್ ಮಾಡಿದ್ದೀರಿ, ಇದರ ಬಗ್ಗೆ ಎಕ್ಸ್‌ಪ್ಲೇನೇಷನ್‌ನ್ನು ಕೊಟ್ಟಿರುವುದಿಲ್ಲ. ಅದರ ಬಗ್ಗೆ ಏನೂ ಕೂಡ ಗೊತ್ತಿಲ್ಲ. ಬರೀ ಅಡ್ವರ್‌ಟೈಸ್‌ಮೆಂಟ್ ಮಾತ್ರ ಕೊಟ್ಟಿದ್ದಾರೆ. ಒಂದು ಸಾವಿರ ಕೋಟಿ ರೂಪಾಯಿಗಳಲ್ಲಿ ಟೂರಿಸಂ ಡೆವಲಪ್‌ಮೆಂಟ್ ಮಾಡುತ್ತೇವೆ ಅಂತ ಹೇಳಿದ್ದಾರೆ ಬೆಂಗಳೂರಿನಲ್ಲಿ ಏನೇನು ಟೂರಿಸಂ ಡೆವಲಪ್‌ಮೆಂಟ್ ಮಾಡುತ್ತೀರಿ, ಏನೇನು ಮಾಡಿದ್ದೀರಿ, ಕರ್ನಾಟಕ ರಾಜ್ಯದಲ್ಲಿ ಟೂರಿಸಂನ್ನು ಯಾವ ರೀತಿಯಾಗಿ ಡೆವಲಪ್ ಮಾಡುತ್ತೀರಿ. ಯಾವ ಯಾವ ಜಾಗದಲ್ಲಿ ಮಾಡುತ್ತೀರಿ. ಅವೆಲ್ಲದರ ಮಾಹಿತಿ ಕೊಡಬೇಕಲ್ಲವೆ ಮಾನ್ಯ ಸಚಿವರೆ, ಸಚಿವರು ಎಂದರೆ ತಾವು ಸಚಿವರೇ ತಮಗೆ ಡೌಟ್ ಆಗುತ್ತದೆಯೇ? ಈಗ ತಾವು ಸಚಿವರು, ಈಗ ಅವರು ಇಲ್ಲ. ಸತ್ಯಾಂಶವನ್ನು ತಾವು ಹೇಳಬೇಕು. ಗೋಲ್ಡನ್ ಸಫಾರಿಗೆ ಇಷ್ಟು ಮಾಡುತ್ತೇವೆ ಎಂದರೆ, ನೀವು ಹೇಗೆ ಮಾಡುತ್ತೀರಿ? How are you going to implement? Bangalore is one of the tourist places. ಸುಮ್ಮನೆ ಹೇಳುವುದು ಏನೆಂದರೆ, ಕಬ್ಬನ್‌ಪಾರ್ಕ್ ಇದೆ, ವಿಶ್ವೇಶ್ವರಯ್ಯ ಮ್ಯೂಸಿಯಂ ಇದೆ, ಇಷ್ಟು ಹೇಳಿಕೊಂಡು ಹೋದರೆ ಟೂರಿಸಂ ಡೆವಲಪ್‌ಮೆಂಟ್ ಆಗುತ್ತದೆಯೇ? ರೀಸೆಂಟ್ ಆಗಿ ಸುನಾಮಿ ಬಂದಿದೆ ಅಧ್ಯಕ್ಷರೆ, ಇದು ಬಂದ ಮೇಲೆ ಪೋರ್ಟ್‌ಬ್ಲೇರ್ ಅಂಡಮಾನ್‌ಗೆ ಯಾರೂ ಹೋಗುವುದಿಲ್ಲ, ಸೀಶೋರ್ ಜಾಗಕ್ಕೆ ಹೋಗುವುದನ್ನು ಎಲ್ಲರೂ ಬಿಟ್ಟಿದ್ದಾರೆ. ನೆಕ್ಸ್ಟ್ ಅಲ್ಟರ್‌ನೇಟೀವ್‌ನಲ್ಲಿ ಸೈಲೆನ್ಸ್ ಪ್ಲೇಸ್, ಕಾವಮ್‌ಪ್ಲೇಸ್ ಯಾವುದು ಅಂದರೆ ಗಾರ್ಡನ್‌ಸಿಟಿ ಬೆಂಗಳೂರು. ಬಹಳ ಗುಡ್‌ಅಟ್ಮಾಸ್‌ಫಿಯರ್ ಚೆನ್ನಾಗಿರುವ ಜಾಗವೆಂದರೆ, ನಮ್ಮ ಕರ್ನಾಟಕ, ಅದು Tourists are selecting this place is Bangalore in their Tour programmes. ಅದರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಹೊಸ ಹೊಸ ಟೂರಿಸಂ ಬಸ್‌ಗಳನ್ನು ಬಿಟ್ಟಿದ್ದೀರಾ? ಹೈಟೆಕ್ ಬಸ್ಸುಗಳನ್ನು ಬಿಟ್ಟಿದ್ದೀರಾ? ಹೆಲಿಕಾಪ್ಟರ್ ಹೆಲಿಪ್ಯಾಡ್‌ನ್ನು ಮಾಡಿದ್ದೀರಾ? ಏರ್‌ಕ್ರಾಫ್ಟ್ ಮಾಡಿದ್ದೀರಾ? ಏನು ನಿಮ್ಮ ಟೂರಿಸಂ ಸ್ಟೈಲ್‌ಗಳು ನಮಗೆ ಗೊತ್ತಾಗುತ್ತಾ ಇಲ್ಲ. ಟ್ರೈನ್ ಇಲ್ಲ, ಮಿನಿಬಸಸ್ ಇಲ್ಲ, ಮಾಡ್ರನ್ ಟೆಕ್ನಾಲಜಿ ಬಸ್ಸಸ್ ಇಲ್ಲ, ಹೇಗೆ ಜನರಿಗೆ ಅನುಕೂಲವನ್ನು ಮಾಡಿಕೊಡುತ್ತೀರಿ? ಈಗ ಗೋವಾ, ಪ್ರತಿಯೊಬ್ಬರೂ ಗೋವಾಕ್ಕೆ, ಟೂರಿಸಂ ಡೆವಲಪ್‌ಮೆಂಟ್ ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್‌ನು ಉಪಯೋಗಿಸಿಕೊಂಡು ಒಂದೆರಡು ದಿವಸ ಜಾಲಿಯಾಗಿ ಇದ್ದುಬರೋಣವೆಂದು ಹೋಗುತ್ತಾ ಇದ್ದರು. ಆದರೆ ಈಗ ಸುನಾಮಿ ಬಂದ ಮೇಲೆ ಅಲ್ಲಿಯೂ ಕೂಡ ಯಾರೂ ಹೋಗುವುದಿಲ್ಲ. ಮಲೇಷಿಯಾ, ಸಿಂಗಾಪುರ್, ಥೈಲ್ಯಾಂಡ್, ಶ್ರೀಲಂಕಾ their

major source of revenue is, through tourism. will our Tourism Minister think of developing Toursim on the lives of these countries? ಫಾರಿನ್‌ನಲ್ಲಿ ಅಂಡರ್‌ಗ್ರೌಂಡ್‌ನಲ್ಲಿ ಹೋಗಿ 10 ಡಾಲರ್ಸ್‌ನ್ನು ಕೊಟ್ಟು ಒಂದು ದೋಸೆಯನ್ನು ತಿನ್ನಬಹುದು. 200 ಫೀಟ್ ಕೆಳಗಡೆ ಹೋಗಿ ಒಂದು ಕಾಫಿ ಕುಡಿದುಕೊಂಡು ಬಂದರೆ 200 ಡಾಲರ್ಸ್ ಆಗುತ್ತದೆಂದು ಇಲ್ಲಿ ನಮ್ಮ ರಾಜ್ಯದಲ್ಲಿ ಮಂತ್ರಿಗಳು ಹೇಳುವುದು. ಅಲ್ಲಿ ಹೋದರೆ ಹೀಗೆ ಆಗುತ್ತದೆ, ಹಾಗೆ ಆಗುತ್ತದೆಂದು ಹೇಳುತ್ತಾರೆ. ನನ್ನ ಊರಿನಲ್ಲಿ ಒಂದು ಅಂಡರ್‌ಗ್ರೌಂಡ್ ಇದೆ, ಅದು 10 ಸಾವಿರ ಫೀಟ್ ಇದೆ, ಅದು ಕೆಳಗಡೆ ಹೋಗಿ 200 ರೂಪಾಯಿ ಫೀಯನ್ನು ಕೊಟ್ಟರೆ ಸಾಕು, 200 ಡಾಲರೇ ಬೇಡ, you will get higher revenue. ನಾನು ಭಾಷಣ ಮಾಡಿದರೆ ಚೆನ್ನಾಗಿದೆ ಎಂದು ಹೇಳುತ್ತಾರೆ. ಇದನ್ನು ಹೋಗಿ ನೀವು ನಿಮ್ಮ ಅಧಿಕಾರಿಗಳಿಗೆ ಹೇಳಿಬಿಟ್ಟರೆ ಅದಕ್ಕೆ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪ್ಲಾನ್ ಮಾಡುತ್ತಾರೆ. I will tell for how your bureaucrats' are running the administration ರಾಗಿ ಬೆಳೆಸುವುದು ಹೇಗೆ ಎಂದು ಕೇಳಿ, ರೈತನಿಗೆ ಹೋಗಿ ಕೇಳಿ; ಅವರು 5 ನಿಮಿಷದಲ್ಲಿ ಹೇಳುತ್ತಾನೆ. ಇಂತಹ ಸೀಜನ್‌ನಲ್ಲಿ ಮಳೆ ಬಂದರೆ ರಾಗಿ ಬರುತ್ತದೆ. ಈ ಜಮೀನಿನಲ್ಲಿ ಇಷ್ಟು ಬೆಳೆ ಬರುತ್ತದೆ. ಥೈಲ್ಯಾಂಡ್‌ನಲ್ಲಿ ಇಷ್ಟು ಬೆಳೆ ಇರುತ್ತದೆ. ವೆಟ್‌ಲ್ಯಾಂಡ್‌ನಲ್ಲಿ ಇಷ್ಟು ಬೆಳೆ ಇರುತ್ತದೆ. ನೀವು ನಿಮ್ಮ ಅಧಿಕಾರಿಗಳಿಗೆ ಕೇಳಿಬಿಡಿ; ಒಂದು ಕಾರ್, ಮುಂದೆ ಒಂದು ಜೀಪ್, ನಾಲ್ಕು ಜನ ಸ್ಟೆನೋ ಟೈಪಿಸ್ಟ್ ಇಟ್ಟುಕೊಂಡು ಒಂದು ವಾರ ಟೈಪ್ ಮಾಡಿಕೊಂಡು ಎಲ್ಲಾ ಆ ಪೇಪರ್‌ಗಳನ್ನು ತೆಗೆದುಕೊಂಡು ರಾಗಿ ಬೆಳೆಸುವ ಬಗ್ಗೆ ತಿಳಿಸುವುದಕ್ಕೆ ಅವರುಗಳು ಒಂದು ವಾರ ತೆಗೆದುಕೊಳ್ಳುತ್ತಾರೆ. ಅಧ್ಯಕ್ಷರೆ, ಒಂದು ಸ್ಮಾಲ್ ಎಕ್ಸಾಂಪಲ್ ಹೇಳುತ್ತೇನೆ, ಒಬ್ಬ ಅಡ್ವೋಕೇಟ್ ಇದ್ದಾನೆ ಯಾರೋ ಒಬ್ಬ ಗ್ರಾಮದವನು ಅವನ ಹತ್ತಿರ ಹೋಗಿ ಸ್ವಾಮಿ ನಾವಿಬ್ಬರೂ ಸೇರಿ ಕೇಸ್ ಹಾಕಿದರೆ, ಕೇಸ್ ಮುಗಿಯುವುದಕ್ಕೆ ಎಷ್ಟು ದಿವಸವಾಗುತ್ತದೆ, ಎಂದು ಕೇಳಿದರೆ ಆಗ ವಕೀಲನು ಹೇಳುತ್ತಾನೆ ನನಗೆ ಎರಡು ದಿವಸಗಳಾಗುತ್ತದೆ, ನಿಮಗೆ 20 ವರ್ಷಗಳಾಗುತ್ತದೆ ಎಂದು ಹೇಳಿದರು. ಅವನು ಕೇಸ್ ಮುಗಿಯುವುದಕ್ಕೆ ಎಷ್ಟು ದಿನ ಎಂದು ಕೇಳಿದರೆ ನನಗೆ ಎರಡು ದಿವಸ, ನಿಮಗೆ 20 ವರ್ಷ ಆಗುತ್ತದೆ ಎಂದು ಹೇಳುತ್ತಾನೆ. ಹಾಗಾದರೆ ನಾವು ಏನಾದರೂ ಅಪ್ಪಿತಪ್ಪಿ ಹೋಗಿ ಸಿ.ಎಂ. ಹತ್ತಿರ ಒಂದು ಸೈನ್ ತೆಗೆದುಕೊಂಡು ಇವನನ್ನು ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರೆ ನಮ್ಮ ಶಾಸಕರುಗಳಿಗೆ ಎರಡು ನಿಮಿಷ ಆದರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳಿಗೆ 20 ವರ್ಷಗಳು ಬೇಕು.

That is the administration in this Karnataka Government. ಕೇಳುವವರು ಇಲ್ಲ, ಮುಖ್ಯಮಂತ್ರಿಗಳು ಸೈನ್ ಮಾಡಿ ಕೊಟ್ಟಿದ್ದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಮಿನಿಮಮ್ ಮೂರರಿಂದ ಆರು ತಿಂಗಳು, ಆಗುತ್ತದೆಯೇ ಇಲ್ಲವೇ ಎಂಬ ವಿಷಯ ತಿಳಿಸಲಿಕ್ಕೆ ಮಾತ್ರ, ಆಮೇಲೆ ಅದು ಆಗುತ್ತದೆಯೋ ಇಲ್ಲವೋ ಎನ್ನುವುದು ಸೆಕೆಂಡರಿ. ಇಂತಹ ಸಿಚ್ಯುಯೇಷನ್‌ನಲ್ಲಿ ಟೂರಿಸಮ್ ಅಂಡ್ ಡೆವಲಪ್‌ಮೆಂಟ್ ಅನ್ನು ಹೇಗೆ ಡೆವಲಪ್ ಮಾಡುತ್ತೀರಿ? 1000 ಕೋಟಿ ರೂಪಾಯಿಗಳ ಫಂಡ್ ವಿಶ್ವಬ್ಯಾಂಕ್ ಮತ್ತು ಕೇಂದ್ರ ಸರ್ಕಾರದಿಂದ ಬರುತ್ತದೆಯೇ? ಈ ಬಗ್ಗೆ ಪ್ರವಾಸೋದ್ಯಮ ಸಚಿವರು ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದರೊಂದಿಗೆ ಸುಮಾರು 350 ಕೋಟಿ ರೂಪಾಯಿ ಖರ್ಚು ಮಾಡಿ ಕೋಲಾರದಲ್ಲಿ ಗೋಲ್ಡನ್ ಸಫಾರಿ ಮಾಡೋಣವೆಂದು

ಹೇಳಿದ್ದಾರೆ. ನಮಗೆ 350 ಕೋಟಿ ರೂಪಾಯಿಗಳು ಬೇಡ. ಕನಿಷ್ಠ 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಗಾರ್ಡನ್ ಆದರೂ ಮಾಡಿಕೊಡಿ. ಟೂರಿಸಮ್ ಅಂಡ್ ಡೆವಲಪ್‌ಮೆಂಟ್‌ನಿಂದ ಒಂದು ಗಾರ್ಡನ್ ಆಗಿದೆಯೆಂದು ಜನಕ್ಕೆ ಗೊತ್ತಾಗುತ್ತದೆ. You must improve. ಹಂಪಿಗೆ ಬಣ್ಣ ಬಳಿಯಲಿಕ್ಕೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಕಲರ್‌ಗಳನ್ನು ಬದಲಾವಣೆ ಮಾಡಬೇಕು ಏಕೆಂದರೆ ಅವೆಲ್ಲಾ ಪ್ರವಾಸಿ ಸ್ಥಳಗಳು. How to improve; how to develop? ಯಾವ್ಯಾವ ಜಾಗಗಳನ್ನು ಡೆವಲಪ್ ಮಾಡಬೇಕು. ಬೆಂಗಳೂರು, ಮೈಸೂರಿಗೆ ಏನೇನು ಫೆಸಿಲಿಟೀಸ್ ಕೊಟ್ಟು ಅಲ್ಲಿ ಟೂರಿಸಮ್ ಮಾಡಬೇಕು. ಆ ಪ್ಯಾಲೆಸ್‌ನೆಲ್ಲಾ ಎಷ್ಟು ಅಭಿವೃದ್ಧಿಗೊಳಿಸಬೇಕು. ಹೊಸ ಹೊಸ ಸ್ಕೀಮ್‌ಗಳನ್ನು ಎಲ್ಲೆಲ್ಲಿ ಮಾಡಬೇಕು. Which is the right place, correct place, ಎಂಬ ಬಗ್ಗೆ ಮಾಹಿತಿ ಕೊಡಬೇಕು. No.2. Municipal Administration Minister unfortunately is not here. ಈಗ ನಾನು ಯಾರಿಗೆ ಹೇಳಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ಹಾಗಾಗಿ ನಾನು ಸಭಾಧ್ಯಕ್ಷರ ಬಳಿ ಹತ್ತು ನಿಮಿಷದೊಳಗೆ ಮಾತನಾಡುತ್ತೇನೆಂದು ಹೇಳಿದೆ Municipal Administration comes under Urban Development Department. ಈಗ ಅರ್ಬನ್ ಡೆವಲಪ್‌ಮೆಂಟ್ ಪರಿಸ್ಥಿತಿ ಹೇಗಿದೆಯೆಂದರೆ ಹೆಸರಿಗಷ್ಟೇ ಬೆಂಗಳೂರು ನಗರ. Wherever you see the places, or, roads, they are dirty, cleanliness is not maintained. Even where I am staying, near my house in Bangalore, ಈ ರೋಡ್ ಕ್ಲೀನಿಂಗ್ ಮಾಡಿ ಎಂದು ಹೇಳಿ ಒಂದು ವರ್ಷವಾಗಿದೆ, ಕಾರ್ಪೋರೇಷನ್‌ಗೆ ಟ್ಯಾಕ್ಸ್ ಕಟ್ಟುತ್ತಿದ್ದೇವೆ; they have not done it. ಈಗ ಹೇಳಿದರೆ ಮಳೆ ಬರುತ್ತಿದೆ ಎನ್ನುತ್ತಾರೆ ಸಮ್ಮರ್ ಬಂದರೆ ಬಹಳ ಬಿಸಿಲು ಆಗಿದೆಯೆಂದು ಹೇಳುತ್ತಾರೆ. ಹಾಗಾದರೆ ಇವರಿಗೆ ಯಾವಾಗ ಕೇಳುವುದು? What is the development done by the Urban Development Department. What are they doing? Only looting. ಈಗ ಸಿಟಿ ಕಡೆ ಮುನಿಸಿಪಾಲಿಟಿಯನ್ನು ತೆಗೆದುಕೊಳ್ಳೋಣ throughout of Karnataka, ಹೊಸದಾಗಿ ಇವರು ಒಂದು ಮುನಿಸಿಪಾಲಿಟಿ ರೀಫಾರ್ಮ್ಸ್ ಸೆಲ್ ಅನ್ನು ಮಾಡಿದ್ದಾರೆ. What is the meaning of the Municipality Reforms Cell? ಇದರಲ್ಲಿ ಪ್ಲಾನಿಂಗ್ ಮಾಡಬೇಕು ಅವರು ಖರ್ಚು ಮಾಡಿದನ್ನು ಮಾನಿಟರಿ ಮಾಡಬೇಕು; ಆ ಮುನಿಸಿಪಾಲಿಟಿಗೆ assistance ಮಾಡಿಕೊಡಬೇಕು. ಈ ವ್ಯವಸ್ಥೆಗಳನ್ನೆಲ್ಲಾ ಮಾಡಿಕೊಡಲಿಕ್ಕೆ ಇಪ್ಪತ್ತು ಜನಗಳ ಒಂದು ಟೀಮ್ ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿರುವ ದಂಡಪಿಂಡಗಳನ್ನೆಲ್ಲಾ ಅಲ್ಲಿ ಹಾಕಿದ್ದಾರೆ. ಈ ಪೀಡೆಗಳೆಲ್ಲಾ ಅಲ್ಲೇ ಕುಳಿತಿರುತ್ತಾರೆ. These are all involvement of the bureaucrats. No doubt. ಏನೋ ಮಹಾನುಬಾವರ ತರಹ ಒಂದು ರೀಫಾರ್ಮ್ಸ್ ಮಾಡುತ್ತೇವೆಂದು ಅಲ್ಲಿ ಕುಳಿತುಕೊಂಡು ಯಾರು ಐದು ವರ್ಷ, ಎಂಟು ವರ್ಷದ ಮೇಲೆ ಅಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆಯೋ ಅವರ ವರ್ಗಾವಣೆ ಮಾಡಲಿಕ್ಕೆ ಇಷ್ಟು ಎಂದು ಪಟ್ಟಿಯನ್ನು ಮಾಡಿಕೊಂಡಿದ್ದಾರೆ. ನಿಮ್ಮ ಹೆಸರನ್ನು ಪಟ್ಟಿಯಲ್ಲಿ ಹಾಕುತ್ತೇವೆಂದರೆ ಅವರು ಐವತ್ತು ಸಾವಿರ ರೂ. ಕೊಡಬೇಕು. ಇನ್ನೊಬ್ಬರು ಹೋದರೆ ಇಪ್ಪತ್ತೈದು ಸಾವಿರ ರೂ. ಕೊಡಬೇಕು. ಹೀಗೆ ರೇಟ್ಸ್ ಫಿಕ್ಸ್ ಮಾಡಿಕೊಂಡು ತಿಂದುಕೊಂಡಿರಲಿಕ್ಕೆ ಮುನಿಸಿಪಾಲಿಟಿ ರೀಫಾರ್ಮ್ಸ್ ಸೆಲ್ ಅನ್ನು ಮಾಡಿದ್ದಾರೆ. ಇಂತಹ ಅಧಿಕಾರಿಗಳಿಗೆ ಸಂಬಂಧಪಟ್ಟ ಸಚಿವರು ಶಿಕ್ಷೆಯನ್ನು ವಿಧಿಸಬೇಕು. ಸಂಬಂಧಪಟ್ಟ ಸಚಿವರ ಗತಿ ಹೇಗಿದೆ ನೋಡಿ, ಪೋನ್ ಮಾಡಿ A Minister is

speaking to the Managing Director of K.U.W.S. This has happened just two days back. Which posting? Class IV. What is his designation? ವಾಲ್ವ್ ಓಪನ್ ಮಾಡುವ ಹುದ್ದೆಯಲ್ಲಿರುವಂತಹ ವ್ಯಕ್ತಿಯನ್ನು ವರ್ಗಾವಣೆ ಮಾಡಿದ್ದಾರೆ. ಆತ ಏನೂ ತಪ್ಪು ಮಾಡಿಲ್ಲ, ಸುಮಾರು ವರ್ಷ ಅಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾನೆಂಬ ಕಾರಣಕ್ಕೆ ವರ್ಗಾವಣೆ ಮಾಡಿದ್ದಾರೆ. Municipal Director, he can sit for more than three or four years, and enjoy. But ಒಬ್ಬ ವಾಲ್ವ್ ಮ್ಯಾನ್ 10–15 ವರ್ಷದ ಮೇಲೆ ಅಲ್ಲೇ ಸೇವೆ ಸಲ್ಲಿಸುತ್ತಿದ್ದನೆಂದು ಅವನನ್ನು ಶಿಫ್ಟ್ ಮಾಡಿದ್ದಾರೆ. ಆ ಊರಿನಲ್ಲಿರುವ ಜನಗಳೆಲ್ಲಾ ನನ್ನ ಹತ್ತಿರ ಬಂದು ಅವನು ಬಹಳ ಒಳ್ಳೆಯ ಕೆಲಸ ಮಾಡುತ್ತಾನೆ. ಒಳ್ಳೆಯ ವ್ಯಕ್ತಿ, ಆತನನ್ನು ಯಾಕೆ ತಾವು ಶಿಫ್ಟ್ ಮಾಡುತ್ತೀರೆಂದು ಕೇಳುತ್ತಾರೆ. ನಾನು ಸೈಲೆಂಟ್ ಆದರೆ People will think bad on me. ಆಗ ನಾನು ಬಂದು ನನ್ನ ಮೇಲೆ ತಪ್ಪು ಭಾವನೆ ಬರಬಾರದು. ಹಾಗಾಗಿ ಆತನಿಗೆ ಸಹಾಯ ಮಾಡಿ, ಆತ ಒಬ್ಬ ಸಾಮಾನ್ಯ ಕ್ಲಾಸ್ ಪೋರ್ ವಾಲ್ವ್ ಮ್ಯಾನ್, ಅವನನ್ನು ಶಿಫ್ಟ್ ಮಾಡದೇ ಅಲ್ಲಿಯೇ ರೀಟೇನ್ ಮಾಡಿ ಎಂದು ಆ ಎಂ.ಡಿ. ಹಾಗೂ ಸಂಬಂಧಪಟ್ಟ ಸಚಿವರಿಗೂ ಸಹ ಹೇಳಿದೆ. ಆಯಿತು ಮಾಡೋಣ ಎಂದರೂ ಮಾಡಿಲ್ಲ, I brought to the notice of the Minister ಮಿನಿಸ್ಟರ್ ಪೋನ್ ಮಾಡಿ ಬಿಡಪ್ಪ ಎಂದು ಹೇಳಿದರು. The very next day that Managing Director spoke to that person, who is in charge in the district. ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಎಲ್ಲಾ ಯೂಸ್ ಮಾಡಿದರೆ ನಾನು ಆತನನ್ನು suspend ಮಾಡಿಬಿಡುತ್ತೇನೆ, ತಕ್ಷಣ ಹೋಗಿ ಡ್ಯೂಟಿ ರಿಪೋರ್ಟ ಮಾಡಿಕೊಳ್ಳಬೇಕೆಂದು ಹೇಳಿದರು. I kept silent. The boy has joined there. ಯಾವ ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಯೂಸ್ ಮಾಡಿಕೊಂಡು ರಿಟೈರ್ಡ್ ಆಗಿದ್ದರೂ ಸಹ ಸರ್ಕಾರದಲ್ಲಿ ಸೇವೆಯನ್ನು ಎಕ್ಸ್‌ಟೆನ್ಷನ್ ಮಾಡಿಕೊಂಡು ತಿನ್ನುತ್ತಿದ್ದಾನೆ, ಈ ಪಿಂಡ ಆ ಬಡವನಿಗೆ ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಯೂಸ್ ಮಾಡಬಾರದು ಎಂದು. What a shame, in this Government! What a shame! ರಿಟೈರ್ಡ್ ಆದಮೇಲೆ ಈ ವ್ಯಕ್ತಿಗೆ ಪೊಲಿಟಿಕಲ್ ಬ್ಯಾಕ್‌ಗ್ರೌಂಡ್ ಮೇಲೆ ಈತನಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿರುವುದು. ಏನು ಇವರು ಮಹಾನುಭಾವನೇ ! ಇವನು ಮಾಡುತ್ತಿರುವ ಕೆಲಸ ಅವನು ಏನಾದರೂ ತೀರಿ ಹೋಗಿಬಿಟ್ಟರೆ ನಾಳೆಯೇ ಡಿಪಾರ್ಟಮೆಂಟ್ ಅನ್ನು ಕ್ಲೋಸ್ ಮಾಡಬೇಕೆ? ಇವರನ್ನು ಬಿಟ್ಟರೆ ಬೇರೆ ಯಾರೂ ಸಹ ಇಲ್ಲ. What an administration! ಮಿನಿಸ್ಟರ್ ಹೇಳಿಯೂ ಸಹ ಆ ವ್ಯಕ್ತಿಯ ವರ್ಗಾವಣೆಯನ್ನು ಮಾಡಲಿಲ್ಲ. ಈಗ ನಾನು ಮಿನಿಸ್ಟರ್‌ಗೆ ಏನು ಹೇಳಬಹುದು: ಸ್ವಾಮಿ, ತಾವು ಮಂತ್ರಿಗಳಾಗಿದ್ದೀರಿ. ಕೇವಲ ಒಬ್ಬ ಕ್ಲಾಸ್ ಪೋರ್ ವ್ಯಕ್ತಿಯನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ ನಿಮಗೆ ಕೆಪ್ಯಾಸಿಟಿ ಇಲ್ಲವೆಂದರೆ, ನಾವು ಏನು ಡಿಮ್ಯಾಂಡ್‌ಗಳನ್ನು ತಂದು ತಮ್ಮ ಮುಂದೆ ಇಡುವುದು? After all, you are not able to retain a Class IV. Superior power is held by the Managing Director, than you. Is it administration in this Karnataka Government? ಇದನ್ನು ನಾವು ಕೇಳಬಾರದು. ಹೇಳಬಾರದು ಹಾಗೇನಾದರೂ ಕೇಳಿಬಿಟ್ಟರೆ ವಿರೋಧಪಕ್ಷದವರ ಕಡೆಯವರೆಲ್ಲಾ ಸುಮ್ಮನೆ ಕೂಗಾಡುತ್ತಾರೆ. ನಾವು ಮಹಾನ್‌ಗಳು, ಸರಿಯಾಗಿ ಕೆಲಸ ಮಾಡಿದ್ದೇವೆ ಅನ್ನುತ್ತಾರೆ. It is practical.

ಅಧ್ಯಕ್ಷರೆ, ಇಂತಹ ಸ್ಥಿತಿಯಲ್ಲಿ ಮುನಿಸಿಪಾಲಿಟಿ ಅಧಿಕಾರಿಗಳು, a Secretary. He is the Head of the Department. He is having certain powers. That is the Secretary's power for administration. Without any Cabinet decision, without Government permission, he is shifting the powers to the Director to do the work. It is a big lapse in this Government. ಇದು ಸರಿಯಿಲ್ಲ. ಒಂದು ಅಧಿಕಾರಿಯ ಸ್ಥಾನದಲ್ಲಿರುವವರು ಅವರ ಕೆಲಸವನ್ನು ಅವರು ಮಾಡಲಿಕ್ಕೆ ಸರ್ಕಾರದ ಪರ್ಮಿಷನ್ ಕೇಳಲಿಲ್ಲ. ಕ್ಯಾಬಿನೆಟ್ ಡಿಸೀಷನ್ ತೆಗೆದುಕೊಂಡಿಲ್ಲ. ಈ ಸೆಕ್ರೆಟರಿಯ ಪವರ್ ಶಿಫ್ಟ್ ಮಾಡಲಿಕ್ಕೆ ಏನು ಅಧಿಕಾರವಿದೆ? ತಕ್ಷಣ you must suspend the Secretary. ಆದರೆ ಮೊದಲು ನಾವು ಅಷ್ಟು ಕೆಪ್ಯಾಸಿಟಿ ಇರುವ ಸರ್ಕಾರವೆಂದು ನೀವು ಅರ್ಥ ಮಾಡಿಕೊಳ್ಳಬೇಕು. ಮಾಡಲಿಕ್ಕಾಗುವುದಿಲ್ಲ. ಏನು ಕಷ್ಟದ ಪರಿಸ್ಥಿತಿಯಿದೆ? You have two powers. Janata Dal Power. Congress Power. ಜೊತೆಗೆ ಬೇಕಾದರೆ ಬಿ.ಜೆ.ಪಿ.ಯ ಪವರ್ ಕೂಡ ತೆಗೆದುಕೊಳ್ಳಿ. ಆ ದಿನವಾದರೂ ಯಾರಾದರೂ ಒಬ್ಬರು ಒಬ್ಬ ಫ್ಯೂನ್ ಅನ್ನು ಬೇಕಾದರೆ ಸಸ್ಪೆಂಡ್ ಮಾಡಲಿಕ್ಕಾಗುತ್ತದೆಯೇ ನೋಡಿ Peon, you suspend him over the phone. Ordinary person, you will suspend him over phone. ನಿಮ್ಮ ಜೋರು, ಸ್ಟೈಲ್, ಪವರ್‌ಗಳನ್ನು ತೋರಿಸುವುದು ಎಲ್ಲಿ ಅಂದರೆ ಸಾಮಾನ್ಯ ವ್ಯಕ್ತಿಯ ಮೇಲೆ, A Minister should show his power against the bureaucrats. Today, they are the feudal lords, dictators, extra-constitutional methods, powers which they are using and spoiling your administration. ನಿಜವಾಗಿ ಎಷ್ಟು ಗೊಂದಲಗಳಿವೆಯೆಂದರೆ, ಅಷ್ಟಿಷ್ಟಲ್ಲ, ವಿಶ್ವಬ್ಯಾಂಕ್, ಐ.ಡಿ. ಸಮಿತಿಯವರು, ಏಷಿಯನ್ ಡೆವಲಪ್ಮೆಂಟ್ ಬ್ಯಾಂಕ್‌ಗಳು ಈ ಮುನಿಸಿಪಾಲಿಟಿಗೆ ಹಣವನ್ನು ಕೊಡುತ್ತಾರೆ. ಆ ಡೈರೆಕ್ಟರ್ಸ್ ಏನು ಮಾಡುತ್ತಾರೆಂದರೆ, ಇಲ್ಲ, ಗಲೀಜುಗಳನ್ನು ಕ್ಲೀನ್ ಮಾಡುವುದರ ಬಗ್ಗೆ, ಅದಕ್ಕೆ ಎನ್‌ವೈರನಮೆಂಟ್ ಅನ್ನು ಹೇಗೆ ಅಭಿವೃದ್ಧಿಗೊಳಿಸಬೇಕು ಎಂಬ ಬಗ್ಗೆ ಇವರು ಇಂಡಿಯಾ ದೇಶದ ಕರ್ನಾಟಕ ರಾಜ್ಯದ ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಮೀಟಿಂಗ್ ಮಾಡುತ್ತಾರೆ. ಕೇವಲ ಕಸ ಕ್ಲೀನ್ ಮಾಡುವ ಬಗ್ಗೆ ಮೀಟಿಂಗ್ ಮಾಡಲಿಕ್ಕೆ ನಿಮಗೆ ಫೈವ್ ಸ್ಟಾರ್ ಹೋಟೆಲ್‌ಗಳು ಬೇಕೇ? ಕಳೆದ ಎರಡು ವರ್ಷಗಳಿಂದ ಎಷ್ಟು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಈ ಅಧಿಕಾರಿಗಳು ಕುಳಿತುಕೊಂಡು ಮೀಟಿಂಗ್ ಮಾಡಿದ್ದಾರೆ ಎಷ್ಟು ಖರ್ಚು ಮಾಡಿದ್ದಾರೆ ಅದಕ್ಕೆ ಈಕ್ವಲ್ ಆಗಿ ಎಷ್ಟು ಡೆವಲಪ್‌ಮೆಂಟ್ ಮಾಡಿದ್ದಾರೆ ಎಂಬುದನ್ನು ತೋರಿಸಬೇಕು. ಹಾಗೆ ತೋರಿಸಿಲ್ಲ ಅಂದರೆ the Minister should take straightaway, issue show-cause notice and suspend. ಏನ್ರಿ ಮಹಾ ಇವರು? What? Because of your fearlessness, they have taken on for a ride.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ಆಶ್ಚರ್ಯವಾಗುತ್ತಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಪಕ್ಕದಲ್ಲಿ ಇರಬೇಕಾದರೆ ಮಾನ್ಯ ರಾಜೇಂದ್ರನ್‌ರವರು ಇಷ್ಟೊಂದು ಇಂಗ್ಲಿಷ್ ಹೊಡೆದರೆ, ಹೇಗೆ ಬೇರೆ ಯಾರಾದರೂ ಮಾತನಾಡಿದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಎದ್ದೆದ್ದು ಹೇಳುತ್ತಿರುತ್ತಾರೆ. ಫ್ಯೂಡಲ್‌ಲಾರ್ಡ್ಸ್, ಬ್ಯೂರೋಕ್ರಾಟ್ಸ್ ಬಗ್ಗೆ ಎಷ್ಟು ಚೆನ್ನಾಗಿ ಕೇಳುತ್ತಿದ್ದಾರೆ ಮಾನ್ಯ ವಾಟಾಳ್ ನಾಗರಾಜ್‌ರವರು ಎಷ್ಟು ಕಿವಿ ಕೊಟ್ಟು ಕೇಳುತ್ತಿದ್ದಾರೆ ಅವರ ಇಂಗ್ಲಿಷನ್ನೋ, ಕನ್ನಡವನ್ನೋ;

ಶ್ರೀ ಎಸ್.ರಾಜೇಂದ್ರನ್: ತಮಾಷೆಗೆ ಒಂದು ಜೋಕ್ ಇರಬೇಕು ಅಂತ ಮಾನ್ಯ ಸಚಿವರು ಮಾತನಾಡಿದ್ದು ಅಲ್ಲವೇ? ನಿಜವಾಗಿಯೂ, ಈಗ ಮಾರ್ಕೆಟ್‌ಗೆ ತಾವು ಹೋಗುತ್ತೀರಿ ಮಂತ್ರಿಗಳೇ, ಫ್ರೂಟ್ಸ್ ಅಂಗಡಿಗೆ ಹೋಗಿ ಅಪಲ್‌ಗೆ ಕನ್ನಡದಲ್ಲಿ ಏನಂತ ಕೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಸೇಬು ಕೊಡಿ ಅಂತ ಕೇಳುತ್ತೇವೆ.

ಶ್ರೀ ಎಸ್.ರಾಜೇಂದ್ರನ್: ಸೇಬು ಅಂತ ಕೇಳಿದ್ದೀರಾ? ಒಂದು ಡಜನ್ ಅಪಲ್ ಕೊಡಿ ಅಂತ ತಾನೇ ಕೇಳುತ್ತೀರಿ? ಪಕ್ಕದವರು ಹೇಳಿದ ಮೇಲೆ ಸೇಬು ಅಂತ ಹೇಳುತ್ತಿದ್ದೀರಿ. ಅದಕ್ಕೆ ಮೊದಲು ನೀವು ಏನು ಹೇಳಬೇಕೆಂದು ಹುಡುಕುತ್ತಾ ಇದ್ರಿ. ಏನು ಅದು ಪದ ಅಂತ. ನಾವೆಲ್ಲಾ ಹೋಗಿ ಫ್ರೂಟ್ಸ್ ಅಂಗಡಿಯಲ್ಲಿ ಸ್ವಾಮಿ ಒಂದು ಕೆ.ಜಿ. ಸೇಬು ಕೊಡಿ ಅಂತ ಕೇಳುವುದನ್ನು ನಾನು ಸತ್ಯವಾಗಿಯೂ ನೋಡಿಲ್ಲ. ಇಲ್ಲಾ, ಇಲ್ಲಾ ನಮ್ಮ ಮಾನ್ಯ ವಾಟಾಳ್ ನಾಗರಾಜ್ ಸಾಹೇಬರು ಏನಾದರೂ ಕೇಳಿರಬಹುದು. 80 ಪರ್ಸೆಂಟ್ ಪೀಪಲ್ ಒಂದು ಕೆ.ಜಿ ಅಪಲ್ ಅಂತ ಹೇಳಿಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನಾವು ಹೋಗಿ ಅಪಲ್ ಅಂತ ಕೇಳಿದರೆ, ಕೋಳಿ ಕೊಡುತ್ತಾರೆ ಆದ್ದರಿಂದ ನಾವು ಕೇಳುವುದು ಸೇಬು ಅಂತಲೇ.

ಶ್ರೀ ಎಸ್.ರಾಜೇಂದ್ರನ್: ಹಾಗಾದರೆ ಏನು ಮಾಡಬೇಕೆಂದರೆ, ಕೋಳಿ ಕೊಡಿ ಅಂತ ಕೇಳಿದರೆ, ಸೇಬು ಕೊಡುತ್ತಾರೆ. ನಿರ್ಮಲ್ ನಗರ್ ಅಂತ ಒಂದು ಇದೆ. ಈ ನಿರ್ಮಲ್ ನಗರ್ ಟಾಯ್‌ಲೇಟ್ ವ್ಯಾಲ್ಯೂ ಎಷ್ಟು ಅಂದರೆ ಮಿನಿಮಮ್ 10 ಲಕ್ಷ ರೂ. ಟಾಯ್‌ಲೇಟ್‌ಗೆ? ಅಲ್ಲಿ ಗೋಲ್ಡನ್ ಪಾತ್ರೆಯಲ್ಲಿ ನೀರು ಹಾಕಿಕೊಳ್ಳುವುದಕ್ಕೆ ಇಟ್ಟಿದ್ದಾರೋ ಗೊತ್ತಿಲ್ಲ, ಅದರ ಕಾಸ್ಟ್ ರೂ. 10 ಲಕ್ಷ ಈ ಟಾಯ್‌ಲೇಟ್‌ಗಳನ್ನು ಎಲ್ಲಿ ಸೆಲೆಕ್ಟ್ ಮಾಡಿದ್ದಾರೆಂದರೆ ಇವರ ಭಾಷೆಯಲ್ಲಿ ಕೇಳಿ ಅಧಿಕಾರಿಗಳನ್ನು Yes, yes. We have to do it for the poorest people, poor among the poorest. ಸ್ಟೈಲ್‌ಗಳು ಎಲ್ಲಾ ಚೆನ್ನಾಗಿದೆ. ಈ ಟಾಯ್‌ಲೇಟ್ ಎಲ್ಲಿ ಮಾಡಿದ್ದಾರೆಂದರೆ ಪಾರ್ಕ್ ಒಳಗಡೆ. ಬೆಂಚ್ ಕಾರ್‌ನಲ್ಲಿ ಓಡಾಡುವವನಿಗಾ ಅದು? ಸಾಮಾನ್ಯ ಮನುಷ್ಯ ಸ್ಲಮ್‌ನಲ್ಲಿರುವವನಿಗೆ ಟಾಯ್‌ಲೇಟ್ ಮಾಡಿದ್ದೀರಾ? ಅವನಿಗೆ ಅಲ್ಲಿ ನಿರ್ಮಲ್ ನಗರ್ ಮಾಡಿದ್ದಾರಾ? ಎಷ್ಟು ಸಂಬಳ ಇವರುಗಳಿಗೆ, ಸೂಪರ್‌ವೈಜ್ ಮಾಡುವವರಿಗೆ 10 ಸಾವಿರ ರೂ. ಪ್ಲಾನಿಂಗ್ ಮಾಡಿ ಕೊಡುವವನಿಗೆ 25 ಸಾವಿರ, ರೂ. ಓವರ್ ಅಲ್ ಆಗಿ ಪ್ರಾಜೆಕ್ಟ್ ರಿಪೋರ್ಟ್ ಮಾಡುವವನಿಗೆ 30 ಸಾವಿರ ರೂ. ಕೇವಲ ಒಂದು ಟಾಯ್‌ಲೇಟ್‌ಗೆ ಪ್ಲಾನಿಂಗ್ ಮಾಡುವುದಕ್ಕೆ! ಇದರ ಬೆನಿಫಿಟ್ ಏನಿದೆ ಅದನ್ನು ಸರಿ ಮಾಡಿಲ್ಲ, ಇವರು ಹೇಳುತ್ತಾರೆ ಮುನಿಸಿಪಾಲಿಟಿ ರಿಫಾರ್ಮ್‌ಸೆಲ್ ಅಂತ. ರಿಫಾರ್ಮ್ ಅಲ್ಲ; ಅಧಿಕಾರಿಗಳ ಲೆವೆಲ್‌ನಲ್ಲಿ ದುರುಪಯೋಗ ಆಗುತ್ತಿದೆ. ಒಂದು ಕಮೀಷನರ್ ಸರಿ ಇಲ್ಲ ಇವನು ಫ್ರಾಡ್, ಲೂಟಿ ಮಾಡಿ ತಿನ್ನುವವನು, ಇಷ್ಟೆಲ್ಲಾ ನಾನು ಸರ್ಕಾರಕ್ಕೆ ಹೇಳಿದರೂ ಸರ್ಕಾರ ಅವನ ಮೇಲೆ ಕ್ರಮ ತೆಗೆದುಕೊಂಡೇ ಇಲ್ಲ. ಕೊನೆಗೆ ಅವನು ಲೋಕಾಯುಕ್ತದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ. ನಾನು ಎಷ್ಟೇ ಹೇಳಿದರೂ, ಈ ಅಧಿಕಾರಿಗಳು ಕೇಳುವುದು ಏನೆಂದರೆ ಹೌದಾ, ಹಾಗೆ ಮಾಡಿದ್ದಾನಾ, ನಾನು ಏನು ಸಿನಿಮಾ ಕ್ಯಾಮರಾ ಇಟ್ಟು ಕೊಂಡಿದ್ದೇನೆಯೇ, ಫಿಲಂ ಡೈರೆಕ್ಟರೇ, ಫಿಲಂ ಫೀಲ್ಡ್‌ನಲ್ಲಿ ಇದ್ದಂತೆ ಒಂದೊಂದು ತೆಗೆದುಕೊಂಡು ಬಂದು ಹಾಕುವುದಕ್ಕೆ? ಸಾರ್ ಐ.ಡಿ. ಸಮಿತಿ ಇದೆ. There is a rule in that. D.C. is the Chairman. ಅದರಲ್ಲಿ

MLA is a Member. President is a Member and the concerned Executive Officer, BESCOM is a Member. KUWS&DB is a Member. ಇಷ್ಟೆಲ್ಲಾ ಮೆಂಬರ್‌ಗಳು ಇದ್ದಾರೆ. ಒಂದು ಮುನಿಸಿಪಾಲಿಟಿಯಲ್ಲಿ ಐ.ಡಿ.ಸೆಲ್‌ದು ಪ್ಲಾನ್ ಮಾಡುತ್ತಾನೆ. ಇದನ್ನು ಹೀಗೆ ಹೀಗೆ ಮಾಡಬೇಕು ಅಂತ ಇದೆ. ಅವನ ಜೊತೆಗೆ ಕಮೀಷನರ್ ಕುಳಿತುಕೊಂಡಿರುತ್ತಾನೆ. This is against the rules and regulations ಇದು ಸರಿ ಇಲ್ಲ. ನಾನು ಡೈರೆಕ್ಟರ್‌ಗೆ ಹೇಳಿದರೆ ಹಾಗೂ ಡಿ.ಸಿ. ಹೇಳಿದರೆ, ಹಾಗೆ ಮಾಡಿದರಾ, ಸರಿಪಡಿಸೋಣ ಬಿಡಿ. ಏನು ಸರಿಪಡಿಸುವುದು? You tell me. Where, how? ಐದೂವರೆ ಕೋಟಿ ರೂ. ಮುಗಿದ ಮೇಲೆ ಇವರಿಗೆ ನಾವು ಅರ್ಜಿ ಕೊಡಬೇಕು. ಅಂತಹ ಸಂದರ್ಭದಲ್ಲಿ ಚುನಾವಣೆ ಬಂದರೆ ನಮ್ಮ ಗತಿ ಮುಗಿದು ಹೋಗುತ್ತದೆ. So, they will put it in the dust-bin. Once again ADB backs ID Samithi..... ನಿಮ್ಮ ಬ್ಯೂರೋಕ್ರಾಟ್ಸ್ ಎಲ್ಲರನ್ನೂ ಒಂದು ಸಾರಿ ರೈಡ್ ಮಾಡಿ ಬಿಡಿ. ಅವರ ಹತ್ತಿರ ಇರುವ ಹಣ ಈ ಸರ್ಕಾರಕ್ಕೆ ಬಂದರೆ another 100 years we can develop. Yes. ಅವರ ಮನೆಗಳು ನೋಡಿ. Not less than Rs. 4 crore to 5 crores. ಎಲ್ಲಿಯಾದರೂ ಶಾಸಕರು ಒಳ್ಳೆಯ ಬಟ್ಟೆ ಹಾಕಿಕೊಂಡು ಬಂದರೆ ಹೊಡೆದಿದ್ದಾನಪ್ಪಾ, ಇವನ ಸ್ಟೈಲ್ ನೋಡಿ ಅನ್ನುತ್ತಾರೆ. ಶಾಸಕರುಗಳು ಸ್ವಲ್ಪ ಚೆನ್ನಾಗಿ ಹೋದರೆ, ಚೆನ್ನಾಗಿ ಹೊಡೆದಿದ್ದಾನೆ ಅಂತ ಕಾಣಿಸುತ್ತದೆ ಅನ್ನುತ್ತಾರೆ. ಮೊನ್ನೆ ನೋಡಿದ್ದೆ ಇವನನ್ನು, ಈಗ ನೋಡಿ ಅನ್ನುತ್ತಾರೆ. ಸುಮ್ಮನೆ ಇವರ ಮನೆಗಳನ್ನು ರೈಡ್ ಮಾಡಿಸಿ ನೋಡಿ, ಇವರ ಜಾತಕಗಳೆಲ್ಲಾ ಗೊತ್ತಾಗುತ್ತದೆ. ಗಟ್ಸ್ ಇದೆಯಾ ನಿಮ್ಮ ಸರ್ಕಾರಕ್ಕೆ? Do you have that guts? ಇಲ್ಲ. You are a parasite. You are defending them. ಸ್ಟೈಲ್ ಏನೆಂದರೆ ನಾವು ಸರ್ಕಾರ ನಡೆಸುವವರು. ಎಲ್ಲಿ ನಡೆಸುತ್ತೀರಿ? ಅವರು ಸರ್ಕಾರ ನಡೆಸುತ್ತಿದ್ದಾರೆ ನೀವು ರಬ್ಬರ್ ಸ್ಟ್ಯಾಂಪ್ ಆಗಿ ಕುಳಿತುಕೊಂಡಿದ್ದೀರಿ. Yes. No doubt. Practically, which I have seen. ಕಣ್ಣು ಮುಂದೆ ಲೂಟಿ ಮಾಡಿ ತಿನ್ನುತ್ತಿದ್ದಾನೆ. He has taken bribe. He is looting like anything, ಇದನ್ನು ನಾನು ಮಂತ್ರಿಗಳ ನೋಟೀಸ್‌ಗೆ ತೆಗೆದುಕೊಂಡು ಬಂದರೂ ಕಮೀಷನರ್ ಅನ್ನು ಇನ್ನೂ ಟ್ರಾನ್ಸ್‌ಫರ್ ಮಾಡಿಲ್ಲ, ನಾನು ಕೊನೆಗೆ ಲೋಕಾಯುಕ್ತ ಡಿಪಾರ್ಟ್‌ಮೆಂಟ್‌ಗೆ ಹೇಳಿ ಇವನನ್ನು ಟ್ರಾಪ್ ಮಾಡಿ ಅಂದರೆ... ಮಾನ್ಯ ಎಂ.ಪಿ. ಪ್ರಕಾಶ್ ಸಾಹೇಬರೇ, ಇದು ತಮ್ಮ ನೋಟೀಸ್‌ಗೆ ಸಾರ್, You must take note of this serious matter. Because, with pain how much I have struggled. I am telling this you should affreciate ಈ ಕಮೀಷನರ್ ಹೇಳುತ್ತಿದ್ದಾನೆ ಏಯ್ ಅವೆಲ್ಲಾ ಆಗುವುದಿಲ್ಲ ರೀ, 20 ಪರ್ಸೆಂಟ್ ಕೊಡಬೇಕು, 20 ಪರ್ಸೆಂಟ್‌ಗಿಂತ ಕಡಿಮೆ ನಾನು ತೆಗೆದುಕೊಳ್ಳುವುದಿಲ್ಲ ಸುಮ್ಮನೇ ಇರ್ರಿ, 50 ಎಲ್ಲಾ ಆಗುವುದಿಲ್ಲ 60 ಸಾವಿರ ತೆಗೆದುಕೊಂಡು ಬಂದು ಕೊಡಿ ಎಂದು ಹೇಳಿರುವುದನ್ನು ಲೋಕಾಯುಕ್ತದವರು ಹಾಗೆಯೇ ರೆಕಾರ್ಡ್ ಮಾಡಿದ್ದಾರೆ. ನೆಕ್ಸ್ಟ್ ಡೇ ಸಾರ್ ದುಡ್ಡು ತೆಗೆದುಕೊಂಡು ಬಂದಿದ್ದೇನೆ, ಎಲ್ಲಿ ಸಾರ್ ತೆಗೆದುಕೊಂಡು ಬರಬೇಕು, ಅಂದರೆ ಏಯ್ ಬೇಡ್ರಿ ಬೇಡ್ರಿ ಈಗ ಅಧ್ಯಕ್ಷರ ಚುನಾವಣೆ ನಡೆಯುತ್ತಿದೆ. ಅವನು ಗೆದ್ದುಬಿಟ್ಟಿದ್ದಾನೆ, ಪ್ರೆಸಿಡೆಂಟ್, ಎಕ್ಸ್–ಎಂ.ಎಲ್.ಎ. ಆಗಿರುವವನು; ಅವನು 50 ಸಾವಿರ ಕೊಡಲೇಬೇಕು ಅಂತ ಕೇಳುತ್ತಿದ್ದಾನೆ. ಇಲ್ಲಿ ಕೊಟ್ಟರೆ ಅವನು ತೆಗೆದುಕೊಂಡು ಬಿಡುತ್ತಾನೆ ಮನೆಗೆ ತೆಗೆದುಕೊಂಡು ಬಂದು

ಬಿಡಿ, ಎಂದು ಹೇಳುತ್ತಾನೆ. These are all recorded in the Lokayukta, just 10 to 15 days back. ಕೊನೆಗೆ ಕೊಡುವುದಕ್ಕೆ ಪ್ರಯತ್ನ ಮಾಡುವ ಟೈಮ್‌ನಲ್ಲಿ ಎಲ್ಲೋ ಸ್ವಲ್ಪ ಲೀಕೇಜ್ ಆಗಿ ಅವನು ಬಹಳ ಹುಷಾರ್, ಅವರ ಕಡೆ ಕೊಡು, ಇವರ ಕಡೆ ಕೊಡು ಅಂತ ಹೇಳಿಕೊಂಡು ಹಾಗೆಯೇ ಸ್ಟಾಪ್ ಆಯಿತು. But, these are all in the records. You must get back that record from the Lokayukta, Kolar, Find out the fact. ಇಂತಹ ಮುನಿಸಿಪಾಲಿಟಿಯನ್ನು ಏತಕ್ಕೆ ಸೂಪರ್‌ಸೀಡ್ ಮಾಡಬಾರದು? It is the people's money. ಅದರ ಜೊತೆಗೆ ಸಿಮೆಂಟ್ ರೋಡ್ ಹಾಕಬಾರದು, ಒಂದೊಂದು ಸಿಮೆಂಟ್ ರೋಡ್ ಹಾಕುವ ಟೈಮ್‌ನಲ್ಲಿ You see, in my place, ಒಂದೊಂದು ಅಧ್ಯಕ್ಷರ ಮನೆ not less than Rs. 2 crore to 3 crore ಆಗುತ್ತದೆ. ರೋಡ್ ಮಾಡುವುದು ಏನು ಸಿಮೆಂಟ್ ರೋಡ್, ಅಲ್ಲಿ ಮನೆ ಕಟ್ಟುತ್ತಾರೆ. ಟಾಕ್‌ನಲ್ಲಿ ರೋಡ್ ಆಗುವುದಿಲ್ಲವೇ? ಇದಕ್ಕೆ ಅಧಿಕಾರಿಗಳು ಹೇಳುವುದು ಏನು ಒಳ್ಳೆಯದು ರೀ ಸಿಮೆಂಟ್ ರೋಡು, ಬಹಳ ಒಳ್ಳೆಯದು, ಅಂತ ಅದು ಮೈಸೂರು ಮಹಾರಾಜ ಪ್ಯಾಲೇಸ್ ಮುಂದೆ ಹಾಕಿದರೆ ಒಳ್ಳೆಯದು, ಇಲ್ಲಿ ಅಲ್ಲ ಹಳ್ಳಿಯಲ್ಲಿ, ಗಲ್ಲಿಗಲ್ಲಿಗೆ ಸಿಮೆಂಟ್ ರೋಡ್ ಎಂದು ಹೇಳುವುದು ದೊಡ್ಡ ಮನೆಗಳನ್ನು ಕಟ್ಟುವುದು. ಇದನ್ನು ಡೆಪ್ಯುಟಿ ಕಮೀಷನರ್ ನೋಡಿಕೊಂಡು ಏನು ಹೇಳುತ್ತಾರೆಂದರೆ ಸಾರ್ ಬಹಳ ಚೆನ್ನಾಗಿ ಕಟ್ಟಿದ್ದಾನೆ, ಏನೋ ಮಾಡೋಣ ಬಿಡಿ ಸಾರ್. What type of officers? But, then what is the aim of an MLA to fight in this House? I am not getting jealous about anybody. ಅಯ್ಯೋ ನಮಗೆ ಕೆಪಾಸಿಟಿ ಇದೆ. ಲೂಟಿ ಮಾಡಬೇಕೆಂದರೆ I can loot including Vidhana Soudha. But, unfortunately, ಆ ರೀತಿ ಇಲ್ಲ ನನಗೆ. ನಿಜವಾಗಿಯೂ if I am not developing my constituency, ಜೀವನದಲ್ಲಿ ಕೆ.ಜಿ.ಎಫ್. ಡೆವಲಪ್ ಆಗುವುದಕ್ಕೆ ಸಾಧ್ಯವೇ ಇಲ್ಲ. To be frank, It is a dying city. That is why I am very adamant in this. ಇಷ್ಟೆಲ್ಲಾ ಮುನಿಸಿಪಾಲಿಟಿ ·ಕಾನೂನಿಗೆ ವಿರುದ್ಧವಾಗಿ ಮಾಡಿಕೊಂಡಿರುವ ಅಧಿಕಾರಿಗಳು; ಡೈರೆಕ್ಟರ್‌ಗಳು You must know that. See that more than two years, no Director will be there. ಇವರನ್ನು ಶಿಫ್ಟ್ ಮಾಡಿ ಅಂದರೆ ಪೊಲಿಟಿಕಲ್ ಇನ್‌ಫ್ಲೂಯನ್ಸ್ ಇವರು ಮಾಡುವುದಿಲ್ಲವೇ? ಇವರು ಬರುವುದಿಲ್ಲವೇ ಸಿ.ಎಂ.ಹತ್ತಿರ. ಸ್ವಾಮಿ, ನನಗೆ ರೀಟೇನ್ ಮಾಡಿಕೊಡಿ ಅಂತ; ಅಧಿಕಾರಿಗಳು ಮಾತ್ರ ಪೊಲಿಟಿಕಲ್ ಇನ್‌ಫ್ಲೂಯನ್ಸ್ ಮಾಡಬೇಕೋ ಕೇವಲ ಒಬ್ಬ ಕ್ಲಾಸ್–4 ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಮಾಡಿದ್ದಕೋಸ್ಕರ ಅವನನ್ನು ತೆಗೆಯಬೇಕು ಎಂದು ಹೇಳುವುದು ಏನು ನ್ಯಾಯ? These are all matters in which you should take serious action. ತಾವು ಯಾವ ಕಾರಣದಿಂದ ರಿಟೈರ್ಡ್ ಆದಮೇಲೆ ಎಕ್ಸ್‌ಟೆನ್‌ಷನ್ ಕೊಟ್ಟಿರಿ? ಆ ಎಂ.ಡಿ. ಹೇಳುವ ಭಾಷಣ ಏನು See, administration, I cannot run. ಈಗ ಅವನನ್ನು ಅಲ್ಲಿ ಇಟ್ಟುಕೊಂಡರೆ, ಪುನಃ ಎಲ್ಲರೂ ಬಂದು ನನ್ನನ್ನು ಕೇಳುತ್ತಾರೆ ಪುನಃ ನಾನು ಎಲ್ಲರಿಗೂ ವರ್ಗಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ. ಈಗ ನೀನು ರಿಟೈರ್ಡ್ ಆದಮೇಲೆ ನಿಮಗೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದಾರೆ ಅಲ್ಲಿ ಅಡ್ಮಿನಿಸ್ಟ್ರೇಷನ್ ಲ್ಯಾಪ್ಸ್ ಆಗಿಲ್ಲವೇ? ನಿಮ್ಮ ಪ್ಲೇಸ್‌ಗೆ ಬರುವವನ ಗತಿ ಏನಾಗಿದೆ? ಜಾಯಿಂಟ್ ಡೈರೆಕ್ಟರ್ ಪೋಸ್ಟ್‌ನಲ್ಲಿರುವವನ ಗತಿ ಏನಾಗಿದೆ? ಆ ಡೈರೆಕ್ಟರ್ ಸೀಟ್‌ಗೆ ಬಂದು ಕುಳಿತುಕೊಳ್ಳುವವನ

ಗತಿ ಏನಾಗುತ್ತದೆ? ಅಲ್ಲಿ ಅಡ್ಮಿನಿಸ್ಟ್ರೇಷನ್ ಲ್ಯಾಪ್ಸ್ ಆಗುವುದಿಲ್ಲವೇ? ಇವರಿಗೆ ಮಾತ್ರ ಇನ್‌ಫ್ಲೂಯೆನ್ಸ್ ಉಪಯೋಗ ಮಾಡಿ ಎಕ್ಸ್‌ಟೆನ್‌ಷನ್? ಇಂತಹ ಅಧಿಕಾರಿಗಳನ್ನೆಲ್ಲಾ ತಾವು ಹೇಗೋ ಇಟ್ಟು ಕೊಂಡಿದ್ದೀರಿ ಪೇಪರ್‌ನಲ್ಲಿ ಬಂದಿದೆ ಅದನ್ನು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಬಹಳ ಚೆನ್ನಾಗಿದೆ ಸಂತೋಷ ಆಗಿದೆ ಅಂತ. ಇದನ್ನು ಸರಿಪಡಿಸಿಬಿಡಿ ಸಾರ್. You must take interest. ದಕ್ಷ ಮಂತ್ರಿಗಳು ಇದ್ದಾರೆ ಸಭೆಯಲ್ಲಿ ತಾವೆಲ್ಲಾ ಸ್ವಲ್ಪ ಇಂಟ್ರೆಸ್ಟ್ ತೆಗೆದುಕೊಂಡರೆ definitely we can stop these extra-constitutional methods, or powers which are used by the bureaucrats, who are not obeying the government. You must take them to task. ನಾಳೆ ಎಮರ್ಜನ್ಸಿ ಹಾಕಿಬಿಡಿ ಸ್ವಾಮಿ. ನಾವು ಎಂ.ಎಲ್.ಎ.ಗಳ ಎಂಟ್ರಿ ಇಲ್ಲದಾಗ ನೋಡಿ ಇವರ ಸ್ಟೈಲ್‌ಗಳನ್ನು ಅವತ್ತು ಎಲ್ಲಾ ಸೇರಿ ನಮ್ಮನ್ನು, they are just treating us like a dog. ಒಬ್ಬರು ಎಲೆಕ್ಷನ್ ಕಮೀಷನ್ ಆಫೀಸರನ್ನು ಡೆಪ್ಯುಟಿ ಕಮೀಷನರ್ ಎಂದು ಹಾಕಿಬಿಡಿ, ಅವರೇನು ಪೆನ್ ಹೀಗೆ ಹಾಕಿಕೊಂಡು ಬಂದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುತ್ತಾರೆ. ಪೇಪರ್ ಇದ್ದರೆ No, no, no. I do not know this full stop, come. ಆಗ ನಿಮಗೆ ಹೇಗೆ ಪವರ್ ಬಂದುಬಿಡುತ್ತದೆ? ಈಗ ಪವರ್ ಇದೆ ಮಾಡಿ ಎಂದರೆ, ಈಗ ಪವರ್ ಇಲ್ಲವೇ These are all municipalities, corruption action, That ಮುನಿಸಿಪಾಲಿಟಿಯ ಆಫೀಸರ್ ನೋಡಲ್ ಆಫೀಸರ್ಸ್ ಅವರಿಗೆ ಸಂಬಳ 20,000 ರೂಪಾಯಿ. ಅವನು ಏನು ನೋಡಲ್ ಮಾಡಿದ್ದಾನೋ, ನೂಡಲ್ ಮಾಡಿದ್ದಾನೊ ಇಲ್ಲ, ಚೈನೀಸ್ ಸ್ಟೈಲ್‌ನಲ್ಲಿ ಮಾಡಿದರೂ ಕೂಡ ಅಟ್‌ಲೀಸ್ಟ್ ಇರುತ್ತದೆ. What is the work of the nodal officer? ಮಾನ್ಯ ಅಧ್ಯಕ್ಷರೆ, ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಮುನಿಸಿಪಾಲಿಟಿ ಅಧಿಕಾರಿಗಳು ಬಹಳ ಅವ್ಯವಹಾರ ಮಾಡಿದ್ದಾರೆ ಬೇಕಾದಷ್ಟು ಲೂಟಿ ಮಾಡಿದ್ದಾರೆ. ಆಶ್ರಯ ಸ್ಕೀಂ ಮನೆಗಳನ್ನು ಬಡವರಿಗಾಗಿ ಕಟ್ಟಿದ್ದಾರೆ ಅದರಲ್ಲಿ ಬ್ಯೂಟಿ ಪಾರ್ಲರ್ ಓಪನ್ ಮಾಡಿದ್ದಾರೆ. ಆಶ್ರಯ ಸ್ಕೀಂ ಮನೆಯಲ್ಲಿ ಬ್ಯೂಟಿ ಪಾರ್ಲರ್ ಓಪನ್ ಮಾಡಿದ್ದಾರೆ ಮಾಡುವುದಕ್ಕಾಗುತ್ತದೆಯೇ? ಮಾಡಬಹುದು. ಏಕೆಂದರೆ ಕಟ್ಟುವ ಸಮಯದಲ್ಲಿ ಅವನು ಬಹಳ ಬಡವನು, ಕಟ್ಟಿದ ಮೇಲೆ ಲಾಟರಿ ಟಿಕೇಟ್‌ನಲ್ಲಿ ಅವನಿಗೆ ಹತ್ತು ಲಕ್ಷ ರೂ. ಬಂದಿದೆ, ಅದಕ್ಕೆ ಅವನು ಆಶ್ರಯ ಸ್ಕೀಂ ಮನೆಯಲ್ಲಿ ಬ್ಯೂಟಿ ಪಾರ್ಲರ್ ಮಾಡಬಹುದಾ ಓಪನ್ Because, they are not eligible people. This kind of looting in the Ashraya scheme houses should be stopped. They have not given it to the poor. Gangsters, rowdies, looters, ಇಂತಹವರಿಗೆ ಕೊಟ್ಟು ಅವರು ಬಾಡಿಗೆ ವಸೂಲ್ಮಾಡಿ ಕೊಂಡಿದ್ದಾರೆ. ಅದನ್ನು ನಿಮ್ಮ ಅಧಿಕಾರಿಗಳ ನೋಟೀಸ್‌ಗೆ ತೆಗೆದುಕೊಂಡು ಬಂದರೆ, ನಿಮ್ಮ ಸ್ಟೈಲ್‌ನಲ್ಲಿ ಹೇಳುವುದು, ಅಲ್ಲಿ ಇರುವವರಿಗೆ ಮಾಡಿಬಿಡೋಣ ಅಂತ. ಅದು ಎಲ್ಲರಿಗೂ ಗೊತ್ತಿದೆ, ಈಗ ಯಾರು ಕಳ್ಳತನ ಮಾಡಿದ್ದಾನೋ ಅವನಿಗೆ ಸೂಟ್‌ಕೇಸ್ ಕೊಡಲಾಗುತ್ತದೆಯೇ ಸರ್, ಇವನು ಕಳ್ಳತನ ಮಾಡಿದ್ದಾನೆ, ಅಂದರೆ ಹಾಗಾದರೆ ಅವನಿಗೆ ಕೊಟ್ಟು ಬಿಡಿ ಸರ್, ಇವನು ಒಬ್ಬ ಹೆಣ್ಣುಮಗಳನ್ನು ಕೆಡಿಸಿಬಿಟ್ಟಿದ್ದಾನೆ, ಅವನಿಗೆ ಮದುವೆ ಮಾಡಿಬಿಡ್ರಿ, ಇದು ನಿಮ್ಮ ಸರ್ಕಾರದ ಉತ್ತರ; ಇಂತಹ ಅಧಿಕಾರಿಗಳು ಇದ್ದಾರೆ, ಸರ್, ತಪ್ಪಾಗಿದೆ ಎಂದರೆ ಅವರಿಗೆ ಮಾಡಿಬಿಡೋಣ ಬಿಡಿ, ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ ಸರ್. ಆದುದರಿಂದ the Municipality, the

Commissioner, the President, are all in the records of Lokayukta, ಇಷ್ಟು ಹಣ ಕೊಡಬೇಕೆಂದು ಕೇಳಿರುವುದನ್ನು ಓಪನ್ ಆಗಿ ರೆಕಾರ್ಡ್ ಮಾಡಿರುವುದನ್ನು, ತಾವು ತೆಗೆದುಕೊಂಡು ಅದರ ಮೇಲೆ ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು. You must dissolve the Municipality. ಏನು ಮುನ್ಸಿಪಾಲಿಟಿಯಲ್ಲಿ 74 ಅಮೆಂಡ್‌ಮೆಂಟ್ ಇದೆ ಅದರಲ್ಲಿ ಕಳ್ಳತನ ಮಾಡಿ ಎಂದು ಹೇಳಿದೆಯಾ? ಎಲೆಕ್ಷನ್ ಆಗುವವರೆಗೆ ಏನೂ ಮುಟ್ಟಬಾರದೆಂದು 74 ಅಮೆಂಡ್‌ಮೆಂಟ್ಸ್, ಹೇಳಿದೆಯಾ? ಏನೂ ಇಲ್ಲ, 74 ಆಗಿರಲಿ 84 ಆಗಿರಲಿ, ಈ ಸದನದಲ್ಲಿ ನಾವು ಇರುತ್ತೇವೆಯೋ ಇಲ್ಲವೋ ನಾಳೆ ಆಗುತ್ತದೆಯೋ ಇಲ್ಲವೋ ಎಂಬ ಭಯ ಬಂದಿದೆ. ನಾವು ಎಲೆಕ್ಟೆಡ್ ಬಾಡಿಯೇ, ಅಸೆಂಬ್ಲಿಗೆ ಈ ಗತಿ ಎಂದರೆ, ಲೋಕಲ್‌ಬಾಡಿಗೆ ಏನು? Therefore, the Government should come forward. ಇವರು, ಬೇಡ್ರಿ ಅದು ಲೋಕಲ್ ಬಾಡಿ ಎಂದು ಹೇಳುತ್ತಾರೆ. ಲೋಕಲ್ ಬಾಡಿಯಾದರೇನು? ತಪ್ಪು ಮಾಡಿದ್ದರೆ ತಪ್ಪು ಮಾಡಿದ್ದಾರೆ ಎಂದು ಹೇಳಲೇಬೇಕು. ಅವರು ಶೇಕಡ 18 ರಷ್ಟು ಹಣವನ್ನು ಖರ್ಚೇ ಮಾಡಿಲ್ಲ. ನಾವು ಭಾಷಣ ಮಾಡುವುದೇನು, ಅನ್‌ಟಚಬಲ್ ಕೇಸ್ ಹಾಕಿಬಿಡಿ ಅವನ ಮೇಲೆ, ಎಂದು ಆ ಕೇಸ್ ಹಾಕಿಬಿಟ್ಟರೆ ಅವನನ್ನು ಅರೆಸ್ಟ್ ಮಾಡಿಬಿಡುತ್ತಾರೆ, ಅದಕ್ಕೆ ಬೆಲೆ ಇಲ್ಲ, ಎಲ್ಲಾ ಸುಮ್ಮನೆ ಭಾಷಣ ಯಾರು ಅರೆಸ್ಟ್ ಆಗಿದ್ದಾರೆ? 18 ಪರ್ಸೆಂಟ್ ಅಮೌಂಟ್ ಅನ್ನು ಕಣ್ಣಮುಂದೆ ಲೂಟಿ ಮಾಡಿ ತಿಂದಿದ್ದಾರೆ. ಅದನ್ನು ಡೆಪ್ಯುಟಿ ಕಮೀಷನರ್‌ರವರ ಗಮನಕ್ಕೆ ನಾನು ತೆಗೆದುಕೊಂಡು ಬಂದರೆ ಅವರು ಏನು ಹೇಳುತ್ತಾರೆಂದರೆ, ಹೌದಾ, ಏನು ಖರ್ಚೇ ಮಾಡಿಲ್ಲವಾ, ಎಂದು ನನಗೆ ಅವರು ಹೇಳಿದರು, ಫುಟ್‌ಬಾಲ್, ಕ್ರಿಕೆಟ್ ಬ್ಯಾಟ್ಸ್‌ಗಳನ್ನು ಪರ್ಚೇಸ್ ಮಾಡಿದ್ದಾರೆ. ಒಂದು ಸ್ಕೂಲ್‌ನಲ್ಲಿ ಕ್ರಿಕೆಟ್ ಬ್ಯಾಟ್ ಕೊಟ್ಟರೆ, ಅದನ್ನು ಯಾರೂ ಮುಟ್ಟಬಾರದು, ಬರೀ ಎಸ್‌ಸಿ ಹುಡುಗರೇ ತೆಗೆದುಕೊಂಡು ಕ್ರಿಕೆಟ್ ಆಡಬೇಕೆಂದು ಹೇಳುತ್ತಾರೆಯೇ? ತಾವು ಎಷ್ಟು ಓದಿರುವ ಮಹಾನುಭಾವರು ಸ್ವಾಮಿ, Unfortunately, we have not studied I.A.S. That is all. ಆದರೆ ನಮಗೆ ಮೂಳೆ ಇಲ್ಲವೆಂದು ಹೇಳಬಾರದು ಸ್ವಾಮಿ? ಈಗ ಓಲ್ಡ್ ಮ್ಯಾನ್ ಇದ್ದಾರೆ, ಅವರ ಕೂದಲು ಬೆಳ್ಳಗಾಗಿರುತ್ತದೆ, ಕೂದಲು ಬೆಳ್ಳಗಾಗಿರುವವರನ್ನೆಲ್ಲಾ ಇಂಟ್ಲಿಜೆಂಟ್ ಎಂದು ಡಿಸೈಡ್ ಮಾಡಬೇಕೇನು? ಕೂದಲು ಬೆಳ್ಳಗಿದ್ದರೆ, ಅವರು ಓಲ್ಡ್ ಮ್ಯಾನ್, ನಾನು ಉದಾಹರಣೆ ಹೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗಂತ, ಬೇರೆ ಎಲ್ಲರನ್ನೂ ಬುದ್ಧಿವಂತರೆಂದು ಹೇಳಕ್ಕಾಗುತ್ತದೆಯೇ ಎಂದು ಅರ್ಥ ಮಾನ್ಯ ರಮೇಶ್‌ಕುಮಾರ್‌ರವರ ಬಗ್ಗೆ ಡಿಸ್‌ಫ್ಯೂಟ್ ಇಲ್ಲ ಬುದ್ಧಿವಂತರೇ ಬೇರೆ ಬಿಳಿಕೂದಲಿರುವವರು ದಡ್ಡರಿರಬಹುದೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್.ರಾಜೇಂದ್ರನ್: ನಾವು ಆವಾಗಲೇ ಮಾತನಾಡಿಕೊಂಡೆವು ತಾವು ಸೂಟ್‌ಕೇಸ್ ಓಪನ್ ಮಾಡಿದಾಗ, ನಾವು ಆವಾಗಲೇ ಡಿಸೈಡ್ ಮಾಡಿದೆವು ಬಂದಿದೆ ಡೇಂಜರ್ ಅಂತ. ರೂಲ್ ಬುಕ್ ತೆಗೆಯುತ್ತಾರೆ, ಏನೋ ಇದೆಯೆಂದು ನಾವೇ ಡಿಸೈಡ್ ಮಾಡಿದ್ದು, You are too intelligent. No doubt. Not only by lips, but from the bottom of heart. ಕೂದಲು ಬೆಳ್ಳಗಿದ್ದರೆ, ಇವರಿಗೆ ವಯಸ್ಸಾಗಿದೆ ಎಂದು ನಾವು ಹೇಳುತ್ತೇವೆ. ಅದಕೋಸ್ಕರ ಇವರು ಬಹಳ ಇಂಟಲಿಜೆಂಟ್ ಎಂದು ಹೇಳುವುದಕ್ಕಾಗುತ್ತದೆಯಾ? ಒಬ್ಬ ಹುಡುಗನಿಗೆ ಎಂಟನೇ ವಯಸ್ಸಿನಲ್ಲಿ ಕೂದಲು ಬೆಳ್ಳಗಾಗುತ್ತದೆ, ಅವನು ಬಹಳ ಇಂಟಲಿಜೆಂಟ್ ಎಂದು ಹೇಳುವುದಕ್ಕಾಗುತ್ತದೆಯೇ ಇಲ್ಲ. ಈಗ ಕೂದಲಿಗೆ ಕಪ್ಪು ಬಣ್ಣವಲ್ಲ ಕೆಂಪು ಬಣ್ಣವನ್ನು ಹಾಕಿಕೊಳ್ಳುತ್ತಾರೆ, ಬಣ್ಣ ಹಾಕಿಕೊಂಡಿರುವವನು ತುಂಬಾ ಬುದ್ಧಿವಂತನೆಂದು ಹೇಳಿ ಬಿಡೋಣವೇ? ಅದೆಲ್ಲಾ ಏನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಪ್ರಕಾಶ್‌ರವರ ಬಗ್ಗೆ ಮಾತನಾಡಿದೆ ಅಂತ ಗುರು ಪಾದಪ್ಪನವರಿಗೆ ಸಿಟ್ಟು ಬಂದರೆ ಏನು ಹೇಳುವುದು?

ಶ್ರೀ ಎಸ್. ರಾಜೇಂದ್ರನ್: ಅವರು ಎಕ್ಸ್ಟ್ರಾಡಿನರಿ ಬ್ರೈನ್ ಕೊನೆಯದಾಗಿ ಫುಡ್ ಅಂಡ್ ಸಿವಿಲ್ ಸಪ್ಲೈ ಮಿನಿಸ್ಟರ್ ಇಲ್ಲಿ ಇಲ್ಲ, ಅವರು ಏನು ಮಾಡಿದ್ದಾರೆಂದರೆ, ಯಾರ್ಯಾರು ಗ್ಯಾಸ್ ಇಟ್ಟುಕೊಂಡಿದ್ದಾರೆ, ಅವರಿಗೆಲ್ಲಾ ಕೆರೋಸಿನ್ ಕೊಡಬಾರದೆಂದು ಕಾನೂನು ಮಾಡಿದ್ದಾರೆ; ಒಳ್ಳೆಯದು. ಈಗ ಸಾಮಾನ್ಯವಾಗಿರುವವನು ಮನೆಯಲ್ಲಿ ಗ್ಯಾಸ್ ಇಟ್ಟುಕೊಳ್ಳುತ್ತಾನೆ, ಗ್ಯಾಸ್ ಇಟ್ಟುಕೊಳ್ಳುವುದೇ ಒಂದು ಫ್ಯಾಶನ್, ಗ್ಯಾಸ್ ಇಲ್ಲವೆಂದರೆ ಅಂತಹವರಿಗೆ ಬಾಡಿಗೆಗೆ ಮನೆಯನ್ನೇ ಕೊಡುವುದಿಲ್ಲ, ಅದಕ್ಕೋಸ್ಕರ ಅವನು ಗ್ಯಾಸ್ ಇಟ್ಟುಕೊಳ್ಳುತ್ತಾನೆ, ಅವನು ಬಿಸಿ ನೀರು ಕಾಯಿಸಿಕೊಳ್ಳಬೇಕಾದರೆ, ಗ್ಯಾಸ್‌ನಲ್ಲಿ ಕಾಯಿಸಿ ಕೊಳ್ಳುವುದಿಲ್ಲ, ಕೆರೋಸಿನ್‌ನಲ್ಲಿ ಕಾಯಿಸಿಕೊಳ್ಳುತ್ತಾನೆ, ಪವರ್ ಕಟ್ ಆದರೆ, ಲ್ಯಾಂಪ್‌ಗೆ ಉಪಯೋಗ ಮಾಡಲು ಕೆರೋಸಿನ್ ಬೇಕಾಗುತ್ತದೆ, ಇದಕ್ಕೆಲ್ಲಾ two to three litres if they provide for that, for those who are holding gas, ಅದರಿಂದ ಅವರಿಗೆ ಅನುಕೂಲವಾಗುತ್ತದೆ, ಕೊಡಲೇಬೇಕು, ಕೊನೆಯಪಕ್ಷ ಅವರಿಗೆ 3 ಲೀಟರ್ ಕೊಡಿ. ಈ ಕೆರೋಸಿನ್ ವಿತರಣೆಯನ್ನು ತಿಂಗಳ 31ನೇ ತಾರೀಖಿನಂದು ಮಾಡುತ್ತಾರೆ. ಸಂಜೆಯೇ ಮುಚ್ಚಿಬಿಡುತ್ತಾರೆ ಕ್ಲೋಸ್ ಆಯಿತೆಂದು ಹೇಳುತ್ತಾರೆ, 1 ಮತ್ತು 2ನೇ ತಾರೀಖು ಕೂಲಿಯವರು ಸಂಬಳ ತೆಗೆದುಕೊಂಡು ಬರುವವರು, ಆ ಕೆರೋಸಿನ್ ತೆಗೆದುಕೊಳ್ಳಲು ಸಾಧ್ಯವೇ ಆಗುವುದಿಲ್ಲ, You think over it, ಹೇಗೆ ಪೆಟ್ರೋಲ್, ಡೀಸೆಲ್ ಅನ್ನು ಒಂದು ಪಂಪ್ ಇಟ್ಟುಕೊಂಡು ಮಾರುತ್ತಿದ್ದಾರೋ ಆ ರೀತಿ ಕೆರೋಸಿನ್ ಪಂಪ್ ಮಾಡಿ, ಅವರು ಪಂಚ್ ಮಾಡಿ ತೆಗೆದುಕೊಂಡು ಹೋಗಲಿ, ಎಂಟ್ರಿ ಮಾಡಿ ಅಲ್ಲೇ ತೆಗೆದುಕೊಂಡು ಹೋಗಲಿ ಅದರಿಂದ ಜನರಿಗೂ ಅನುಕೂಲವಾಗುತ್ತದೆ, We can escape from these looters. ಇದೆಲ್ಲಾ ಅವಕಾಶ ಮಾಡಿಕೊಟ್ಟರೆ, ಆ ಡಿಪಾರ್ಟ್‌ಮೆಂಟ್‌ನಿಂದ ಬಡವರಿಗೆಲ್ಲಾ ಕೆರೋಸಿನ್ ಸಿಗುತ್ತದೆ, ಇಲ್ಲವೆಂದರೆ, 50 ಲೀಟರ್ 400 ಲೀಟರ್ 500 ಲೀಟರ್ ಕೆರೋಸಿನ್ ಕಣ್ಣಮುಂದೆ ಮಾರುತ್ತಿದ್ದಾನೆ, ನಾವು ಹೋಗಿ ಅಧಿಕಾರಿಗೆ ಹೇಳಿದರೆ, ಸರಿಪಡಿಸುತ್ತೇನೆಂದು ಹೇಳುತ್ತಾನೆ ಪೊಲೀಸ್‌ನವರಿಗೆ ಹೇಳಿದರೆ, ಏನ್ ಸರ್ ಬರೀ 400 ಲೀಟರ್; ಕಳೆದ ತಿಂಗಳು ಅವರು 800 ಲೀಟರ್ 1000 ಲೀಟರ್ ತೆಗೆದುಕೊಂಡು ಬಂದರು, ಈಗ ಕಡಿಮೆಯಾಗಿದೆ ಎಂದು ಹೇಳುತ್ತಾನೆ, ಅವನ ಚಿಂತೆ ಏನೆಂದರೆ, 1000 ಲೀಟರ್ ತೆಗೆದುಕೊಂಡು ಹೋದರೆ ಒಂದು ರೇಟ್, 500 ಲೀಟರ್ ತೆಗೆದುಕೊಂಡು ಹೋದರೆ ಒಂದು ರೇಟ್, ಅಧಿಕಾರಿಗಳು ಇಂತಹ ಸ್ಥಿತಿಯಲ್ಲಿದ್ದಾರೆ? ಹೇಳಿಕೊಳ್ಳುವುದಕ್ಕೆ ಮಾತ್ರ ಅಧಿಕಾರಿಗಳು ಶೇಕಡ 90 ರಷ್ಟು ಅಧಿಕಾರಿಗಳಿಗೆ ಬಡವರ ಬಗ್ಗೆ ನಿಜವಾಗಿಯೂ ಚಿಂತನೆ ಇಲ್ಲ, 10% officers may be good. ಅವರ್ಯಾರೆಂದು ಶಾಸ್ತ್ರ ನೋಡುವುದಕ್ಕಾಗುವುದಿಲ್ಲ ಸ್ವಾಮಿ, ಕೆಲವರು ಇದ್ದಾರೆ, ಆದುದರಿಂದ the government should take more interest. ನಮ್ಮ ವಿರೋಧಪಕ್ಷದ ನಾಯಕರ ಹತ್ತಿರ ಒಂದು ಪಿಟಿಷನ್ ಬಂದಿದೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಂತ್ರಿಗಳೇ, ಒಬ್ಬ ಹೆಣ್ಣು ಮಗಳನ್ನು ಒಬ್ಬ ಕೆಡಿಸಿಬಿಟ್ಟಿದ್ದಾನೆ, ಪೊಲೀಸ್‌ನವರು ಕೇಸ್ ತೆಗೆದುಕೊಂಡಿಲ್ಲ, ಕೊನೆಗೆ ನಾನು ಇನ್ವಾಲ್ವ್ ಆಗಿ ಕೇಸ್ ಅವನ ಮೇಲೆ ಹಾಕಲೇಬೇಕು ಎಂದು ಹೇಳಿ, ಅವನ ಮೇಲೆ ಕೇಸ್ ಹಾಕಿಸಿ ಕೊನೆಗೆ ಅವನನ್ನು ಜೈಲ್‌ಗೆ ಕಳುಹಿಸಿದ್ದು ಆಯಿತು.

ಮೊದಲು ಕೋರ್ಟ್‌ನವರು ಅವನನ್ನು 15 ದಿವಸ ಒಳಗಡೆ ಇಟ್ಟು ಬಿಡುಗಡೆ ಮಾಡಿದ್ದಾರೆ, ಈಗ ಅವನ ಮೇಲೆ ಕೇಸ್ ಆಗಿದೆ ಜೈಲಿಗೆ ಹೋಗಿದ್ದಾನೆ. ಈಗ ಅವನು ಕೆಡಿಸಿದ ಹುಡುಗಿಯನ್ನು ಮದುವೆ ಮಾಡಿಕೊಳ್ಳುವುದಿಲ್ಲವೆಂದು ಹೇಳುತ್ತಿದ್ದಾನೆ. ನನಗೆ ಬಹಳ ಅನ್ಯಾಯವಾಗಿದೆ ಎಂದು ಅವನೊಂದು ಅರ್ಜಿಯನ್ನು ಬರೆದಿದ್ದಾನೆ. ಪೊಲೀಸ್‌ನವರಿಗೆ ಕೇಳಿದರೆ, ಏನು ಮಾಡುವುದು ಸರ್, ಹುಡುಕುತ್ತಿದ್ದೇವೆ, ಕೋರ್ಟ್‌ಗೆ ಪ್ರೊಡ್ಯೂಸ್ ಮಾಡಿದ್ದೆವು. ಕೋರ್ಟ್ ರಿಲಿಸ್ ಮಾಡಿದೆ ಎಂದು ಹೇಳುತ್ತಾರೆ, If this is the way, the background of a woman to safeguard her chastity, how you are going to control this? ಮಂತ್ರಿಗಳು ಇದ್ದಾರೆ, ಇದಕ್ಕೆ ಪರಿಹಾರ ಕೊಡುವುದಕ್ಕೆ ಏನಾದರೂ ಒಂದು ಐಡಿಯಾ ಮಾಡಬೇಕು, Take serious action. ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ನವರಿಗೆ ಡಿಎನ್‌ಎ ಟೆಸ್ಟ್‌ಗೆ ಕಳುಹಿಸಿ ಎಂದು ಬರೆಯಿರಿ, 10–15 ದಿವಸಗಳಲ್ಲಿ ಬೇಗ ವರದಿ ತರಿಸಿ ಪ್ರೊಡ್ಯೂಸ್ ಮಾಡಿ ಏನು ಎಫ್‌ಐಆರ್ ಇದೆಯೋ ಅದನ್ನು ಕೂಡಲೆ ಕೋರ್ಟ್‌ಗೆ ಕಳುಹಿಸಿ, ಒಂದು ತಿಂಗಳೊಳಗೆ ನನಗೆ ವರದಿ ಬೇಕೆಂದು ತಾವೊಂದು ಪತ್ರವನ್ನು ಬರೆಯಿರಿ. ಆಗಲೇ ಅವರಿಗೆ ನಿಜವಾಗಿಯೂ ಓಹೋ ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳು ನಮ್ಮ ಮೇಲೆ ಅಪಾರವಾದ ಗೌರವವನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆಂಬ ಒಂದು ಫೀಲಿಂಗ್ ಬರುತ್ತದೆ, ಇಡೀ ರಾಜ್ಯಕ್ಕೆ ಗೊತ್ತಾಗುತ್ತದೆ. If this goes to the notice of the Minister, definitely we will get into trouble ಎಂದು ಎಲ್ಲರಿಗೂ ಗೊತ್ತಾಗುತ್ತದೆ. ಆ ಕಾಗದ ಪತ್ರಗಳನ್ನೆಲ್ಲಾ ನಾನು ತಮಗೆ ಸಲ್ಲಿಸುತ್ತೇನೆ, ತಾವು ಕ್ರಮ ತೆಗೆದುಕೊಳ್ಳಿ, ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಿ, ಡಿಎನ್‌ಎ ಟೆಸ್ಟ್ ಮಾಡುವುದಕ್ಕೆ ಪೊಲೀಸ್‌ನವರು ಇನ್ನೂ ಅವನನ್ನು ಹುಡುಕುತ್ತಿದ್ದೇವೆ, ನೋಡೋಣ, ಅವನು ಎಲ್ಲಿದ್ದಾನೋ ಪತ್ತೆಯೇ ಆಗುತ್ತಿಲ್ಲ, ಈ ರೀತಿ ಹೇಳಿಕೊಂಡಿದ್ದಾರೆ, Really because being not only a woman, even if a Women & Child Welfare Minister is a man also, he has to take that initial interest to safeguard the women in this state and in this country. ಇನ್ನೂ ಬಹಳಷ್ಟು ಜನ ಮಾತನಾಡುವವರು ಇದ್ದಾರೆ. ನಾನು ಮಾತನಾಡಲು ಹೆಚ್ಚು ಸಮಯ ಕೊಟ್ಟಿದ್ದಾರೆ. ನನಗೆ ಇಷ್ಟು ಹೊತ್ತು ಮಾತನಾಡಲು ಟೈಂ ಕೊಟ್ಟಿದ್ದೀರಿ, ಬೇಕಾದಷ್ಟು ನಾನು ಮಾತನಾಡಬೇಕೆಂದು ಇದ್ದೆ, ಆದರೆ ಈಗ ನಾನು ಮಾತನಾಡುವುದಿಲ್ಲ ಏಕೆಂದರೆ ಮಾತನಾಡಿ ಪ್ರಯೋಜನವಿಲ್ಲ ಎಂದು ಅವರೇ ಹೇಳಿಬಿಟ್ಟರು. ಈಗ ಅವರು ಭಾಷಣ ಮಾಡುವುದೂ ಅದೇ. ಏನೂ ಪ್ರಯೋಜನವಿಲ್ಲ. ಸುಮ್ಮನೆ ನಾವೂ ಇದ್ದೇವೆ ಮಾತನಾಡೋಣ ಅಂತ ಡಿಸೈಡ್ ಮಾಡಿದ್ದೇವೆ ನಾವೆಲ್ಲಾ ಸೇರಿ. ಅದಕ್ಕೋಸ್ಕರ ನಾನು ಮಾತನಾಡಿದೆ. ಏನೋ ಅಪ್ಪಿತಪ್ಪಿ ನಿಮಗೇನಾದರೂ ಕ್ರಮ ತೆಗೆದುಕೊಳ್ಳಬೇಕು ಅಂದರೆ kindly take serious action and do the needful. ಆ ಕ್ಯಾಸೆಟ್ ಏನಿದೆ, you must take serious action. ಕಮೀಷನರ್ ಸ್ಥಾನದಲ್ಲಿರುವವನೇ ನನಗಿಷ್ಟು ಬೇಡ ಇಷ್ಟು ಕೊಡಿ ಅಂದಿರುವುದನ್ನು ಲೋಕಾಯುಕ್ತ ರೆಕಾರ್ಡ್ ಮಾಡಿರುವಾಗ, ಇನ್ನೂ ಅವರು ಕಮೀಷನರಾಗಿ ಕುಳಿತುಕೊಂಡಿದ್ದರೆ ಅದು ಸರಿ ಇರೋಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, 1980ರಲ್ಲಿ ಸರ್ಕಸ್ ದುರಂತ ಆಗಿ, ವಿಚಾರಣಾ ಆಯೋಗ ಆಯಿತು. 300 ಮಕ್ಕಳು ಸುಟ್ಟುಹೋದರು, ವರದಿ ಕೊಟ್ಟರು, ಅದಾಗಿ 25 ವರ್ಷ ಆಯಿತು. ನಾನು ಯಾವ ಸರ್ಕಾರದ ಬಗ್ಗೆನೂ ಹೇಳುತ್ತಿಲ್ಲ, ಯಾವುದೇ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈ ರೀತಿ ಸರ್ಕಾರ ಏನೇನು ವಿಚಾರಣಾ ಆಯೋಗ ಮಾಡಿ ಪಡೆದ ವರದಿ ಆಧರಿಸಿ ಇಂಥ ಅಧಿಕಾರಿ ಇಂಥ ಜನರನ್ನು ನಾವು ಶಿಕ್ಷೆಗೊಳಪಡಿಸಿದ್ದೇವೆ ಎಂದು ದಾಖಲೆ ಇದ್ದರೆ ಹೇಳಿಬಿಡಲಿ.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಬಹಳ ಸಂತೋಷ. ನಾನು ಇಷ್ಟು ಮಾತನಾಡಿದ್ದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಅಂದುಕೊಂಡಿದ್ದೆ. ಇವರು ಏನೋ ಅಡ್ಡ ಹೇಳಿಬಿಟ್ಟರು ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಇದು ಹೇಗಿದೆ ಅಂದರೆ ಸರ್ಕಸ್ ಕಂಪೆನಿಯಲ್ಲಿ ಲಯನ್ ಟೈಗರ್ ಆಡಿಸುವವರಿಗೆ ಡ್ಯಾನ್ಸರ್‌ಗೆಲ್ಲಾ ಸಂಬಳ ಗೊತ್ತುಮಾಡಿದ್ದಾರೆ. ಆ ತರಹ ಒಂದು ಜೋಕ್ ಮಾಡುವುದಕ್ಕೆ 20 ಎಗ್ ಮಟನ್ ಚಿಕನ್ ತಿನ್ನೊದು ತೋರಿಸುವುದಕ್ಕೆ ಒಬ್ಬನನ್ನು ಇಟ್ಟಿದ್ದಾರೆ. ಅವನದು ದಿನಾ ಅದೇ ಡ್ಯೂಟಿ ದಿನಾ ಬರುವುದು ನೂರು ಕೆ.ಜಿ. ತಿನ್ನಬೇಕು. ಅಂಥವನಿಗೆ ಸ್ಯಾಲರಿ ಡಿಸೈಡ್ ಮಾಡುವಾಗ ಏನು ಹೇಳಿದ ಅಂದರೆ, ಇಷ್ಟೆಲ್ಲಾ ತಿಂದರೂ ನನಗೆ ಲಂಚ್ ಟೈಂ ಕೊಡಬೇಕು ಅಂದ. ಈಗ ತಿಂದಿರುವುದೆಲ್ಲಾ ಸರ್ಕಸ್‌ಗೋಸ್ಕರ, ಇದರ ಮೇಲೆ ನನಗೆ ಲಂಚ್ ತಿನ್ನಲು ಟೈಂ ಮಾಡಿಕೊಡಬೇಕು ಅಂದ. ಆ ರೀತಿ ಈ ಸರ್ಕಾರ ಹೋಗಬಾರದು. ಮಾಡಿರುವುದೆಲ್ಲಾ ತಿಂದುಬಿಟ್ಟು ಇನ್ನೂ ನನಗೆ ಸ್ವಲ್ಪ ಟೈಂ ಬೇಕು ತಿನ್ನೊದಕ್ಕೆ ಅಂದರೆ ಅದು ಸರಿಯಿಲ್ಲ. ಅದಕ್ಕೋಸ್ಕರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಅಂತ ಕೇಳಿಕೊಂಡು ನನ್ನ ಭಾಷಣ ಮುಗಿಸುತ್ತೇನೆ ವಂದನೆಗಳು.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ ಮೊದಲನೆಯದಾಗಿ 25 ಬೇಡಿಕೆಗಳನ್ನು ಒಟ್ಟಿಗೆ ನಾವು ಇಟ್ಟುಕೊಂಡಿದ್ದೇವೆ. ಯಾವುದರ ಬಗ್ಗೆ ಎಷ್ಟು ಮಾತನಾಡಬೇಕು ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಇವತ್ತು ರಾತ್ರಿ ಅಥವಾ ನಾಳೆ ಒಳಗೆ ಮುಗಿಸಬೇಕು ಅಂತ ನೀವು ಹೇಳುತ್ತಿದ್ದೀರಿ. ವಿಷಯ ಸಮಿತಿಗಳೆಲ್ಲಾ ರದ್ದಾದ ಮೇಲೆ ಸಮಗ್ರ ಚರ್ಚೆಯಾಗಬೇಕಾಗಿರುವುದು ಕರ್ತವ್ಯ. ಇದು ಒಂದು ತರಹ ಪುರೋಹಿತ್ಯ ಮಾಡುವಾಗ ಮಂತ್ರ ಇದ್ದಂತೆ ಇದೆ. ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸ್ವಾಹ, ಆಹಾರ ಮತ್ತು ನಾಗರೀಕ ಸರಬರಾಜು ಸ್ವಾಹ, ವಾರ್ತಾ ಪ್ರವಾಸೋದ್ಯಮ ಯುವಜನ ಸೇವೆಗಳು ಸ್ವಾಹ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸ್ವಾಹ, ಕಾನೂನು ಸ್ವಾಹ, ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಸ್ವಾಹ, ಇಂಧನ ಸ್ವಾಹ, ಲೋಕೋಪಯೋಗಿ ಕಾಮಗಾರಿ ಸ್ವಾಹ, ಅರಣ್ಯ, ಪರಿಸರ ಸ್ವಾಹ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸ್ವಾಹ, ಆರ್ಥಿಕ ಸ್ವಾಹ, ವಿಜ್ಞಾನ ತಂತ್ರಜ್ಞಾನ ಸ್ವಾಹ, ಮಾಹಿತಿ ತಂತ್ರಜ್ಞಾನ ಸ್ವಾಹ, ಒಳಾಡಳಿತ ಮತ್ತು ಸಾರಿಗೆ ಸ್ವಾಹ, ಜಲಸಂಪನ್ಮೂಲ ಸ್ವಾಹ, ಪಶುಸಂಗೋಪನೆ ಮೀನುಗಾರಿಕೆ ಸ್ವಾಹ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ವಾಹ, ನಗರಾಭಿವೃದ್ಧಿ ಸ್ವಾಹ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸ್ವಾಹ. ಇಷ್ಟೊಂದೆಲ್ಲಾ ಪಟ್ಟಿಯಲ್ಲಿ ಹಾಕಿಬಿಟ್ಟು ಮದುವೆ ಅಥವಾ ಹೋಮ ಮಾಡುವಾಗ ಮಂತ್ರ ಹೇಳಿದ ಹಾಗೆ ಯಾವುದರ ಬಗ್ಗೆ ಏನು ಚರ್ಚೆ ಮಾಡಬೇಕು ನನಗೊಂದೂ ಅರ್ಥವಾಗುತ್ತಿಲ್ಲ. ತೀರ ಇಕ್ಕಟ್ಟಿನ ಪರಿಸ್ಥಿತಿ ಸದನದಲ್ಲಿದೆ. ಯಾವ ರೀತಿ ಯಾವುದರ ಬಗ್ಗೆ ಮಾತನಾಡಬೇಕೆಂಬ ಬಗ್ಗೆ ನನಗಂತೂ ದೊಡ್ಡ ಜಿಜ್ಞಾಸೆಯಾಗಿದೆ.

ಇದಕ್ಕೆಲ್ಲಾ ಬಹಳ ದಿನಗಳ ಅವಕಾಶ ಕೊಡಬೇಕು. ಇನ್ನೂ ಜಾಸ್ತಿ ದಿವಸ ಸದನ ನಡೆಸಿ ಇಂಥವೆಲ್ಲಾ ಚರ್ಚೆಯಾಗಲು ಒಂದೊಂದು ಇಲಾಖೆಗೆ ಕನಿಷ್ಠ ಎರಡೆರಡು ದಿವಸ, ಅಂದರೆ ನೀವು ಧರಣಿ ಮಾಡಿದಿರಿ, ಸಭಾತ್ಯಾಗ ಮಾಡಿದಿರಿ, ಹೌದು ಅದೂ ಆಗಬೇಕು. ಧರಣಿ ಆಗಬೇಕು ಸಭಾತ್ಯಾಗ ಆಗಬೇಕು. ಗಮನ ಸೆಳೆಯುವ ಸೂಚನೆಗಳು ಇವೆಲ್ಲ ಪ್ರಾಮುಖ್ಯವಾಗಿ ನಡೆಯಬೇಕಾಗುತ್ತದೆ. ಆದರೆ ಸಂಪೂರ್ಣ ಚರ್ಚೆಗೆ ಅವಕಾಶ ಇರಬೇಕಾದ್ದು ಕರ್ತವ್ಯ. ಈ ಮಧ್ಯೆ ರಾಜ್ಯದ ರಾಜಕಾರಣ. ಏನು ಒಂದು ಬಿರುಗಾಳಿ ಎದ್ದಿದೆ ಹೊರಗಡೆ, ಗೊತ್ತಾಗುತ್ತಿಲ್ಲ ನಮಗೆ ಇಲ್ಲಿ ಒಳಗೆ ಕೂತಿದ್ದೇವೆ. ಹೊರಗಡೆ ಮೋಡ ಕವಿದ ವಾತಾವರಣ. ಗುಡುಗು ಸಿಡಿಲು ಮಿಂಚು ಒಂದು ರೀತಿ ದೆಹಲಿಯಿಂದ ರವಾನೆಗಳು ಇಲ್ಲಿ ರವಾನೆಗಳು–ಅನೇಕ ವಿಚಾರಗಳಲ್ಲಿ ಸಮ್ಮಿಶ್ರ ಸರ್ಕಾರ ಮಿಂಚು ಗುಡುಗು ಸಿಡಿಲು–ಯಾರ್‍ಯಾರಿಗೆ ಆ ಸಿಡಿಲು ಹೊಡೆಯುತ್ತದೋ ಇದೆಲ್ಲಾ ರಾಜ್ಯದ ರಾಜಕೀಯದ ಮೇಲೆ ಒಂದು ತರಹ ಪ್ರಜಾತಂತ್ರ ವ್ಯವಸ್ಥೆಗೆ ಇದು ಒಂದು ರೀತಿ ಅಪಾಯಕಾರಿ ಬೆಳವಣಿಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಪ್ರಕಾಶ್‌ರವರು ಮತ್ತು ಶಿವಕುಮಾರ್‌ರವರು ನಿಮ್ಮ ವಿಷಯವನ್ನೆ ಅವರೂ ಮಾತನಾಡುತ್ತಿರುವುದು. ಬೇಡಿಕೆಗಳ ಬಗೆ ಉತ್ತರ ಕೊಡುವ ಬಗ್ಗೆ ಚರ್ಚೆಯಾಗುತ್ತಿದೆಯೆ? ಪ್ರಚಲಿತ ರಾಜಕೀಯ ಪರಿಸ್ಥಿತಿ ಮುಳುಗುವವರು ಯಾರು ತೇಲುವವರ್‍ಯಾರು ಅಂತಲೇ ಚರ್ಚೆ ನಡೀತಿದೆ.

ಶ್ರೀ ವಾಟಾಳ್ ನಾಗರಾಜ್: ನೂರಕ್ಕೆ ನೂರೂ ಗೊತ್ತು, ಮಾನ್ಯ ಶಿವಕುಮಾರ್ ಅಲ್ಲಿ ಏಕೆ ಹೋಗಿದ್ದಾರೆ ಅಂತ ಗೊತ್ತು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ವಾಟಾಳ್‌ನಾಗರಾಜ್‌ರವರು ಮಂತ್ರೋಚ್ಚಾರಣೆಯಿಂದ ಎಷ್ಟು ಚೆನ್ನಾಗಿ ಮಾತನಾಡುತ್ತಿದ್ದಾರೆ ಕೇಳಿ ನಿಮ್ಮ ಸರ್ಕಾರದ ಬಗ್ಗೆ ಅಂತ ಅವರು ಹೇಳುತ್ತಿದ್ದರು. ಬೇರೆ ಏನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವಿಬ್ಬರೂ ಮಾತನಾಡುತ್ತಿರುವುದನ್ನು ನಾವು ಕೇಳಿಸಿಕೊಳ್ಳುತ್ತಿದ್ದೇವೆ, ನೀವು ಹೀಗೆ ಹೇಳಿಬಿಟ್ಟರೆ ಹೇಗೆ? ಇವರೇನು ಮಾತನಾಡುತ್ತಿದ್ದಾರೋ ಅದನ್ನೇ ನೀವು ಇಬ್ಬರು ಮಾತನಾಡುತ್ತಿರುವುದು, ಬೇರೇನೂ ಮಾತನಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ನನಗನ್ನಿಸುತ್ತದೆ ರಾಜಕೀಯದಲ್ಲಿ, ಚುನಾವಣೆಯಾಗಿ ಈಗ ತಾನೇ ಒಂದು ವರ್ಷ ಎರಡು ತಿಂಗಳು ಕಳೆದಿದೆ ಸರ್ಕಾರಬಂದು. ಒಂದು ರೀತಿ ಕಾರ್ಮೋಡ ರಾಜ್ಯದ ರಾಜಕೀಯದ ಮೇಲೆ ಪರಿಣಾಮ ಬೀರುತ್ತಾ ಇದೆ. ಇದರಿಂದೇನಾಗುತ್ತದೆ? ಆಡಳಿತ ಕುಸಿಯುತ್ತದೆ; ನಾವೆಷ್ಟೇ ಮಾತನಾಡಿದರೂ ಆಡಳಿತ ಸಂಪೂರ್ಣ ಕುಸಿಯುತ್ತದೆ. ಆಗ ಅಧಿಕಾರಿಶಾಹಿ ಮೇಲುಗೈಯಾಗುತ್ತದೆ. ನಿಮ್ಮ ದ್ವಂದ್ವನೀತಿಗಳು, ನಿಮ್ಮ ರಾಜಕಾರಣದ ಇತ್ತೀಚಿನ ಬೆಳವಣಿಗೆಗಳು ಇವೆಲ್ಲವೂ ರಾಜ್ಯದ ರಾಜಕಾರಣದ ಮೇಲೆ ತೀವ್ರ ಪರಿಣಾಮ ಬೀರುತ್ತವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮಲ್ಲಿರುವ ಪದ್ಧತಿ 5 ವರ್ಷಕ್ಕೊಮ್ಮೆ ಚುನಾವಣೆ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಾ ಇದ್ದೇನೆ ಸಮಗ್ರ ಚುನಾವಣಾ ಕಾಯಿದೇನೇ ಬದಲಾವಣೆಯಾಗಬೇಕು. ಸರ್ಕಾರಗಳು ಬದಲಾವಣೆಯಾಗಲಿ, ಆದರೆ ಶಾಸಕರು ಐದು ವರ್ಷ ಇರಲೇಬೇಕು. ಬೇಕಾದರೆ ಮಧ್ಯ ಒಂದಷ್ಟು ದಿವಸ ಶಾಸನಸಭೆ ಇಲ್ಲದೇ ಇರಬಹುದು, ಆದರೆ ಐದು ವರ್ಷ ಕಾಲ ಚುನಾಯಿತ ಶಾಸಕರಿಗೆ ವರ್ಷ ವರ್ಷ ಚುನಾವಣೆಗೆ ಹೋಗತಕ್ಕಂಥದ್ದು, ಹಾಗೂ

ಅವರ 5 ವರ್ಷದ ಅವಧಿ ಕಡಿಮೆಯಾಗುವುದು ಬೇಕಾಗಿಲ್ಲ. ಇವತ್ತೇನಾಗುತ್ತಿದೆ? ನಿನ್ನೆಯಿಂದ ನೋಡುತ್ತಿದ್ದೇವೆ. ಒಂದು ಕಡೆ ನಮ್ಮ ಜಾತ್ಯಾತೀತ ಜನತಾ ದಳದವರು ಏನು ದೊಡ್ಡ ಗುಡುಗು ಸಿಡಿಲು ಇದನ್ನೇ ಹೊರಡಿಸಿ ಬಿಟ್ಟಿದ್ದಾರೆ. ಈ ಪರಿಸ್ಥಿತಿ ನಿರ್ಮಾಣವಾದರೆ ಎಲ್ಲಿಗೆ ತಲುಪತಕ್ಕದ್ದು? ಒಂದು ಕಡೆ ಕಾಂಗ್ರೆಸ್‌ನಲ್ಲಿ ಅವರಲ್ಲೂ ಯಾದವೀ ಕಲಹ. ಇದೆಲ್ಲಾ ಶುರುವಾದಾಗ ರಾಜ್ಯದ ರಾಜಕಾರಣದ ಮೇಲೆ, ರಾಜ್ಯದ ಆಡಳಿತದ ಮೇಲೆ ಎಷ್ಟು ಪರಿಣಾಮ ಬೀರಬಹುದು ಎನ್ನತಕ್ಕ ಮಾತನ್ನು ಅತ್ಯಂತ, ಬಹಳವಾಗಿ ಚಿಂತನೆ ಮಾಡಬೇಕಾದಂತಹ ಪರಿಸ್ಥಿತಿ ಇದೆ. ನಾನು ಪತ್ರಿಕೆಯಲ್ಲಿ ನೋಡಿದೆ. ಮಾನ್ಯ ಸಿದ್ದರಾಮಯ್ಯನವರು ಹೊರಗಡೆ ಹೋಗುತ್ತಾರೆ. ಉಪ ಮುಖ್ಯಮಂತ್ರಿಯಾಗಿ ಮಾನ್ಯ ಪ್ರಕಾಶ್ ಅವರು ಆಗುತ್ತಾರೆಂದು ನನಗೆ ಅನಿಸುತ್ತದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ಅದನ್ನು ಅವರು ನಿರಾಕರಣೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನಾನು ಮುಂದಕ್ಕೆ ಬರುತ್ತಿದ್ದೇನೆ. ಇದು ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ಮಾನ್ಯ ಪ್ರಕಾಶ್ ಅವರು ಇವತ್ತು ಬೆಳಿಗ್ಗೆ ಪತ್ರಕರ್ತರ ಪ್ರಶ್ನೆಗಳಿಗೆ.

ಶ್ರೀ ನೆ.ಲ. ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೆ, ಪಕ್ಷಗಳ ಬೇಡಿಕೇನಾ? ಇದು ಯಾವ ಬೇಡಿಕೆ? ಯಾವ ಬೇಡಿಕೆ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ?

ಶ್ರೀ ವಾಟಾಳ್ ನಾಗರಾಜು: ನೀವು ಕಾರ್ಪೋರೇಷನ್, ಅಸೆಂಬ್ಲಿ ಎರಡನ್ನೂ ಇಟ್ಟುಕೊಂಡಿದ್ದೀರಲ್ಲಾ, ಅದರಿಂದ ನಿಮಗೆ ಗೊತ್ತಾಗುವುದಿಲ್ಲ.

(ಸದನದಲ್ಲಿ ನಗು)

ಶ್ರೀ ನೆ.ಲ. ನರೇಂದ್ರ ಬಾಬು: ನೀವೂ ಅಲ್ಲಿ ಇದ್ದು ಬಂದವರಲ್ಲವೇ?

ಶ್ರೀ ವಾಟಾಳ್ ನಾಗರಾಜ್: ನೋಡಿ ಸ್ವಲ್ಪ ಬೇಡಿಕೆ ಬಗ್ಗೆ ನಿಮಗೆ ಹೇಳಬೇಕಾ? ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ. ಆಡಳಿತ ಸುಧಾರಣೆ. ಹೇಗೆ ಆಡಳಿತ ಸುಧಾರಣೆ? ಆಡಳಿತ ಸುಧಾರಣೆ ಎಂದರೆ ಆಡಳಿತ ಹೇಗಿರಬೇಕು?

ಶ್ರೀ ಎಂ.ಟಿ. ಕೃಷ್ಣಪ್ಪ: ಆಡಳಿತ ಸುಧಾರಣೆ ಅದರಲ್ಲಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಆಡಳಿತ ಹೇಗಿರಬೇಕು? ಈ ಆಡಳಿತಕ್ಕೆ ಅಪಾಯ ಬರಬಾರದು. ಎಂದೂ ಅಪಾಯ ಒದಗಬಾರದು ಎನ್ನತಕ್ಕದ್ದೇ ಆಡಳಿತ ಸುಧಾರಣೆ. ಆದರೆ ನಾನು ನಿಮ್ಮ ಎರಡೂ ಪಕ್ಷದವರಿಗೆ ಅತ್ಯಂತ ಕಳಕಳಿಯಿಂದ ಕಿವಿ ಮಾತು ಹೇಳುತ್ತಿದ್ದೇನೆ. ನನಗೇನೂ ಚುನಾವಣೆಗೆ ಹೋಗಬೇಕೆಂದು ಇಚ್ಛೆ, ಇಲ್ಲ. ನನಗಂತೂ ಇಚ್ಛೆ ಇಲ್ಲ. ನಾನು ವೈಯಕ್ತಿಕವಾಗಿ ನಿಮಗೆ ಹೇಳುತ್ತಿದ್ದೇನೆ. ಐದು ವರ್ಷಕ್ಕೆ ಒಂದು ಸಾರಿ ಚುನಾವಣೆ ಆಗಬೇಕೇ ಹೊರತು ಮಧ್ಯಂತರ ಚುನಾವಣೆ ಬಗ್ಗೆ ನನಗಂತೂ ವೈಯಕ್ತಿಕವಾಗಿ ಇಚ್ಛೆ ಇಲ್ಲ. ಮಿಕ್ಕ ಯಾರಿಗೆ ಇಚ್ಛೆ ಇದೆಯೋ ಈ ಸದನದಲ್ಲಿ, ಅದು ನನಗೆ ಬೇಕಾಗಿಲ್ಲ. ಬಹುಶಃ ಆತ್ಮಸಾಕ್ಷಿ ಮತವನ್ನೇ ತೆಗೆದುಕೊಳ್ಳುವುದಾದರೆ 224 ಜನಕ್ಕೂ ಚುನಾವಣೆ ಬೇಕಾಗಿಲ್ಲ. ಇದು ಸ್ಪಷ್ಟ. ಆತ್ಮಸಾಕ್ಷಿ ಮತ. ಮಾನ್ಯ ಶಿವಕುಮಾರ್ ನೀವು ಚುನಾವಣೆಗೆ ಹೋಗಬೇಕಾ? ಶಿವಕುಮಾರ್‌ಗೆ ಚುನಾವಣೆಗೆ ಹೋಗಬೇಕೆಂದು ಮನಸ್ಸಿನಲ್ಲಿ ಇರಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಶಿವಕುಮಾರ್ ಅವರನ್ನು ಚುನಾವಣೆ ಬಗ್ಗೆ ಅಭಿಪ್ರಾಯ ಕೇಳಿದರೆ, ಬಹಿರಂಗವಾಗಿ ಹೀಗೆ ಕೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ನಿಜ ಹಗೆಯವರನ್ನು ಮರಣದ ಬಗ್ಗೆ ಕೇಳಿದ ಹಾಗೆ, ನಾಳೆ ಬೆಳಗ್ಗೆ ಎಂತಲೇ ಹೇಳುತ್ತಾರೆ. ಅದು ಸರಿ ಅದನ್ನು ನಾನು ಒಪ್ಪುತ್ತೇನೆ. ಆದರೆ ವೈಯಕ್ತಿಕವಾಗಿ ನಾನು ಹೇಳುತ್ತಿದ್ದೇನೆ. ನಮಗೆ ಚುನಾವಣೆ ಬೇಕಾಗಿಲ್ಲ. ಏಕೆ? ಏನಾಗಿದೆ? ಜನ ನಿಮಗೆ ಐದು ವರ್ಷಕ್ಕೆ ಆಯ್ಕೆ ಮಾಡಿದ್ದಾರೆ. ಸಮ್ಮಿಶ್ರ ಸರ್ಕಾರ ನೀವೇನು ಹೇಳಿದಿರಿ? ನಾವಿಬ್ಬರೂ ಒಟ್ಟಾಗಿದ್ದೇವೆ, ಆಡಳಿತ ನಡೆಸುತ್ತಿದ್ದೇವೆ ಎಂದು ಯಾರಿಗೋಸ್ಕರ? ನಿಮ್ಮನ್ನು ಹೊರಗಡೆ ಇಡುವುದಕ್ಕೆ ಎಂದು ಮಾನ್ಯ ಯಡಿಯೂರಪ್ಪನವರಿಗೆ ಹಾಗೂ ಅವರ ಗುಂಪಿಗೆ ನೀವು ಹೇಳಿದಿರಿ. ಮಾನ್ಯ ಯಡಿಯೂರಪ್ಪನವರು ಒಪ್ಪಿಕೊಂಡರು. ಅವರೇನೂ ಧಾಳಿ ಮಾಡಿ ನಿಮ್ಮ ಹತ್ತಿರ ಬರುವುದಕ್ಕೆ ಹೋಗಲಿಲ್ಲ. ಒಪ್ಪಿಕೊಂಡರು, ಆಯಿತು, ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುತ್ತೇವೆ ಎಂದು ಹೇಳಿದರು. ನೀವೇನು ಮಾಡುತ್ತಿದ್ದೀರಿ? ನಿಮ್ಮ ಪರಿಸ್ಥಿತಿ ಏನು? ಸುಮಾರು ಒಂದು ವಾರ, ಹದಿನೈದು ದಿವಸದಿಂದ ಪತ್ರಿಕೆಯಲ್ಲಿ ಬರುತ್ತಿರತಕ್ಕಂಥ ವಿಚಾರಗಳನ್ನು ರಾಜ್ಯದ ಪ್ರಜೆ, ಯಾರು ನಮಗೆ ಐದು ವರ್ಷ ಮತ ಕೊಟ್ಟಂತಹ ಪ್ರಜೆ ಏನು ತೀರ್ಮಾನ ಮಾಡಬಹುದು? ಎಲ್ಲಿಗೆ ನಾವು ತಲುಪಬಹುದು? ದಿನಾ ಒಂದು ಹೇಳಿಕೆ ದೆಹಲಿಯಲ್ಲಿ ಒಂದು, ಬೆಂಗಳೂರಿನಲ್ಲಿ ಒಂದು, ಮೈಸೂರಿನಲ್ಲಿ ಒಂದು, ಬಳ್ಳಾರಿಯಲ್ಲಿ ಒಂದು ಈ ತರಹ ನೀವು ಹೇಳಿಕೊಂಡು ಕುಳಿತರೆ ಪರಿಸ್ಥಿತಿ ಏನು? ಎಲ್ಲಿಗೆ ತಲುಪುತ್ತೇವೆ? ಅಂದರೆ ಆಡಳಿತ ಕುಸಿಯುತ್ತದೆ ಆಡಳಿತ ತೀವ್ರವಾಗಿ ಕೆಳಮಟ್ಟಕ್ಕೆ ಹೋಗುತ್ತದೆ. ಒಳ್ಳೆಯ ಆಡಳಿತ ಕೊಡುವುದಕ್ಕೆ ನಮಗೆ ಆಗುವುದಿಲ್ಲ. ನಮ್ಮ ಈ ನೀತಿಯನ್ನು ನೋಡಿ ಐಎಎಸ್, ಐಪಿಎಸ್ ಅಧಿಕಾರಿಗಳು ಅವರದ್ದೇ ಆದಂತಹ ನಾಟಕ ಆಡುತ್ತಾರೆ. 30 ವರ್ಷ ಅವರು ಚೆನ್ನಾಗಿ ನಾಟಕ ಆಡುತ್ತಾರೆ. ಯಾವ ಸರ್ಕಾರ ಬಂದರೂ, ಆ ಸರ್ಕಾರ. ಈ ಸರ್ಕಾರ ಯಾವುದೇ ಸರ್ಕಾರ, ಬರಲಿ, ಯಾವುದೇ ಮುಖ್ಯಮಂತ್ರಿ ಬರಲಿ. ಬಹಳ ವಿನಯದಿಂದ ಆಂಜನೇಯನ ಪಾತ್ರ ಮಾಡಿಕೊಂಡಿರುತ್ತಾರೆ. ಅದರಲ್ಲೇನೂ ಬೇರೆ ಮಾತಿಲ್ಲ. ಯಾವುದೇ ಸರ್ಕಾರ ಇರಬಹುದು. ಒಂದು ದಿನ ಅವರಿಗೆ ಯಾರ ಬಗ್ಗೆನೂ ಕಾಳಜಿ ಇಲ್ಲ. ನನಗೆ ಅನ್ನಿಸುತ್ತದೆ. ನೀವು ಬರುತ್ತೀರಾ? ಮುಖ್ಯಮಂತ್ರಿ ಆಗುತ್ತೀರಿ, ನಿಮಗೆ ಆಂಜನೇಯನ ಪಾತ್ರ. ಬಹಳ ಬುದ್ಧಿವಂತಿಕೆಯಿಂದ ಮಾಡುತ್ತಾರೆ. ಆಡಳಿತ ಸಮಗ್ರವಾಗಿ ಆಗಬೇಕಾದರೆ, ನನಗೆ ಅನ್ನಿಸುತ್ತದೆ, ಅವರು ಈ ಪಾತ್ರ ಮಾಡಿ, ಆ ರೀತಿ ಇದ್ದಾರೆ. ಅವರ ಮೇಲುಗೈ ಆಗುವುದಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ. ಅಧಿಕಾರಶಾಹಿ ಬೆಳೆಯುವುದಕ್ಕೆ ನೀವು ಅವಕಾಶ ಕೊಡಬೇಡಿ. ಮಾನ್ಯ ಅಂದಾನಿಯವರು ಸ್ವಲ್ಪ ದಯವಿಟ್ಟು ನೀವು ಸಭೆಯಲ್ಲಿ ಇರಬೇಕು. ಅವರು ನಮ್ಮ ಸ್ನೇಹಿತರು. ನಿಮ್ಮಲ್ಲಿ ಅತ್ಯಂತ ಕಳಕಳಿಯಿಂದ ನಾನು ಮನವಿ ಮಾಡುತ್ತಿದ್ದೇನೆ. ನಿಮ್ಮ ವ್ಯಾಜ್ಯಗಳನ್ನೆಲ್ಲಾ ಬದಿಗೊತ್ತಿ ಒಳ್ಳೆಯ ಆಡಳಿತ ಕೊಡಿ. ಈಗ ಒಂದು ವರ್ಷದ ಮೇಲೆ ಎರಡು ತಿಂಗಳು ಆಗಿ ಹೋಯಿತು. ಒಳ್ಳೆಯ ಆಡಳಿತ ಕೊಡಿ. ಜನರ ಪರವಾಗಿ, ರೈತರ ಪರವಾಗಿ ಜನಸಾಮಾನ್ಯರ ಪರವಾಗಿ, ಎಲ್ಲರ ಪರವಾಗಿ ಈ ರಾಜ್ಯದ ಸಮಗ್ರ ಅಭಿವೃದ್ಧಿ, ಬಗ್ಗೆ ನೀವು ಪ್ರಾಮಾಣಿಕ ವಾದಂತಹ ನಿಮ್ಮ ಕೆಲಸ ಮಾಡಲಿಲ್ಲ. ಎಂದರೆ ಅತ್ಯಂತ ಅಪಾಯಕಾರಿ ಬೆಳವಣಿಗೆಗೆ ನಾವು ಹೋಗುತ್ತೇವೆ. ನನಗಂತೂ ಇದು ಈ ತರಹ ಹೋಗತಕ್ಕದ್ದು ಒಳ್ಳೆಯದಲ್ಲ. ಏನು ಜನ ಎಷ್ಟು ಅಧಿಕಾರಿಗಳು ಈ ರಾಜ್ಯದಲ್ಲಿ ಪ್ರಾಮಾಣಿಕರು ಇದ್ದಾರೆ? ಹೇಳಿ. ಆಗಲೇ ಮಾನ್ಯ ರಾಜೇಂದ್ರನ್ ಅವರು ಮಾತನಾಡುವಾಗ ನಾನು ಸಂತೋಷ ಪಟ್ಟೆ. ಶಾಸಕರು, ಪ್ರಜಾತಂತ್ರ ಚುನಾಯಿತ ಪ್ರತಿನಿಧಿಗಳು ರಸ್ತೆಯಲ್ಲಿ ಹೋಗುವಾಗ ಇವತ್ತು ಮತದಾರರು ಏನು ಹೇಳುತ್ತಾರೆ? ರಾಜಕಾರಣಿಗಳು ಎಂದರೆ

ಎಲ್ಲರೂ ಕೈ ತೋರಿಸುತ್ತಾರೆ. ರಾಜಕಾರಣಿಗಳೆಲ್ಲರಿಗೂ ಕೈ ತೋರಿಸುತ್ತಾರೆ. ಈ ಪರಿಸ್ಥಿತಿ, ವ್ಯವಸ್ಥೆಗೆ ಕಾರಣವೇನು? ಈ ವ್ಯವಸ್ಥೆಗೆ ಕಾರಣವೇನು? ಆದ್ದರಿಂದ ನಮ್ಮಲ್ಲಿ ಪ್ರಾಮಾಣಿಕತೆ ಬರಬೇಕು. ಅಧಿಕಾರಿಗಳನ್ನು ನಾವು ಹದ್ದುಬಸ್ತಿನಲ್ಲಿಡಬೇಕು. ಅದಕ್ಕೆ ನಾನು ಮಾನ್ಯ ಅಧ್ಯಕ್ಷರೆ, ಹಿಂದೆ ಒಂದು ಸಾರಿ ಹೇಳಿದ್ದೆ. ಸುಮಾರು 20 ವರ್ಷದ ಸಮಗ್ರ ಆಡಳಿತದ ಬಗ್ಗೆ ಐಎಎಸ್ ಅಧಿಕಾರಿಗಳು, ಐಪಿಎಸ್ ಅಧಿಕಾರಿಗಳು ಮತ್ತು ರಾಜಕಾರಣಿಗಳ ಬಗ್ಗೆ ಕರ್ನಾಟಕ ರಾಜ್ಯದಲ್ಲಿ 20 ವರ್ಷದಿಂದ ಇದ್ದ ಐಎಎಸ್, ಐಪಿಎಸ್ ಅಧಿಕಾರಿಗಳು, ಮತ್ತೆ ರಾಜಕಾರಣಿಗಳು, ಇವರ ಬಗ್ಗೆ ಒಂದು ಸಮಗ್ರವಾದ ತನಿಖೆ ಆಗಬೇಕು ತನಿಖೆ ಆಗಲಿ, ಇದೊಂದು ಆದರ್ಶ, ಮತ್ತು ಮಾದರಿ. ತನಿಖೆ ಆಗಲಿ. ಯಾರ್ಯಾರ ಆಸ್ತಿ ಎಲ್ಲೆಲ್ಲಿದೆ? ಕೆಲವು ಅಧಿಕಾರಿಗಳು ಆಸ್ತಿ ಎಲ್ಲಿ ಮಾಡಿದ್ದಾರೆ? ಇಂಡಿಯಾ ದೇಶದಲ್ಲಿ ಎಲ್ಲೆಲ್ಲಿ ಅವರು ಆಸ್ತಿಗಳನ್ನು ಮಾಡಿದ್ದಾರೆ? ಏನೇನಾಗಿದೆ? ಬೇರೆ ಬೇರೆ ದೇಶದಲ್ಲಿ ಇಟ್ಟಿರತಕ್ಕಂಥ ಹಣ ಎಷ್ಟು? ಇದು ತನಿಖೆ ಆಗಲಿ, ಸಿಬಿಐನಿಂದಲಾದರೂ ಆಗಲಿ, ಯಾವುದೇ ತನಿಖೆಗೆ ನಾನಂತೂ ತಯಾರಾಗಿದ್ದೇನೆ. ನಡೆಯಲಿ 20–25 ವರ್ಷದವರೆಗೆ ಸಮಗ್ರವಾದ ತನಿಖೆ, ನಿಷ್ಪಕ್ಷಪಾತವಾದ ತನಿಖೆ ಆಗಲಿ. ಅವರು ನಿವೃತ್ತರಾಗಿರಲಿ, ಈಗ ಇರಲಿ, ಇಲ್ಲದೇ ಇರಲಿ. ನಾನು ಎಲ್ಲರೂ ಕೆಟ್ಟವರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರು ಬಹಳ ದಕ್ಷರು ಇದ್ದಾರೆ. ಅವರಿಗೆ ನಡವಳಿಗೆ ಇಲ್ಲ. ಕೆಲವರು ಪ್ರಾಮಾಣಿಕರು ಇದ್ದಾರೆ, ಅವರು ಹೊಂದಾಣಿಕೆ ಇಲ್ಲ. ಕೆಲವರು ನೀತಿವಂತರು ಇದ್ದಾರೆ. ಅವರು ನಮ್ಮನ್ನು ಬಿಟ್ಟರೆ ಜಗತ್ತಿನಲ್ಲಿ ಬೇರೆ ಬುದ್ಧಿವಂತರಿಲ್ಲ, ನಾವೇ ಸೂರ್ಯ ಚಂದ್ರ ಎಂದು ಹೇಳುತ್ತಾರೆ. ಇದು ಒಳ್ಳೆಯದೂ ಅಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೊಂದಾಣಿಕೆ ಮಾಡಿಕೊಂಡು, ಹೊಂದಿಕೊಂಡು ಹೋಗಬೇಕಾದ್ದು ಯಾವುದೇ ಐಎಎಸ್, ಐಪಿಎಸ್ ಅಧಿಕಾರಿಗಳ ಕರ್ತವ್ಯ. ಅದು ಅವರು ಮಾಡುತ್ತಿರತಕ್ಕದ್ದು. ಒಂದು ಹಂತದಲ್ಲಿ ನಾನು ತಮಗೆ ಹೇಳುತ್ತೇನೆ. ಏನು ಐಎಎಸ್, ಇಲ್ಲದೇ ಇದ್ದರೆ ಏನಾಗಬಹುದು? ಐಪಿಎಸ್ ಇಲ್ಲದೇ ಇದ್ದರೆ ಈ ರಾಜ್ಯ, ದೇಶ ಏನಾಗಬಹುದು? ಏನು ಸಂವಿಧಾನದಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕು. ಇವರನ್ನೇ ಇಟ್ಟುಕೊಳ್ಳಬೇಕು. ಇವರನ್ನು ಬಿಟ್ಟರೆ ಆಡಳಿತ ನಡೆಸುವುದಕ್ಕೆ ಆಗುವುದೇ ಇಲ್ಲ ಎಂದು ಎಲ್ಲಾದರೂ ಇದೆಯಾ? ನಾನು ಆ ತರಹ ಇದೆ ಎಂದೂ ಕಾಣಲಿಲ್ಲ. ನಮ್ಮ ರಾಜ್ಯದವರು, ಕರ್ನಾಟಕ ಸೇವೆಯಲ್ಲಿರತಕ್ಕವರನ್ನು ಇಟ್ಟುಕೊಳ್ಳಬಹುದು. ಏನಂತೆ? ನನಗೆ ಅರ್ಥ ಆಗಲಿಲ್ಲ. ಐಎಎಸ್ ಅಂದ ತಕ್ಷಣ ಅದೇನೋ ದೊಡ್ಡ ಸ್ವರ್ಗದಿಂದ ನೇರವಾಗಿ ಬಂದವರು ಅಂತ ಭಾವನೆಯೇ? ಇವರು ಸ್ವರ್ಗದಿಂದ ಬಂದವರು. ನಾವು ರಾಜಕಾರಣಿಗಳು ಪಾಪದ ಕೆಲಸ ಮಾಡಿದವರೇನೋ? ಮತ್ತು ಐಎಎಸ್ ಅಧಿಕಾರಿಗಳ ಕೆಳಗಡೆ ಇರತಕ್ಕವರು ಅವರು ನರಕದಲ್ಲಿ ಇದ್ದಾರೇನೋ ಎನ್ನುವ ಈ ಭಾವನೆ ಬರುವುದು ಬೇಡ. ಲೋಕಸಭೆ ಅಥವಾ ಎಲ್ಲೋ ಒಂದು ಕಡೆ ಇದು ತೀರ್ಮಾನ ಆಗಬೇಕು. ಇಡೀ ರಾಷ್ಟ್ರದ ಎಲ್ಲಾ ಕಡೆಗೆ ಇದು ಸಮಗ್ರವಾದಂತಹ ಚರ್ಚೆ ಆಗಬೇಕಾದ್ದು ಅತ್ಯಂತ ಪ್ರಾಮುಖ್ಯತೆ, ಅತ್ಯಂತ ಮುಖ್ಯ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದು ಪರಿಣಾಮಕಾರಿಯಾಗಿ ಹೋಗಬೇಕು ಎನ್ನತಕ್ಕ ಮಾತನ್ನು ಅತ್ಯಂತ ಕಳಕಳಿಯಿಂದ ನಾನು ಹೇಳುತ್ತಿದ್ದೇನೆ ಇಲ್ಲದೇ ಇದ್ದರೆ ಆಡಳಿತವನ್ನು ಹದ್ದುಬಸ್ತಿನಲ್ಲಿ ಇಡುವುದಕ್ಕೆ ಆಗುವುದಿಲ್ಲ. ಆಡಳಿತ ಸರಿಯಿಲ್ಲ ಎನ್ನತಕ್ಕ ಮಾತನ್ನು ತಮಗೆ ಹೇಳುತ್ತಿದ್ದೇನೆ. ಮತ್ತು ನಮ್ಮ ಮಂಡಲಗಳ ನಿಗಮ, ಎಷ್ಟು ಬೇಕು? ಸ್ವಲ್ಪ ಹೆಚ್ಚು ಕಡಿಮೆ 80 ಇದೆ. ಇವು ಯಾರಿಗೆ ಬೇಕಾಗಿದೆ? ಬೇಕಾಗಿಲ್ಲ. ಇಲ್ಲಿ 28 ಜನ ಮಂತ್ರಿಗಳು ಇದ್ದಾರೆ. ಜೊತೆಗೆ ಪಾರ್ಲಿಮೆಂಟರಿ ಸೆಕ್ರೆಟರಿ

ಬೇರೆ ನಾವು ಮಾಡುತ್ತಿದ್ದೇವೆ. ಕಲಷ್ಟ 50 ನಿಗಮ ಮಂಡಲಿಗಳನ್ನು ರದ್ದುಮಾಡಿ, ಬೇಕಾಗಿಲ್ಲ, ಯಾರಿಗೋಸ್ಕರ ಇದು? ಯಾರಿಗೆ ಕೊಡುವುದಕ್ಕೋಸ್ಕರ ಇದು? ಈಗ ನೂತನ ವಿದ್ಯುಚ್ಛಕ್ತಿ ಕಾರ್ಖಾನೆ, ಅದೇ ಸಾಯುತ್ತಿದೆ. ಅಲ್ಲಿಗೊಬ್ಬ ಅಧ್ಯಕ್ಷ. ಮೈಸೂರು ಲ್ಯಾಂಪ್ ಅಲ್ಲಿಗೆ ಒಬ್ಬ ಅಧ್ಯಕ್ಷ. ಅದೇ ಸಾಯುತ್ತಿದೆ ಸಾವಿನ ಜೊತೆಯಲ್ಲಿ ಅದರ ಹೆಣ ಹೊರುವುದಕ್ಕೆ ಏಕೆ ಅಧ್ಯಕ್ಷರುಗಳು ಹೋಗಬೇಕು? ಬೇಕಾಗಿಲ್ಲ. ನಾನು ಹೇಳತಕ್ಕದ್ದು ಕನಿಷ್ಠ 50 ನಿಗಮ ಮಂಡಲಿಗಳನ್ನು ಸಂಪೂರ್ಣವಾಗಿ ಇವರು ರದ್ದು ಮಾಡಲೇಬೇಕು. ಅದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಅವರು ಕೈಗೊಳ್ಳಬೇಕು ಎನ್ನತಕ್ಕ ಮಾತನ್ನು ನಾನು ಅತ್ಯಂತ ವಿಶ್ವಾಸದಿಂದ ಹಾಗೂ ಪ್ರೀತಿಯಿಂದ ಹೇಳುತ್ತಿದ್ದೇನೆ. ನಿನ್ನೆ ನಮ್ಮ ಸ್ನೇಹಿತರು ಮಾತನಾಡುವಾಗ ಹೇಳಿದರು. ನನ್ನ ಅತ್ಯಂತ ಪರಮ ಅಭಿಮಾನಿಗಳಲ್ಲಿ ಡಾ: ಅನ್ನದಾನಿ ಅವರೂ ಒಬ್ಬರು. ಬಹಳ ಅಭಿಮಾನ. ಮೊದಲಿನಿಂದ, ಕಾಲೇಜಿನಿಂದಲೂ ಅಭಿಮಾನಿ. ಮಾನ್ಯ ಎಸ್.ಎಸ್. ಪಾಟೀಲ್ ಅವರು ಕನ್ನಡದ ಬಗ್ಗೆ ಭಾಷಣ ಶುರು ಮಾಡಿದರು. ಮಾನ್ಯ ಎಸ್‌ಎಸ್. ಪಾಟೀಲ್ ಅವರ ಕನ್ನಡ ಅಭಿಮಾನವನ್ನು ನಾನು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ನಾವು ಇಲ್ಲಿದ್ದಾಗಲೂ ಅವರು ಕನ್ನಡದ ಬಗ್ಗೆ ಬಹಳ ಪ್ರಾಮಾಣಿಕವಾಗಿ ಮಾತನಾಡಿದ್ದಾರೆ, ಹೇಳಿದ್ದಾರೆ. ಮತ್ತು ನನ್ನನ್ನೂ ನೆನೆಸಿಕೊಂಡಿದ್ದಾರೆ. ಅವರು ಮಾತನಾಡುವುದಕ್ಕೆ ಎದ್ದರು. ಯಾವ ಭಾಷೆಯಲ್ಲಿರಬೇಕು, ಏನಿರಬೇಕು, ಭಾಷೆಯ ಸಮಸ್ಯೆಯಾಗಲಿ, ಕೋಮು ಸಮಸ್ಯೆಯಾಗಲಿ, ಜಾತಿ ಸಮಸ್ಯೆಯಾಗಲಿ, ಇದರ ಬಗ್ಗೆ ಮಾತನಾಡುವಾಗ ನಾವು ಉದ್ವೇಗಕ್ಕೊಳಗಾಗಿ ಅದನ್ನು ಬೇರೆ ರೀತಿಯಲ್ಲಿ ತಿರುಚದಿರುವ ಹಾಗೆ ನಾವು ಹೋಗಬೇಕೆನ್ನುವ ಒಂದು ವಾತಾವರಣದಲ್ಲಿ ಅಲ್ಲಿ ಪಾಟೀಲರು ಮಾತನಾಡುವಾಗ ಅನ್ನದಾನಿಯವರು ತೀವ್ರವಾಗಿ ಪ್ರತಿಭಟನೆಗೆ ಇಳಿದರು. ನಾನು ಅವರ ಮೇಲೆ ಪ್ರತಿಭಟನೆಗಿಳಿಯಲು ತಯಾರಿರಲಿಲ್ಲ. ಏಕೆ ತಯಾರಾಗಿರಲಿಲ್ಲವೆಂದರೆ, ನಾನು ಅವರ ಮೇಲೆ ಜಗಳವಾಡುವ ಮಟ್ಟದಲ್ಲಿಲ್ಲ. ಇದೇನು ಅವರಿಗೆ ಹೆದರಿಕೊಂಡು ಅಥವಾ ನನಗೆ ಅವರು ಹೆದರಿಕೊಂಡರು ಎನ್ನುವ ಪ್ರಶ್ನೆಯಲ್ಲ. ಅವರ ಮೇಲೆ ನನಗೆ ಅಭಿಮಾನ. ನನ್ನ ಮೇಲೆ ಅವರಿಗೆ ಅಭಿಮಾನ. ಎಲ್ಲಾ ಮಾತನಾಡುತ್ತಿದ್ದಾಗ, ಅವರು ಅಂದುಬಿಟ್ಟರು. 'ವಾಟಾಳ್ ನಾಗರಾಜ್'ರವರ ಮಕ್ಕಳು ಎಲ್ಲಿ ಓದುತ್ತಿದ್ದಾರೆ? ನನ್ನ ಹತ್ತಿರ ಇದೆ, ಇಂಗ್ಲೀಷ್ ಓದುತ್ತಿದ್ದಾರೆ' ಎಂದು ಹೇಳಿದರು. ಹೇಳಲಿ, ಸಂತೋಷ. ಅದಕ್ಕೂ ನಾನು ಏಕೆ ಹೇಳಲಿಲ್ಲವೆಂದರೆ, ಆ ವಿಚಾರವನ್ನು ಇಲ್ಲಿ ದೊಡ್ಡದು ಮಾಡಬೇಕೆಂಬ ಉದ್ದೇಶದಿಂದ ಹೋಗಲಿಲ್ಲ. ಇದು ಪತ್ರಿಕೆಗಳಲ್ಲಿ ಬಂತು. ನಾನು ಎರಡು ಪತ್ರಿಕೆಗಳನ್ನು ತಂದೆ. ಈ ಪತ್ರಿಕೆಗಳಲ್ಲಿ ಬಂತು. ಈ ಮಾತನ್ನು ಅನ್ನದಾನಿಯವರು ಒಪ್ಪುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಪತ್ರಿಕೆಯಲ್ಲಿ ಏನು ಬಂದಿದೆಯೆಂದರೆ, 'ವಾಟಾಳರ ಕನ್ನಡ ಕಂಠಕ್ಕೆ ಕೊನೆಗೂ ಬಿತ್ತಲ ಬೀಗ' ಅಂತ..ನನಗೆ ಬೀಗ ಹಾಕತಕ್ಕಂಥ ಕಂಪನಿ ಇನ್ನೂ ಬಂದಿಲ್ಲ. ನನ್ನ ಬಾಯಿಗೆ ಹಾಕುವುದಕ್ಕೆ ಬೀಗ ಇನ್ನೂ ತಯಾರಾಗಿಲ್ಲ. ಆದುದರಿಂದ, ಬಿತ್ತಲ್ಲ ಅಂತ. ಇದು ಪ್ರಶ್ನೆ. ಆಮೇಲೆ ಇಲ್ಲಿ ಬೀಗವನ್ನೇ ಹಾಕಿಬಿಟ್ಟಿದ್ದಾರೆ. 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಬಂದಿರುವ ಒಂದು ಕಾರ್ಟೂನಿನಲ್ಲಿ ಬೀಗ ಹಾಕಿಬಿಟ್ಟಿದ್ದಾರೆ. ಬಾಯಿಗೆ ಬೀಗ ಹಾಕಿದಂತೆ ಕಾರ್ಟೂನ್ ಬರೆದಿದ್ದಾರೆ. ಈಗ ನನ್ನ ಬಾಯಿ ನೋಡಿ, ನಾನು ಮಾತನಾಡುತ್ತಿಲ್ಲವೇ? ಎಲ್ಲಿ ಬೀಗ ಇದೆ? ಇಲ್ನೋಡಿ. ಆಯಿತಾ, ನಾನು ಈ ವಿಚಾರವಾಗಿ ತಕ್ಷಣ ಎದ್ದು ಮಾತನಾಡಿ ನಾನು, ಅನ್ನದಾನಿಯವರು ಜಗಳಕ್ಕೆ ನಿಲ್ಲುವುದಕ್ಕಂತೂ ತಯಾರಾಗಿರಲಿಲ್ಲ. ನಾನಂತೂ ತಯಾರಾಗಿಲ್ಲ. ಇನ್ನು ಡಾ: ಸಿದ್ದಲಿಂಗಯ್ಯನವರು. ಅವರು ಇವೊತ್ತು ಏನು ಹೇಳುತ್ತಾರೆ?

ವಾಟಾಳ್ ನಾಗರಾಜ್‌ರವರ ಭಾಷಣವನ್ನು ಕೇಳಿ ನನಗೆ ಪ್ರಚೋದನೆಯಾಗಿ ನಾನು ಇವೊತ್ತು ದೊಡ್ಡ ಸಾಹಿತಿಯಾಗಿದ್ದೇನೆ ಎಂದಿದ್ದಾರೆ. ಅದು ಬಿಡಿ. ಅಧ್ಯಕ್ಷರೆ, ನನ್ನ ಜೀವನದಲ್ಲಿ 1960ನೇ ಇಸವಿಯಲ್ಲಿ ನಾನು ಕನ್ನಡ ಬಾವುಟವನ್ನು ಹಿಡಿದೆ. 1962ರಲ್ಲಿ ನನಗೆ ಬೂಟ್ಸ್ ಏಟು. ಇಂದಿನವರೆಗೂ ನಾನು ಕನ್ನಡದ ಬಾವುಟ ಹಿಡಿದಿದ್ದೇನೆ. ನನ್ನ ಕೊನೆಯ ಉಸಿರಿರುವವರೆಗೂ ಕನ್ನಡದ ಬಾವುಟ ಹಿಡಿಯುತ್ತೇನೆ. ಅದು ಬಿಟ್ಟು ಮತ್ತೊಂದಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಆಮೇಲೆ, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಇವೊತ್ತು ಬಂತು. 'ವಾಟಾಳ್ ಮಕ್ಕಳು ಕಲಿತದ್ದು ಇಂಗ್ಲೀಷ್ ಶಾಲೆಯಲ್ಲಿ'. ನೋಡಿ. ಈ ಪೇಪರ್‌ಗೆ ಮುತ್ತಿಡುತ್ತೇನೆ. ಸಧ್ಯ, ನನ್ನನ್ನು ಬೈದಾಗಲಾದರೂ ಇವರು ಪತ್ರಿಕೆಯಲ್ಲಿ ಹಾಕಿದರು. ನನ್ನನ್ನು ಹೊಗಳಿದಾಗ ಇವರು ಹಾಕಿರಲಿಲ್ಲ. ನನಗೆ ಬೈದರಲ್ಲಾ, ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಕನಿಷ್ಠ ನಾನು ಹೇಳಿದ ಮೇಲಾದರೂ ಇವರು ನನ್ನ ಬಗ್ಗೆ ಇಷ್ಟು ಚೆನ್ನಾಗಿ ಹಾಕಿದ್ದಾರೆ. ಇಲ್ಲದಿದ್ದರೆ, ಪತ್ರಿಕೆಯಲ್ಲಿ ಮುದ್ರಿಸುತ್ತಿರಲಿಲ್ಲ. ನಾನು ತಮಗೆ ಹೇಳುತ್ತಿದ್ದೇನೆ. ನನ್ನ ಮಕ್ಕಳಿಬ್ಬರೂ ಕನ್ನಡ ಶಾಲೆಯಲ್ಲಿಯೇ ಕಲಿತಿರತಕ್ಕಂಥಾದ್ದು. ನನ್ನ ಮಗಳು ಎಂ.ಎ.ನಲ್ಲಿ ಸ್ವರ್ಣ ಪದಕ ಪಡೆದಿರತಕ್ಕಂಥಾದ್ದು. ನನ್ನ ಇಬ್ಬರೂ ಮಕ್ಕಳು ಕನ್ನಡ ಶಾಲೆಯಲ್ಲಿ ಕಲಿತಿಲ್ಲ ಅಂತ ನೀವು ರುಜುವಾತುಪಡಿಸುವುದಾದರೆ ನಾಳೆ ನಾನು ಈ ವಿಧಾನಸಭೆ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೊರಗಡೆ ಹೋಗುತ್ತೇನೆ. ಆಯಿತಾ. ಇದನ್ನು ಅಷ್ಟಕ್ಕೆ ನಿಲ್ಲಿಸೋಣ... ಮೊಮ್ಮಕ್ಕಳು, ಮರಿ ಮಕ್ಕಳು ಯಾರ್‍ಯಾರದೋ ಮಕ್ಕಳಿಗೆ ನಾನು ಹೊಣೆಯೆ ಚೆನ್ನಾಗಿದೆ.

ಡಾ: ಕೆ. ಅನ್ನದಾನಿ: ಆಯಿತು. ತಮ್ಮ ಮಕ್ಕಳನ್ನೆಲ್ಲಾ ಕನ್ನಡದಲ್ಲಿಯೇ ಓದಿಸಿದ್ದೀರಿ. ಅವರು ಪದಕವನ್ನೂ ತೆಗೆದುಕೊಂಡಿದ್ದಾರೆ, ತುಂಬಾ ಸಂತೋಷ. ನಾನು ಒಬ್ಬ ಕನ್ನಡ ವಿದ್ಯಾರ್ಥಿಯಾಗಿದ್ದು, ಅವರನ್ನು ಅಭಿನಂದಿಸುತ್ತೇನೆ. ನೀವು ನಿಮ್ಮ ಮಕ್ಕಳ ಜೊತೆಗೆ, ಅದೂ ನಿಮ್ಮ ವಂಶವೇ, ಮೊಮ್ಮಕಳು, ನಿಮ್ಮ ತಲೆಮಾರು ಇರುವವರೆಗೂ, ನೀವಿರುವವರೆಗೂ ನಿಮ್ಮ ವಂಶದಲ್ಲಿ ಯಾರು ಬರುತ್ತಾರೋ, ಪ್ರತಿಯೊಬ್ಬರೂ ಕೂಡ ಕನ್ನಡದಲ್ಲೇ ಓದಬೇಕು, ಕನ್ನಡದಲ್ಲೇ ಬರೆಯಬೇಕು. ಇದನ್ನು ನೀವು ಮಾಡಬೇಕು. ಮಾಡದಿದ್ದರೆ, ನಿಮ್ಮ ಮಕ್ಕಳನ್ನು ಕನ್ನಡದಲ್ಲಿ ಓದಿಸುವುದು, ನಿಮ್ಮ ಮೊಮ್ಮಕ್ಕಳನ್ನು ಇಂಗ್ಲೀಷಿನಲ್ಲಿ ಓದಿಸುವುದು ಯಾವ ನ್ಯಾಯ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅನ್ನದಾನಿಯವರೆ, ವಾಟಾಳ್ ನಾಗರಾಜ್ ಅವರಿಗೆ ಹುಟ್ಟಿದವರಿಗೇನೋ ನಿಗ್ರಹ ಮಾಡಬಹುದು. ಅವರ ಮಕ್ಕಳಿಗೆ ಹುಟ್ಟಿದವರೆಲ್ಲರಿಗೂ ಅವರು ಹೇಳುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರ ಮಕ್ಕಳಿಗೆ ಹೇಳುವುದಕ್ಕಾಗದಿದ್ದರೆ ಬೇರೆಯವರ ಮಕ್ಕಳಿಗೆ ಹೇಳುವುದಕ್ಕೆ ಹೋಗಬಾರದು.

ಶ್ರೀ ಆರ್. ಧ್ರುವನಾರಾಯಣ್: ಅಧ್ಯಕ್ಷರೆ, ಅವರ ಮನೆಯಲ್ಲಿಯೇ ಕಂಟ್ರೋಲ್ ಮಾಡುವುದಕ್ಕಾಗಿಲ್ಲ. ಇನ್ನು ರಾಜ್ಯವನ್ನು ಯಾವ ರೀತಿ ಕಂಟ್ರೋಲ್ ಮಾಡುವುದಕ್ಕಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್: ಅದಕ್ಕೆ ನನ್ನದೇನೂ ತಕರಾರು ಇಲ್ಲ, ಆಕ್ಷೇಪಣೆ ಮಾಡಲಿಲ್ಲ. ನಾನು ಬಹಳ ಪ್ರೀತಿಯಿಂದ ಸ್ವಾಗತ ಮಾಡುತ್ತೇನೆ. ಈಗ ಎಷ್ಟೋ ಜನ ತಂದೆ–ತಾಯಿಂದಿರು ಅವರ ಮಕ್ಕಳನ್ನು ಬೀದಿಗೆ ಹಾಕಿ ಹೊರಗಡೆ ಹೋಗಿರುತ್ತಾರೆ. ನಾವು ಯಾರದೋ ಮನೆಗೆ ಮದುವೆ ಮಾಡಿರುತ್ತೇವೆ. ಅವರ್‍ಯಾರೋ ಬೀಗರು ಅವರೆಲ್ಲೋ ಅಮೆರಿಕಾಕ್ಕೆ...

ಶ್ರೀ ಆರ್. ಧ್ರುವನಾರಾಯಣ: ಮಾನ್ಯ ವಾಟಾಳ್ ನಾಗರಾಜ್‌ರವರೆ, ನನ್ನ ಪ್ರಶ್ನೆಯೇನೆಂದರೆ, ನಾವಿಬ್ಬರೂ ಚಾಮರಾಜನಗರದವರೇ. ಮನೆಯಲ್ಲೇ ತಾವು ತಮ್ಮ ಮೊಮ್ಮಕ್ಕಳನ್ನು ಕಂಟ್ರೋಲ್ ಮಾಡುವುದಕ್ಕೆ ಆಗದಿದ್ದಾಗ ಇಡೀ ರಾಜ್ಯಕ್ಕೆ ತಾವು ಯಾವ ಸಂದೇಶ ಕೊಡುತ್ತೀರಿ? ದಯಮಾಡಿ ಹೇಳಬೇಕು.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಮೊಮ್ಮಕ್ಕಳು 100 ಮೀಟರ್ಸ್‌ನಲ್ಲಿ ಫಸ್ಟ್ ಬಂದು ಗೋಲ್ಡ್ ಮೆಡಲ್ ತೆಗೆದುಕೊಂಡರೆ, ವಾಟಾಳ್ ನಾಗರಾಜ್ ಅವರನ್ನು ಕರೆದು ಅವರಿಗೆ ಮೆಡಲ್ ಹಾಕುತ್ತಾರೆಯೇ? ಮೊಮ್ಮಕ್ಕಳಿಗೇ ಹಾಕುತ್ತಾರೆ. ಮೊಮ್ಮಕ್ಕಳು ಎಲ್ಲಿಯಾದರೂ ಕೊಲೆ ಮಾಡಿದರೆ, ವಾಟಾಳ್ ನಾಗರಾಜ್ ಅವರನ್ನು ಅರೆಸ್ಟ್ ಮಾಡುವುದಕ್ಕಾಗುತ್ತದೆಯೇ? ಮೊಮ್ಮಕ್ಕಳು ಬೇರೆ, ಅವರು ಬೇರೆ. ಅವರ ಮಕ್ಕಳ ಬಗ್ಗೆ ಮಾತ್ರ ಅವರು ಮಾತನಾಡಬಹುದು.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ಸೇಹಿತರಿಗೆ ಹೇಳುವುದೇನೆಂದರೆ, ನೀವು ಕನ್ನಡಕ್ಕಾಗಿ ಮಾಡಿದಂಥ ಹೋರಾಟ, ಇಲ್ಲಿ ಕನ್ನಡವನ್ನು ರಕ್ಷಣೆ ಮಾಡುವುದಕ್ಕೆ, ಹೊರಗಡೆ ಇರುವ ತಮಿಳುನಾಡಿನವರು ಇಲ್ಲೆಲ್ಲಾ ಬಂದು ಸೇರಿಕೊಂಡಾಗ 1977–78ರಲ್ಲಿ ನಡೆಸಿದ ಹೋರಾಟ ಇವೆಲ್ಲಾ ಅವರಿಗೆ ನೆನಪಿಲ್ಲ. ಸಧ್ಯ ನಿಮ್ಮ ಕಾಲಕ್ಕೆ ತಾವೇನು ಮಾಡಿದ್ದೀರಿ, ಅದಕ್ಕೆ ನಿಮಗೆ ಈ ರಾಜ್ಯದ ಪರವಾಗಿ ನಮ್ಮ ಕೋಟಿ ನಮಸ್ಕಾರಗಳು. ನಿಮ್ಮ ಮಕ್ಕಳು, ಮೊಮ್ಮಕ್ಕಳದ್ದು ಬಿಡಿ ಪಾಪ, ಅವರೇನೋ ಮಾಡಿಕೊಂಡು ಹೋಗಲಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ ಬಹಳ ಅಗ್ನಿಪರೀಕ್ಷೆಯಾಗಬೇಕಲ್ಲಾ ನೀವೇಕೆ ಆ ಸಂದರ್ಭದಲ್ಲಿ ಕೇಳಲಿಲ್ಲವೆಂದರೆ, ಆ ಸಂದರ್ಭದಲ್ಲಿ ಜಗಳವಾಡಲು ನಾನು ತಯಾರಿರಲಿಲ್ಲ. ಅನ್ನದಾನಿಯವರ ಜೊತೆ ಜಗಳವಾಡುವುದಕ್ಕೆ ತಯಾರಾಗಿರಲಿಲ್ಲ. ನಾನು ಸುಮ್ಮನಿದ್ದೆ. 'ಅವರು ಬಾಯ್ಮುಚ್ಚಿಕೊಂಡು ಬಿಟ್ಟರು, ಬಾಯಿ ಮುಚ್ಚಿಸಿಬಿಟ್ಟರು' ಎಂದು ನಮ್ಮ ಸ್ನೇಹಿತರುಗಳು ಈ ರೀತಿ ಹೊರಟು ಬಿಟ್ಟರೆ, ನಮ್ಮ ಪರಿಸ್ಥಿತಿ ಏನು? ನಾವು ಎಲ್ಲಿಗೆ ತಲುಪುವುದು? ಯಾವ ತರಹ ತಲುಪುವುದು? ಎಸ್.ಎಸ್. ಪಾಟೀಲರು ಭಾಷಣ ಮಾಡಿದ್ದೂ ಬರಲಿಲ್ಲ, ಯಾರದ್ದೂ ಬರಲಿಲ್ಲ. ನನ್ನ ಬಾಯಿ ಮುಚ್ಚಿಸಿದ್ದೊಂದು ಮಾತ್ರ ಇವೊತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ಅದನ್ನು ಸರಿಯಾಗಿ ಓದಿಲ್ಲ. ಎಸ್.ಎಸ್. ಪಾಟೀಲರ ಬಾಯಿ ಮುಚ್ಚಿಸಿರುವುದು ಎಂದಿದೆ. ಅದರಲ್ಲಿ ಬಂದಿರುವುದನ್ನು ನೀವು ಸರಿಯಾಗಿ ಓದಿಲ್ಲ. ಎಸ್.ಎಸ್. ಪಾಟೀಲರ ಬಾಯಿ ಮುಚ್ಚಿಸಿದರೆಂದು ಬಂದಿದೆ. ಅದು ನಿಮ್ಮದಲ್ಲ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ನನಗೆ ಬೀಗವನ್ನೇ ಹಾಕಿಬಿಟ್ಟಿದ್ದಾರೆ. ಬೀಗದ ಚಿತ್ರ ಬರೆದಿದ್ದಾರೆ. ಚಿತ್ರ ಬರೆಯುವವರು ಚೆನ್ನಾಗಿ ಬರೆದಿದ್ದಾರೆ. ಪಾಪ, ವರದಿ ಮಾಡಿದವರು ಮತ್ತು ಚಿತ್ರ ಬರೆದವರು ನಾನು ಚಳವಳಿ ಮಾಡಿದಾಗ ಅವರು ಇನ್ನೂ ಹುಟ್ಟೇ ಇರಲಿಲ್ಲ. ಇದು ಸ್ಪಷ್ಟ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ವಾಟಾಳ್ ನಾಗರಾಜ್‌ರವರೆ, ಬೀಗದ್ದೆಲ್ಲಾ ಒಂದು ಕಡೆ ಇರಲಿ. ಮಕ್ಕಳು ಎರಡೇ ಎಂದು ಅಧಿಕೃತವಾಗಿ ಹೇಳಿದ್ರಲ್ಲಾ. ಅದು ಸತ್ಯ ತಾನೇ? ಬೇರೆ ಇನ್ನೇನೂ ಇಲ್ಲ. ಏಕೆಂದರೆ, ನಮಗೆ ಬೇರೆ ಬೇರೆ ವರ್ತಮಾನಗಳಿವೆ. ಯಾವ್ಯಾವ ಮಕ್ಕಳು ಎಲ್ಲೆಲ್ಲಿ ಓದುತ್ತಿದ್ದಾರೋ? ಇಲ್ಲಿ ಇಬ್ಬರು ಮಕ್ಕಳೆಂದು ಹೇಳಿಬಿಟ್ಟಿರಿ. ಸತ್ಯ ಗೊತ್ತಾಗಲಿ ಎಂದು ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಇದು ಏನಾಗಿದೆಯೆಂದರೆ, ಅವರ ವಿಚಾರವನ್ನು ನಾನು ಏನಾದರೂ ಎತ್ತುತ್ತೇನೆಂದು ಈಗ ನನ್ನ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ವಿಚಾರ ನನಗೆ ಗೊತ್ತು. ಹೇಳಲಾ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಬೇಡ ಬೇಡ.

ಶ್ರೀ ವಾಟಾಳ್ ನಾಗರಾಜ್: ಹೇಳಿ ಅಂದರೆ ಹೇಳಿಬಿಡುತ್ತೇನೆ. ಯಾರ್‍ಯಾರು? ಏನೇನು? ಎಷ್ಟು? ಎಂದು ಹೇಳಲೇ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಬೇಡ.

ಶ್ರೀ ವಾಟಾಳ್ ನಾಗರಾಜ್: ಬೇಡವೆಂದರೆ ಬೇಡ. ನೀವು ಹೇಳಿ ಅಂದರೆ ನಾನು ಹೇಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಜೆ.ಹೆಚ್. ಪಟೇಲರು ಇಲ್ಲವೆಂದೇ ನಮಗೆ ಈ ಧೈರ್ಯ ಬಂದಿರುವುದು. ನಾನು ಅಧ್ಯಕ್ಷರ ತರಹ ಮನುಷ್ಯ. ನಮ್ಮನ್ನು ಏನು ಹೆದರಿಸುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಛೇ, ಇಲ್ಲ ಇಲ್ಲ. ಅಧ್ಯಕ್ಷರಿಗೂ ಇದೆಲ್ಲವೂ ಸ್ವಲ್ಪ ಗೊತ್ತಾಗುತ್ತದೆ. ನಿಮ್ಮ ಕಥೆಯೆಲ್ಲಾ ಗೊತ್ತಾಗುತ್ತದೆ. ಅಧ್ಯಕ್ಷರೆ, ನನಗೆ ಅವಕಾಶ ಕೊಡಿ ತಮ್ಮ ಕಾರ್ಯಾಲಯದಲ್ಲಿ ನಾನು ಎಲ್ಲವನ್ನೂ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ವಾಟಾಳ್ ನಾಗರಾಜ್‌ರವರೆ, ಇವರು ನಿಮ್ಮ ಬಗ್ಗೆ ತಪ್ಪು ಹೇಳುತ್ತಿದ್ದಾರೆ. ಏಕೆಂದರೆ, ಜೆ.ಹೆಚ್. ಪಟೇಲರು ಅವತ್ತು ಹೇಳಿದ್ದಾರೆ. ಅವರು ನಿಮ್ಮನ್ನು ರಾಮನಿಗೆ ಹೋಲಿಸಿದ್ದಾರೆ. ನಂಜೇಗೌಡರನ್ನು ಕೃಷ್ಣನಿಗೆ ಹೋಲಿಸಿದರು. ಅದಕ್ಕೆ ಉತ್ತರ ರಾಮಕೃಷ್ಣ ಹೆಗಡೆಯವರನ್ನು ಕೇಳಿ ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಹಾಗಲ್ಲ ಅವರು ಹೇಳಿದ್ದು.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್ ಅವರಿಗೆ ಪೇಪರ್‌ನಲ್ಲಿ ಅವರ ಬಾಯಿಗೆ ಬೀಗ ಹಾಕಿದರು ಎಂದು ಬಂದ ತಕ್ಷಣ ಅವರ ಮನಸ್ಸಿಗೆ ನೋವಾಗಿದೆ. ಅವರು ಮಾತನಾಡುವಾಗ ಇಡೀ ಸದನದಲ್ಲಿರುವ ನಮ್ಮಗಳ ಬಾಯಿಗೆ ಬೀಗ ಹಾಕಿದರೆ ನಮಗೆ ಎಷ್ಟು ನೋವಾಗುವುದಿಲ್ಲ? ಅವರು ಮಾತನಾಡುವುದಕ್ಕೆ ಶುರು ಮಾಡಿದಾಗ ಪ್ರತಿ ದಿವಸ ನಾವೆಲ್ಲರೂ ಬಾಯಿಗೆ ಬೀಗ ಹಾಕಿಕೊಂಡು ಬಿಡಬೇಕು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅದು ಇರಲಿ. ಭಾಷಣ ಮಾಡುವಾಗ ಒಂದು ವಿಡಂಬನೆ, ಹಾಸ್ಯ ಇರಬೇಕಲ್ಲಾ. ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಜೆ.ಹೆಚ್. ಪಟೇಲರು ಹೇಳಿದ್ದನ್ನು ನಿಮಗೆ ಹೇಳುವುದಕ್ಕೆ ಬರಲಿಲ್ಲ. ಸಭಾಧ್ಯಕ್ಷರಾಗಿ ಅಲ್ಲಿ ನಮ್ಮ ರಮೇಶ್‌ಕುಮಾರ್‌ರವರು ಕುಳಿತಿದ್ದಾಗ ಅವರು ಏನು ಹೇಳಿದರು. ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಮಹಿಳಾ ಆಯೋಗದ ಅಧ್ಯಕ್ಷರಾಗಬೇಕೆಂದು ಹೇಳಿದರು. ತೀಟೆ, ಯಾವಾಗಲೂ ಸುಮ್ಮನೆ ಕುಳಿತಿರುವುದಕ್ಕಾಗುವುದಿಲ್ಲ ನೋಡಿ. ತೀಟೆ ಮಾಡಿಯೇ ಅಭ್ಯಾಸ. ತೀಟೆ ಮಾಡಿದರು. ನಾನು ಹೇಳಿದೆ: ನಾನು ಅಷ್ಟೇ ಸ್ವಲ್ಪ ಮಾತನಾಡಬೇಕಲ್ಲವೆಂದು, ಮಾನ್ಯ ಅಧ್ಯಕ್ಷರೆ, ಬೇಡಿ. ಇಪ್ಪತ್ತು ಜನ ಮಹಿಳೆಯರು, ಆ ಸಂಘ ಅದೆಲ್ಲಾ ನಮ್ಮ ಕೈಯಲ್ಲಿ ಆಗುವುದಿಲ್ಲ. ದಯವಿಟ್ಟು ಅದು ಬೇಡಿ. ನಾನು ಅಧ್ಯಕ್ಷನಾಗುವುದಿಲ್ಲವೆಂದು ಬಹಳ ಒತ್ತಾಯ ಮಾಡಿದೆ. ಇಲ್ಲ, ಇಲ್ಲ, ನೀವು ಆಗಲೇಬೇಕು.

ನೀವು ಆಗದಿದ್ದರೆ, ಅದು ಸಾಧ್ಯವಿಲ್ಲವೆಂದು ಹೇಳಿ ಅವರು ತೀವ್ರವಾಗಿ ನನ್ನನ್ನು ಒತ್ತಾಯ ಮಾಡಿದರು. ಕೊನೆಗೆ ಕನಿಷ್ಠ ಇವೊತ್ತು ಒಂದು ದಿವಸವಾದರೂ ನೀವು ಇರಿ. ನಾಳೆ ಸಭಾ ನಾಯಕರು ಬರಲಿ. ಅವರು ಬಂದ ನಂತರ ಅವರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳೋಣವೆಂದರು. ಆಯಿತು ಎಂದು ಅವರ ಮಾತಿಗೆ ಬೆಲೆ ಕೊಟ್ಟಾಯಿತು. ಇವರು ಅದನ್ನು ಬಿಡಲಿಲ್ಲ. ದಿನಾ ಬೆಳಿಗ್ಗೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರೆ, ತಾವೂ ಇದ್ದಿರಿ. ಸಭಾ ನಾಯಕರು ಬಂದರು. ಸಭಾ ನಾಯಕರು ಯಾರು? ಜೆ.ಹೆಚ್. ಪಟೇಲ್. ಇವರು ಶೂನ್ಯವೇಳೆಯಲ್ಲಿ ಶುರು ಮಾಡಿದರು. ಅಧ್ಯಕ್ಷರೆ, ಈಗ ವಾಟಾಳ್ ನಾಗರಾಜ್‌ರವರು ಮಹಿಳಾ ಆಯೋಗದ ಅಧ್ಯಕ್ಷರಾಗಬೇಕೆಂದು ನಾವು ಬಹಳ ಒತ್ತಾಯ ಮಾಡುತ್ತಿದ್ದೇವೆ. ಅವರು ಆಗುವುದಿಲ್ಲವೆಂದು, ಇಪ್ಪತ್ತು ಜನ ಮಹಿಳೆಯರು ಸಂಘದಲ್ಲಿರುತ್ತಾರೆ, ಅದೆಲ್ಲಾ ಸರಿಯಿಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ತಾವೇನು ಹೇಳುತ್ತೀರಿ ಎಂದು ಹೇಳಿದರು. ಇವೆಲ್ಲಾ ನೆನಪುಗಳು. ನೆನೆಸಿಕೊಳ್ಳಬೇಕು. ಅವರು ಇವೊತ್ತು ದೊಡ್ಡ ಮನುಷ್ಯರಾಗಿದ್ದಾರೆ. ಅವರು ಏನು ಹೇಳಿದರು, ವಾಟಾಳ್‌ನಾಗರಾಜ್‌ರವರು ಶ್ರೀರಾಮನ ಕುಲಕ್ಕೆ ಸೇರಿದವರು ನಂಜೇಗೌಡರು, ನಾನು ಶ್ರೀ ಕೃಷ್ಣನ ಕುಲಕ್ಕೆ ಸೇರಿದವರು, ಯಾರು ಅಧ್ಯಕ್ಷರಾಗಬೇಕು ಎಂಬುದನ್ನು ನಾಳೆ ರಾಮಕೃಷ್ಣ ಹೆಗಡೆಯವರನ್ನು ಕೇಳಿ ಹೇಳುತ್ತೇನೆಂದು ಹೇಳಿಬಿಟ್ಟರು. ಎಷ್ಟು ಹೆಜ್ಜೆ ಹೆಜ್ಜೆಗೂ ಹಾಸ್ಯ ವಿಡಂಬನೆ ನೆನಪುಗಳು ಇವತ್ತು ಪಟೇಲರನ್ನು ನಾವು ಇವತ್ತು ಮರೆಯಲು ಸಾಧ್ಯವೇ ಇಲ್ಲ. ಬಹುಶಃ ಕರ್ನಾಟಕದ ಇತಿಹಾಸದಲ್ಲಿ ವರ್ಣರಂಜಿತ ವ್ಯಕ್ತಿತ್ವ, ಕರ್ನಾಟಕದ ಇತಿಹಾಸದಲ್ಲಿ ಪಾಂಡಿತ್ಯ ಪ್ರೌಢಿಮೆ ಅವರಿಗೆ ಇದ್ದದ್ದನ್ನು ಇನ್ಯಾರಿಗೂ ನಾನು ಕಾಣಲಿಲ್ಲ. ಅವರ ಬಗ್ಗೆ ಈ ಸಂದರ್ಭದಲ್ಲಿ ನೆನಪುಗಳು, ನಾವು ನೆನಪಿಸುತ್ತೇವೆ. ನಾವೆಲ್ಲರೂ ಸೇರಿ ಪಕ್ಷಾತೀತವಾಗಿ ಜೆ.ಹೆಚ್. ಪಟೇಲರ ಸ್ಮಾರಕವನ್ಯಾವುದಾದರೂ ಮಾಡಬೇಕು. ನಾನು ಮಾನ್ಯ ಪ್ರಕಾಶ್‌ರವರಿಗೆ ಕೈಮುಗಿಯುತ್ತೇನೆ, ಇಡೀ ಸದನದಲ್ಲಿ ಪಕ್ಷಾತೀತವಾಗಿ ಮಾನ್ಯ ಸಿಂಧ್ಯಾರವರು ನಿಮ್ಮೆಲ್ಲರಿಗೂ ಪಕ್ಷಾತೀತವಾಗಿ ನಾನು ಕೇಳುತ್ತಿದ್ದೇನೆ. ಜೆ.ಹೆಚ್. ಪಟೇಲ್‌ರ ನೆನಪು ಇಡೀ ಸೂರ್ಯ ಚಂದ್ರ ಇರುವವರೆಗೆ ಇರಬೇಕಾದರೆ ಅಂಥ ಒಂದು ಸುಂದರವಾದಂಥ ಒಳ್ಳೆಯ ಸ್ಮಾರಕ ಕರ್ನಾಟಕ ರಾಜ್ಯದಲ್ಲಾಗುವುದಕ್ಕೆ ತಾವೆಲ್ಲರೂ ಅವಕಾಶ ಮಾಡಬೇಕೆಂದು ಇಡೀ ಸದನದ ಪರವಾಗಿ ನಾನು ಅತ್ಯಂತ ಕಳಕಳಿಯಿಂದ ಕೈಮುಗಿಯುತ್ತೇನೆ. ತಾವೇ ಅದಕ್ಕೆ ನೇತೃತ್ವ ವಹಿಸಿ; ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರಲಿ, ತಮ್ಮ ಸಮ್ಮುಖದಲ್ಲಿ ನಡೆಯಲಿ, ಇದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ.

ಕರ್ನಾಟಕದ ಪರಿಸ್ಥಿತಿ ತೀವ್ರ ಹದಗೆಟ್ಟಿದೆ. ಬೆಂಗಳೂರು ಜನಸಂಖ್ಯೆ 65 ಲಕ್ಷ, ಕರ್ನಾಟಕ 5 ಕೋಟಿ 45 ಲಕ್ಷ ಜನರೆಂದು ಇವರೇನು ಹೇಳುತ್ತಾರೆ ಅದು ಖಂಡಿತವಾಗಿಲ್ಲ 2 ಕೋಟಿ 56 ಲಕ್ಷ ಜನ ಇಲ್ಲಿಯವರೆಗೆ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಈ ವಲಸೆಯನ್ನು ತಡೆಯುವ ಬಗ್ಗೆ ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಲಿಲ್ಲ. ಇನ್ನು ಹತ್ತು ವರ್ಷವಾದರೆ ಬೆಂಗಳೂರು ನಮ್ಮ ಕೈಯಲ್ಲಿ ಉಳಿಯುವುದಿಲ್ಲ. ಕರ್ನಾಟಕದ ಬಹುತೇಕ ಜಿಲ್ಲೆಗಳು ನಮ್ಮ ಕೈಯಲ್ಲಿ ಉಳಿಯುವುದಿಲ್ಲ. ತಮಗೆ ನಾನು ಹೇಳುತ್ತೇನೆ 65 ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರು ನಗರದಲ್ಲಿ 45 ಲಕ್ಷ ಜನ ಹೊರಗಡೆಯಿಂದ ಬಂದಿದ್ದಾರೆ. ಮಂಗಳೂರು, ರಾಯಚೂರು, ಬೆಳಗಾಂ, ಗುಲ್ಬರ್ಗಾ, ಕೊಡಗು ಎಲ್ಲವೂ ಈ ಪರಿಸ್ಥಿತಿಯಲ್ಲಿ ನಾವು ಸಂಪೂರ್ಣವಾಗಿ ಅಪಾಯದಲ್ಲಿದ್ದೇವೆ. ಇದಕ್ಕೆ ನಾವೆಲ್ಲರೂ ಪಕ್ಷಾತೀತವಾಗಿ ಚಿಂತನೆ ಮಾಡಬೇಕು. ಈಗಾಗಲೇ ಬಂದುಬಿಟ್ಟಿದ್ದಾರೆ ಕರ್ನಾಟಕಕ್ಕೆ ಬಹಳ,

ಯಥೇಚ್ಚವಾಗಿ. ಬೆಂಗಳೂರಿನಲ್ಲಿ 45 ಲಕ್ಷ ಜನ ಎಂದು ಹೇಳಿದರೆ ನಾಳೆ ಬೆಂಗಳೂರು ಕೇಂದ್ರದ ಆಡಳಿತಕ್ಕೆ ಒಳಪಡಬೇಕೆಂದು ಕೇಳಬಲ್ಲರು. ನಾಳೆ ಯಾವುದಕ್ಕೆ ಬೇಕಾದರೂ ಅವರು ಬಲಾಢ್ಯರಾಗಿರುತ್ತಾರೆ. ನಾನು ತಮಗೆ ಹೇಳುತ್ತಿದ್ದೇನೆ, ಈ ವಿಚಾರದಲ್ಲಿ ಈಗ ಕರ್ನಾಟಕ ಏಕೀಕರಣದ ಐವತ್ತನೇ ವರ್ಷ ಬರುತ್ತಿದೆ. ಈ ಐವತ್ತನೇ ವರ್ಷದ ಒಳಗಾಗಿ ಕರ್ನಾಟಕದ ಚಿಂತನೆ, ಕರ್ನಾಟಕದ ಬೆಳವಣಿಗೆ, ಕರ್ನಾಟಕದ ಕಲ್ಯಾಣ, ಕನ್ನಡಿಗರಿಗೆ ಉದ್ಯೋಗ, ಗಡಿನಾಡಿನ ಬೆಳವಣಿಗೆ, ಹೊರನಾಡಿನ ಕಲ್ಯಾಣ, ಹೊಸ ಜಿಲ್ಲೆಗಳ ಬೆಳವಣಿಗೆ, ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಲಿಲ್ಲವೆಂದರೆ ನಾವು ಅತ್ಯಂತ ಅಪಾಯಕ್ಕೆ ಸಿಕ್ಕುತ್ತೇವೆ. ಸುಮಾರು ಆರು ವರ್ಷವಾಯಿತು, ಗಡಿನಾಡಿನ ಸಮಗ್ರ ಅಭಿವೃದ್ಧಿ ಬಗ್ಗೆ ಈ ಸರ್ಕಾರಕ್ಕೆ ವರದಿಯನ್ನು ಕೊಟ್ಟು ಇದುವರೆಗೂ ವರದಿಯ ಬಗ್ಗೆ ಸರ್ಕಾರ ಪ್ರಾಮಾಣಿಕ ಕ್ರಮ ಕೈಗೊಳ್ಳಲಿಲ್ಲ. ಒಂದರಿಂದ ಒಂದು, ಸರೋಜಿನಿ ಮಹಿಷಿಯವರ ವರದಿ ಬಂದು 25 ವರ್ಷವಾಯಿತು, ಕ್ರಮ ಕೈಗೊಳ್ಳಲಿಲ್ಲ, ಸರ್ಕಾರದಲ್ಲಿ ಕನ್ನಡದ ಆಡಳಿತ ಸಂಪೂರ್ಣವಾಗಿ ಕುಸಿದುಬಿದ್ದುಹೋಗಿದೆ, ಕನ್ನಡ ಚಲನಚಿತ್ರ ಸಂಪೂರ್ಣವಾಗಿ ನಾಶದಂಚಿನಲ್ಲಿದೆ. ಕನ್ನಡಿಗರಿಗೆ ಉದ್ಯೋಗ ಸಂಪೂರ್ಣವಾಗಿ ನಾಶದಂಚಿನಲ್ಲಿದೆ. ಇದೆಲ್ಲವನ್ನು ನಾವು ನೋಡಿದಾಗ ನನಗನ್ನಿಸುತ್ತದೆ ಕರ್ನಾಟಕದ ಮುಂದಿನ ಪರಿಸ್ಥಿತಿ ಏನು? ಬೆಂಗಳೂರು ನಗರದ ಮಹಾನಗರ ಪಾಲಿಕೆಯಲ್ಲಿ ನೂರು ಜನರಲ್ಲಿ ಎಲ್ಲಾ ಪಕ್ಷದವರು ಸೇರಿದರೆ 75 ಭಾಗ ಹೊರಗಡೆಯವರಿದ್ದಾರೆ. ಇದನ್ನು ನೋಡಿದಾಗ ಭಯ, ಭೀತಿ ಹುಟ್ಟುತ್ತದೆ. ಇದಕ್ಕಾಗಿ ನಾವು ಕರ್ನಾಟಕದ ಸಮಗ್ರ ಬೆಳವಣಿಗೆಯ ಬಗ್ಗೆ, ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಬೇಕಾದ್ದು ಅತ್ಯಂತ ಪ್ರಾಮಾಣಿಕ. ಇದರ ಜೊತೆಗೆ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಒಂದೇ ಸಮನೆ ಒತ್ತಾಯ, ಕಯ್ಯಾರೆ ಕೀಯಣ್ಣರೈ ರವರು ಈಗಾಗಲೇ ಸಾವಿರಾರು ಮನವಿಗಳನ್ನು ಕೊಟ್ಟಿದ್ದಾರೆ. ಸರ್ಕಾರದ ಮೇಲೆ ಒತ್ತಡವನ್ನು ತಂದಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗುತ್ತೇವೆಂದು ಅನೇಕ ಬಾರಿ ಹೇಳಿದರು. ಈಗ ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ, ಮಹಾಜನ್ ವರದಿ ಸಮಗ್ರವಾಗಿ ಜಾರಿಯಾಗಬೇಕು. ಮಹಾಜನ್ ವರದಿ ಸಂಪೂರ್ಣವಾಗಿ ಜಾರಿಯಾಗಬೇಕು.

ಡಾ: ಕೆ. ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಿಮ್ಮ ಸಂಪೂರ್ಣವಾದ ಕನ್ನಡಪರ ಹೋರಾಟಕ್ಕೆ ನಾವು ಬಹಳಷ್ಟು ಜನ ಇಲ್ಲಿ ಬೆಂಬಲ ಸೂಚಿಸುತ್ತೇವೆ. ಮುಂದಕ್ಕೂ ಸೂಚಿಸುತ್ತೇವೆ. ಈಗಲೂ ಸೂಚಿಸುತ್ತೇವೆ. ಹಿಂದೆಯೂ ನಿಮ್ಮ ಪರವಾಗಿ ನಾವು ಮಾತನಾಡಿದ್ದೇವೆ. ಸದನದಲ್ಲಿ ಮಾತನಾಡದಿರಬಹುದು, ಹೊರಗಡೆ ನಾವು ಕನ್ನಡವನ್ನು ಓದುತ್ತಿರುವಂಥ ಸಂದರ್ಭದಲ್ಲಿ ಕೂಡ ಒಬ್ಬ ಸಾಹಿತ್ಯ ವಿದ್ಯಾರ್ಥಿಯಾಗಿ ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದೇವೆ. ಆದರೆ, ಇಲ್ಲಿ ಪರಿಸ್ಥಿತಿ ಏನು ಎಂದರೆ, ನಮ್ಮ ಪರಿಸ್ಥಿತಿ ಎಲ್ಲಾ ಮಕ್ಕಳಿಗೂ ಸಮಾನವಾಗಿ ವಿದ್ಯೆ ಕೊಡಬೇಕು, ಅದಕ್ಕೆ ಒಂದನೇ ತರಗತಿಯಿಂದ ಇಂಗ್ಲಿಷ್ ಭಾಷೆ ಬೋಧನೆ ಮಾಡಬೇಕೆಂದು ಹೇಳುತ್ತೇವೆ ಅದಕ್ಕೆ ತಾವೂ ಕೂಡ ಒಪ್ಪಿಕೊಳ್ಳಬಹುದಲ್ಲಾ ತಪ್ಪೇನಿದೆ? ಮಾಧ್ಯಮ ಕನ್ನಡದ್ದೇ ಇರಲಿ ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಕೊಡಲಿ ಎಂದು ಹೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಅದಿರಲಿ. ತಮ್ಮ ವಾದವನ್ನು ತಾವು ಮಂಡಿಸಿ, ನನ್ನ ವಾದವನ್ನು ನಾನು ಮಂಡಿಸುತ್ತೇನೆ. ಈ ಸದನ ಇರುವುದು ನಿಮ್ಮ ವಾದ ನೀವು ಹೇಳಿ, ನನ್ನ ವಾದವನ್ನು ನಾನು ಹೇಳುತ್ತೇನೆ. ಅಂತಿಮವಾಗಿ ತೀರ್ಮಾನಕ್ಕೆ ಬರೋಣ.

ಡಾ: ಕೆ. ಅನ್ನದಾನಿ: ಇಂಗ್ಲಿಷ್‌ನ್ನು ನೀವು ಕನ್ನಡ ಶಾಲೆಗಳಲ್ಲಿ ಭಾಷೆಯಾಗಿ ಏನಾದರೂ ಮಾಡಲಿಲ್ಲವೆಂದರೆ ನಿಮಗೆ ಕನ್ನಡ ಭಾಷೆಯೆ ಉಳಿದುಕೊಳ್ಳುವುದಿಲ್ಲ ಮುಂದಿನ ದಿನಗಳಲ್ಲಿ ನಿಮ್ಮ ಕನ್ನಡ ಭಾಷೆಯೇ ಉಳಿದು ಕೊಳ್ಳುವುದಿಲ್ಲವಲ್ಲಾ? ಹಾಗಾದರೆ ನಾವು ನೀವೆಲ್ಲರೂ ಕನ್ನಡದ ಪರವಾಗಿ ಏನು ಹೋರಾಟ ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಅದು ಈಗ ಬೇಕಾಗಿಲ್ಲ. ಅದು ಚರ್ಚೆಗೆ ಬಂದಮೇಲೆ ಮಾತನಾಡೋಣ. ಅದು ಎಷ್ಟೇ ಚರ್ಚೆಗೆ ಬರಲಿ ನಾವು ಮಾತನಾಡುತ್ತಿದ್ದೇವೆ.

ಡಾ: ಕೆ. ಅನ್ನದಾನಿ: ಆಗ ತಾವು ಕನ್ನಡ ಪರವಾಗಿ ಮಾತನಾಡುವಂತೆಯೇ ಇಲ್ಲ. ಕನ್ನಡದ ಪರವಾಗಿ ಹೋರಾಟ ಮಾಡುವಂತೆಯೇ ಇಲ್ಲ.

(ಗೊಂದಲ)

ಡಾ: ಕೆ. ಅನ್ನದಾನಿ:– ಕನ್ನಡ ಉಳಿದುಕೊಳ್ಳಬೇಕೆಂದರೆ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆ ಪ್ರಾರಂಭ ಮಾಡಬೇಕು.

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ಅವರು ಮಾತನಾಡಲಿ.

ಶ್ರೀ ಎಸ್.ಎಸ್. ಪಾಟೀಲ್: ಆಗ ನಾವ್ಯಾರೂ ಇರುವುದಿಲ್ಲ. ಕನ್ನಡ ಹುಡುಕುವಂಥ ಸ್ಥಿತಿಗೆ ನಾವು ಬರುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಚರ್ಚೆಗೆ ಬಂದಾಗ, ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಇರಬೇಕೆ? ಯಾವುದರಲ್ಲಿ ಇರಬೇಕು ಎನ್ನುವುದು ಸಮಗ್ರ ಚರ್ಚೆಗೆ ಬರಲಿ, ನಾವು ಚರ್ಚೆ ಮಾಡೋಣ, ಅವರವರ ಅಭಿಪ್ರಾಯಗಳನ್ನು ಹೇಳಲಿ, ಅಂತಿಮವಾಗಿ ಸರ್ಕಾರಕ್ಕೆ ನಾವು ಹೇಳೋಣ, ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ಅದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ.

ಡಾ: ಕೆ. ಅನ್ನದಾನಿ: ಯಾವಾಗ ಚರ್ಚೆಗೆ ಬರುತ್ತದೆ ಎಂದು ಅಧ್ಯಕ್ಷರು ಹೇಳಲಿ, ದಯಮಾಡಿ.

ಶ್ರೀ ವಾಟಾಳ್ ನಾಗರಾಜ್: ನಾನ್ಯಾಕೆ ಕೇಳಲಿ, ನೀವು ಹೇಳಿ.

ಡಾ: ಕೆ. ಅನ್ನದಾನಿ: ದಯಮಾಡಿ ಮಾನ್ಯ ಅಧ್ಯಕ್ಷರೆ, ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಿ. ಯಾವತ್ತು ಕೊಡುತ್ತೀರಾ ಎಂದು ಹೇಳಿ ದಯಮಾಡಿ. ಸಮಗ್ರವಾಗಿ ಇದು ಚರ್ಚೆಯಾಗಬೇಕು. ಯಾವತ್ತು ಕೊಡುತ್ತೀರಾ ಎಂದು ದಯಮಾಡಿ ಸದನದಲ್ಲಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅನ್ನದಾನಿಯವರು, ಯಾವತ್ತು ಚರ್ಚೆಗೆ ಬರುತ್ತದೆ, ಆವತ್ತು ನೀವು ಎಷ್ಟು ಬೇಕಾದರೂ ಮಾತನಾಡಲು ಅವಕಾಶ ಇದೆ. ನಮಗೂ ಮಾತನಾಡಲು ಅವಕಾಶ ಇದೆ. ಮಾತನಾಡೋಣ. ಅದರ ಬಗ್ಗೆ ದ್ವೇಷ, ಅಸೂಯೆ ಹುಟ್ಟತಕ್ಕ ವಿಚಾರವೆಲ್ಲಾ ಬೇಡ. ನಾವು ಮಾತನಾಡೋಣ. ನಾನು ತಮಗೆ ಹೇಳುತ್ತೇನೆ, ಕನ್ನಡಿಗರ ಉದ್ಯೋಗದ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವೇನು ನಡೆದಿದೆ? ಏನೂ ನಡೆದಿಲ್ಲ. ಖಂಡಿತ ನಡೆದಿಲ್ಲ. ಇವತ್ತು ನಿರುದ್ಯೋಗಿಗಳ ಸಂಖ್ಯೆ ಕರ್ನಾಟಕದಲ್ಲಿ 30 ಲಕ್ಷ ಜನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೊಂದಾವಣೆ ಮಾಡಿರತಕ್ಕವರು. ನನಗೆ ಅರ್ಥವಾಗುತ್ತಿಲ್ಲ. ಯಾರಿಗೆ ನೀವು ಉದ್ಯೋಗ ಕೊಟ್ಟಿರತಕ್ಕದ್ದು. ಎಲ್ಲಾ ಹೊರಗಡೆಯವರಿಗೆ. ಕಸ ಹೊಡೆಯುವ ಕೆಲಸ, ಕಸಮೊರಕೆ ಎತ್ತುವ ಕೆಲಸ ನಮಗೆ ಕೊಟ್ಟಿದ್ದೀರಿ.

ಕರ್ನಾಟಕ ಸರ್ಕಾರಕ್ಕೆ ಇದರ ಬಗ್ಗೆ ಗಮನವಿಲ್ಲ. ಕರ್ನಾಟಕ ಸರ್ಕಾರದವರಿಗೆ ಪ್ರಾಮಾಣಿಕತೆ ಇಲ್ಲ. ಕರ್ನಾಟಕ ಸರ್ಕಾರಕ್ಕೆ ಇಲ್ಲಿ ಇರತಕ್ಕಂಥ ಎಲ್ಲಾ ಕಾರ್ಖಾನೆಗಳ ಮೇಲೆ ಹಿಡಿತ ಇಲ್ಲ. ಏನು ನಿಮ್ಮ ಕೈಗಾರಿಕಾ ನೀತಿ? ಕನ್ನಡಿಗರ ಉದ್ಯೋಗದ ಬಗ್ಗೆ ನಿಮ್ಮ ಕೈಗಾರಿಕಾ ನೀತಿಯೇನು? ಸಂಪೂರ್ಣವಾಗಿ ನಿಮ್ಮ ಕೈಗಾರಿಕಾ ನೀತಿ ವಿಫಲವಾಗಿದೆ. ಮತ್ತು ವಾರ್ತಾ ಸಚಿವರಾದ ಮಾನ್ಯ ಶಿವರಾಂರವರು ಇಲ್ಲಿ ಕುಳಿತಿದ್ದಾರೆ, ರೀಮೇಕ್ ಚಿತ್ರಗಳಿಗೆ ನೀವು ಯಾವುದೇ ಸಹಾಯ ಮಾಡಬಾರದು. ರೀಮೇಕ್ ಚಿತ್ರಗಳಿಗೆ ನೀವು ಸಹಾಯ ಮಾಡುವುದಾದರೆ ಆ ಸಹಾಯಧನ ಎನ್ನುವ ಪದಕ್ಕೆ ಅರ್ಥವಿಲ್ಲ. ತಮಿಳುನಾಡಿನಲ್ಲಿ ಇದ್ದಂಥ ಕನ್ನಡ ಚಿತ್ರರಂಗವನ್ನು ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ರಾಮಕೃಷ್ಣ ಹೆಗಡೆ ಆರ್ಥಿಕ ಮಂತ್ರಿಯಾಗಿದ್ದಾಗ ನೀವೆಲ್ಲರೂ ಬನ್ನಿ, ನಿಮಗೆ ನಾವು ಸಹಾಯಧನ ಕೊಡುತ್ತೇವೆ ಎಂದು ಐವತ್ತು ಸಾವಿರ ರೂಪಾಯಿ ಸಹಾಯಧನ, ಕೊಟ್ಟರು. ನೀವು ಯಾರ ಒತ್ತಡಕ್ಕೂ ಮಣಿಯಬಾರದು, ರೀಮೇಕ್ ಎಂದರೆ ಏನು? ತಮಿಳು, ತೆಲುಗು, ಮಲೆಯಾಳದಲ್ಲಿ ತೆಗೆದಂಥ ಚಿತ್ರವನ್ನು ಯತಾವತ್ತಾಗಿ ಕನ್ನಡದಲ್ಲಿ ತರತಕ್ಕದ್ದು, ಸುಲಭ, ಅದಕ್ಕೆ ಕೊಡಕ್ಕೂಡದು, ಏಕೆ ಕೊಡುತ್ತೀರಿ? ನಮ್ಮಲೇನು ಕನ್ನಡ ಸಾಹಿತ್ಯ ಇಲ್ಲವೆ? ಸಂಭಾಷಣೆ ಬರೆಯುವವರಿಲ್ಲವೆ? ಹಾಡುವವರಿಲ್ಲವೆ? ಏನಿದು ಹುಡುಗಾಟ? ನನಗಿದು ಅರ್ಥವಾಗುತ್ತಿಲ್ಲ. ಈ ಚಿತ್ರರಂಗಕ್ಕೆ ಸೇರಿದ ಜನರೆಲ್ಲರಿಗೂ ಹೇಳುತ್ತೇನೆ, ನೀವು ಮೊದಲು ಸರ್ಕಾರವನ್ನು ಹೆದರಿಸುವುದಕ್ಕೆ ಹೋಗಬೇಡಿ, ಮೇಲೆ ಬರುತ್ತೇವೆಂದು ಹೇಳಲು ಹೋಗಬೇಡಿ, ನಿಮ್ಮಲ್ಲಿ ಪ್ರಾಮಾಣಿಕತೆ ಪ್ರದರ್ಶನವಾಗಲಿ. ಚಿತ್ರರಂಗದ ಸಮಸ್ತರಿಗೂ ನಾನಿಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ನೀವು re-make ಚಿತ್ರಗಳನ್ನು ಮಾಡಬೇಡಿ. ಅದನ್ನು ಮಾಡುವುದು ಬಹಳ ಸುಲಭ. Re-make ಅಂದರೆ...

ಶ್ರೀ ಬಿ. ಶಿವರಾಂ: ನಾವು ಏನು ರೀಮೇಕ್‌ಗೆ ಕೊಡುತ್ತಿದ್ದೇವೆ ಎಂದು ಹೇಳಿದರೆ, ಆಮೇಲೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಏನನ್ನು ನಾವು re-make ಮಾಡುವವರಿಗೆ ಕೊಡುತ್ತಿದ್ದೇವೆ? ನಾವು ಈಗ re-make ಗೆ ಏನನ್ನೂ ಕೊಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನೀವು ಕೊಡುತ್ತಿದ್ದೀರಿ ಎಂದಲ್ಲ. ನಮಗೂ ಸಹಾಯಧನ ಕೊಡಿ ಎಂಬ ಒತ್ತಾಯ ನಿಮ್ಮ ಮೇಲೆ ಬರುತ್ತಿದೆ.

ಶ್ರೀ ಬಿ. ಶಿವರಾಂ:– ಇಲ್ಲ, ಸಹಾಯಧನಕ್ಕೆ ಒತ್ತಡ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮನರಂಜನೆ ತೆರಿಗೆ ಕಡಿಮೆ ಮಾಡಿ ಎಂದು ಒತ್ತಡ ಬಂದಿಲ್ಲವೇ?

ಶ್ರೀ ಬಿ. ಶಿವರಾಂ: ಹೌದು.

ಶ್ರೀ ವಾಟಾಳ್ ನಾಗರಾಜ್: ಅದರ ಬಗ್ಗೆ ಹೇಳಿ. ಅವರಿಗೆ ಮನರಂಜನೆ ತೆರಿಗೆಯನ್ನು ಕಡಿಮೆ ಮಾಡಕೂಡದು. ಏಕೆ ಮಾಡಬೇಕು? ನನಗೆ ಅರ್ಥವಾಗಲಿಲ್ಲ. Re-make ಚಿತ್ರಕ್ಕೆ ಏಕೆ ಮಾಡಬೇಕು ನೀವು? ಮಾಡಕೂಡದು. Re-make ಚಿತ್ರಗಳು ಈಗ ನಮ್ಮಲ್ಲಿ ಎಂತೆಂತಹ . . . .

ಶ್ರೀ ಬಿ. ಶಿವರಾಂ: ಒಂದ್ಸಲ್ಪ ಹೇಳಲೇ? ಕೇಂದ್ರ ಸರ್ಕಾರದ ನೀತಿಯೇ ತೆರಿಗೆಯನ್ನು ಪೂರ್ಣವಾಗಿ ತೆಗೆಯಬೇಕು ಎಂಬುದಾಗಿದೆ. ಎರಡು ತಿಂಗಳ ಹಿಂದೆ ಡೆಲ್ಲಿಯಲ್ಲಿ ನಡೆದಂತಹ ಸಮಾವೇಶದಲ್ಲಿ ಆ ಬಗ್ಗೆ ಈಗಾಗಲೇ ನಮಗೆಲ್ಲಾ ಸೂಚನೆ ಬಂದಿದೆ. ಅದೇ ರೀತಿ ಬಹಳಷ್ಟು ರಾಜ್ಯಗಳಲ್ಲಿ ತೆರಿಗೆಯನ್ನು ಪೂರ್ಣವಾಗಿ ತೆಗೆಯತಕ್ಕಂಥದ್ದು ಮಾಡಿದ್ದಾರೆ. ನಾವು ಕನ್ನಡ ಚಿತ್ರರಂಗಕ್ಕೆ ಪೂರ್ಣವಾಗಿ ತೆಗೆಯತಕ್ಕಂಥದ್ದನ್ನು ಈ ಸಲದ ಆಯವ್ಯಯದಲ್ಲಿ ಮಾಡಿದ್ದೇವೆ. ಈ ರೀತಿ ಕೇಂದ್ರ ಸರ್ಕಾರದ ನೀತಿ, ಧೋರಣೆ ಪರಿಪೂರ್ಣವಾಗಿ ಚಲನಚಿತ್ರಗಳ ತೆರಿಗೆಯನ್ನೇ ತೆಗೆಯಬೇಕು ಅನ್ನತಕ್ಕಂಥದ್ದು ಆದಾಗ, re-make ಅನ್ನತಕ್ಕಂಥ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ?

ಶ್ರೀ ವಾಟಾಳ್ ನಾಗರಾಜ್: ಮುಂದೆ ತೆರಿಗೆ ಎಲ್ಲಾ ತೆಗೆದಾಗ ಮುಂದೆ ಏನಾಗುತ್ತದೋ ಎಂಬುದನ್ನು ನೋಡಿಕೊಳ್ಳೋಣ. ಆ ಪ್ರಶ್ನೆ ಬೇರೆ. ಅದು ಆವಾಗ, ಕೇಂದ್ರ ಸರ್ಕಾರ ತೆಗೆದ ಮೇಲೆ ನೀವೇನು ತೀರ್ಮಾನ ಮಾಡುತ್ತೀರಿ . . . .

ಶ್ರೀ ಕುಮಾರ್ ಎಸ್. ಬಂಗಾರಪ್ಪ: ಮಾನ್ಯ ವಾಟಾಳ್ ನಾಗರಾಜ್‌ರವರೆ, ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, re-make ಚಲನಚಿತ್ರಗಳಿಗೆ ತೆರಿಗೆ ವಿನಾಯಿತಿ ಕೊಡಬಾರದು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನೂ ಕೂಡ re-make, ಇದಕ್ಕೆ ಪರವಾಗಿ ಮಾಡಿದವನು ಅಲ್ಲ. ಹೊಸದಾದ ಕಥಾ ವಸ್ತುಗಳು ನಮ್ಮ ಹತ್ತಿರ ಇವೆ. ಅವುಗಳನ್ನು ಮಾಡಬೇಕು ಎನ್ನತಕ್ಕಂಥದ್ದು ಒಂದು ವಾದ. ಇಲ್ಲಿ ಏನಾಗಿದೆ ಎಂದರೆ, ಈಗ ನಮ್ಮ ಬಹಳಷ್ಟು ಚಲನಚಿತ್ರಗಳನ್ನು dubbed version ಮಾಡುತ್ತಿದ್ದೇವೆ. ತೆಲುಗಿಗೆ ಮಾಡುತ್ತಿದ್ದೇವೆ, ತಮಿಳಿಗೆ ಮಾಡುತ್ತಿದ್ದೇವೆ, ಬೇರೆ ಬೇರೆ languagesನಲ್ಲಿ ನಾವು dubbed versions ಎಂದು ನಾವು ಮಾಡುತ್ತಿದ್ದೇವೆ. ಆದರೆ ಬೇರೆ languages ಅನ್ನು ತಂದು, ನಾವಿಲ್ಲಿ dubbing ಮಾಡಿ release ಮಾಡುತ್ತಿಲ್ಲ. Fresh ಆಗಿ ಮಾಡುತ್ತಿದ್ದೇವೆ. ಅವರೇನಿದೆಯೋ ಅದನ್ನು ಯಥಾವತ್ತಾಗಿ ಮಾಡತಕ್ಕಂಥ ಕೆಲಸವನ್ನುಮಾಡುತ್ತಿದ್ದೇವೆ. ನಮ್ಮ ಕನ್ನಡ ನಿರ್ಮಾಪಕರು ಮಾಡಿರತಕ್ಕಂಥ ಚಿತ್ರಗಳ dubbed versions ಅನ್ನು ಬೇರೆ languagesನಲ್ಲಿ ನಾವು ಮಾಡುತ್ತಿದ್ದೇವೆ. ನನ್ನ ಅಭಿಪ್ರಾಯ ಏನೆಂದರೆ, ಈ film industry ಗೆ ನೀವು ಎಷ್ಟು ನಿರ್ಬಂಧಗಳನ್ನು ನಾನಾ ರೀತಿಯಲ್ಲಿ ಹಾಕುತ್ತಾ ಹೋಗುತ್ತೀರೋ, ಅದು ಅಷ್ಟು ಸಣ್ಣದಾಗುತ್ತದೆಯೇ ಹೊರತು ದೊಡ್ಡದಾಗುವುದಿಲ್ಲ. ನಾವು ಆದಷ್ಟೂ ನಿರ್ಬಂಧ ಹೇರಬಾರದು. ನೀವು free ಆಗಿ think ಮಾಡಿ. ನಾವೇನೂ ಹಣಕಾಸಿನ ವಿಚಾರದಲ್ಲಿ ನಿರ್ಮಾಪಕರಿಗೇನು ಸಹಾಯ ಮಾಡುವುದಕ್ಕೆ ಹೋಗುವುದಿಲ್ಲ. ಅವರಾಗಿಯೇ ದುಡ್ಡನ್ನು investment ಮಾಡುತ್ತಾರೆ, ಚಿತ್ರ ತೆಗೆಯುತ್ತಾರೆ. ಕೆಲವು ನಮ್ಮ ಸಿನಿಮಾ ಕಾರ್ಮಿಕರೇನಿದ್ದಾರೋ, ಅವರಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿ ನಮ್ಮದಾಗಿದೆ. ಇಲ್ಲಿ ಸ್ಟುಡಿಯೋಸ್‌ಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿ ಇದೆ. ಈ ವಸ್ತುಸ್ಥಿತಿಯನ್ನು ನಾವು ನೋಡಬೇಕೇ ಹೊರತು, ನೀವು ಬಹಳಷ್ಟು restrictions ಮಾಡುವುದರಿಂದ, ಏನಾಗಿದೆ ಎಂದರೆ, ನಾವು ಕನ್ನಡ industry ಅನ್ನು ಪದೇ ಪದೇ ಸಣ್ಣದು ಮಾಡುತ್ತಿದ್ದೇವೆ. ಈಗ ನಾವು ಎಲ್ಲಿ ಹೋಗಿ ಸ್ಟುಡಿಯೋಸ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ? ಕಂಠೀರವ ಸ್ಟುಡಿಯೋ closed, ಅಭಿಮಾನ್ ಸ್ಟುಡಿಯೋ closed, ಮೈಸೂರಿನ ಪ್ರೀಮಿಯರ್ ಸ್ಟುಡಿಯೋ closed, ಎಲ್ಲಾ close ಆಗಿದೆ. ಎಲ್ಲಾ ಮನೆಯಲ್ಲೇ ನಡೆಯುತ್ತಿದೆ. ಏಕೆಂದರೆ, exorbitant ಆಗಿ cost has gone up so high. ಅಷ್ಟೊಂದು ಮೇಲೆ ಹೋಗಿದೆ. ಸ್ಟುಡಿಯೋಸ್ ಬಿಟ್ಟು ನೀವು ಬೇರೆ ಕಡೆಗೆ

ಹೋಗುತ್ತಿದ್ದೀರಿ, ಎಲ್ಲಿ ನೀವು entire studio ದಲ್ಲೇ ಮಾಡುತ್ತಿದ್ದೀರಿ, ಒಂದು ಕೋಟಿ ರೂಪಾಯಿಗಳನ್ನೆಲ್ಲಾ ಹಾಕುತ್ತೀರಿ, ನಿಮಗೆ 10–15 ಲಕ್ಷ ರೂಪಾಯಿಗಳೊಳಗೆ ಮುಗಿದು ಹೋಗುತ್ತದೆ ಅನ್ನತಕ್ಕಂಥದ್ದು ವಾದ. ಅದರಲ್ಲಿ percentage fix ಮಾಡಬೇಕು ಮತ್ತು ಎಲ್ಲವನ್ನೂ fix ಮಾಡಬೇಕು ಎನ್ನುವುದಿದೆ. ನೀವು ಕನ್ನಡವನ್ನು ಬೆಳೆಸಬೇಕು ಎನ್ನುವುದಾದರೆ, ನೀವು ಕನ್ನಡಕ್ಕೆ ಅಷ್ಟೇ ಸಹಕಾರಗಳನ್ನೂ ಕೂಡ ಕೊಡಬೇಕಾಗುತ್ತದೆ. ಏಕೆಂದರೆ production cost ಹೆಚ್ಚಾಗಿದೆ. ಮುಂಚೆ ಒಂದೊಂದು picture ಅನ್ನು 10–15 ಲಕ್ಷ ರೂಪಯಿಗಳಲ್ಲಿ ತೆಗೆಯುತ್ತಿದ್ದೆವು. Now the cost is about 2 $^1/_2$ to 3 crores.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಒಂದು ನಿಮಿಷ. ಅದರ ಜೊತೆಯಲ್ಲಿ ನಾನು ಮೊನ್ನೆ ಕಳೆದ ಬಾರಿ Papers to be laid on the table ನಲ್ಲಿ ಅಧಿಸೂಚನೆಯೊಂದನ್ನು ನೋಡಿದೆ. PVR theatreಗೆ tax exemption ಕೊಟ್ಟಿದ್ದೀರಿ. ಏಕೆ ಕೊಡಬೇಕು? ಅವರ tickets charges ಎಷ್ಟು ಗೊತ್ತೆ? 500 ರೂಪಾಯಿಗಳು. multiplexಗೆ ಇಲ್ಲ. ಅಂತಹ 500 ರೂಪಾಯಿಗಳು, 200 ರೂಪಾಯಿಗಳು, 100 ರೂಪಾಯಿಗಳು tickets ಹಾಕುವವರಿಗೆ tax exemption ಅಗತ್ಯ ಇದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ನಿಮ್ಮ ವಾದವನ್ನು ಒಪ್ಪುತ್ತೇನೆ. ಇಲ್ಲವೆಂದು ಹೇಳಲಾಗುವುದಿಲ್ಲ. ಆದರೆ 5 ಕೋಟಿ, 3 ಕೋಟಿ ರೂಪಾಯಿಗಳ ಖರ್ಚು ಇದೆಯಲ್ಲಾ, ಆ ಖರ್ಚೂ ಸಹ ನಮ್ಮಲ್ಲಿ ಕಡಿಮೆಯಾಗಬೇಕು. ಈಗ ಅದೂ ಕಡಿಮೆಯಾಗಬೇಕಲ್ಲವೇ? ಎಲ್ಲೋ ಒಂದು ಹಂತದಲ್ಲಿ ಏನಾಗುತ್ತದೆ ಎಂದರೆ ಸಿಕ್ಕಾಪಟ್ಟೆ ಲಂಗುಲಗಾಮು ಇಲ್ಲದೆ ಯಥೇಚ್ಛವಾಗಿ ಖರ್ಚು ಮಾಡಿ. . . . ;

ಶ್ರೀ ಕುಮಾರ್ ಎಸ್. ಬಂಗಾರಪ್ಪ: ಕಡಿಮೆ ಖರ್ಚಿನಲ್ಲಿ ಚಲನಚಿತ್ರ ಮಾಡುವುದ ಕ್ಕಾಗುತ್ತಿಲ್ಲ. ಏಕೆಂದರೆ, ಈಗ ಏನಾಗಿದೆ ಎಂದರೆ, ಬೇರೆ language ಚಿತ್ರಗಳ ಜೊತೆಗೆ ನಾವು competition ಮಾಡುತ್ತಿರುವುದರಿಂದ, technology cost ಇಷ್ಟು high ಆಗಿದೆ. Special effects ಮತ್ತೊಂದು ಇಲ್ಲದಂತೆ ಚಿತ್ರ ಮಾಡುವುದಕ್ಕಾಗುವುದಿಲ್ಲ. Basic negative cost ಹೆಚ್ಚಾಗಿದೆ. ಕನ್ನಡಕ್ಕೆಂದು negative cost ಅನ್ನು subsidy ಮಾಡಿ ನಾವು ಕೊಡುತ್ತೇವೆಯೋ? ಹಾಗೇನಿಲ್ಲ ನಾವು ಫಿಲ್ಮ್ ಅನ್ನು ಶೂಟ್ ಮಾಡುವುದಕ್ಕೆಂದು ಇರುವ negative raw stock ಏನಿದೆ, ಆ stock ಅನ್ನು ನಮಗೆ ಕೊಡುತ್ತಿಲ್ಲ. ಇಲ್ಲಿ ನಾನಾ ರೀತಿಯ ತೊಂದರೆಗಳಿವೆ. ಮಾನ್ಯ ವಾರ್ತಾ ಸಚಿವರು ಈಗ ಏನೊಂದು movement ಅನ್ನು ತೆಗೆದುಕೊಂಡಿದ್ದಾರೋ, ಚಿತ್ರ ನಿರ್ಮಾಪಕ ಸಂಘದ ಜೊತೆಗೆ ಮಾತನಾಡಿ, ಇದರಲ್ಲಿ ಏನಾದರೂ ಬೆಳವಣಿಗೆ ಮಾಡಬೇಕೆಂದು ಒಂದು via media ಮಾಡುತ್ತಿದ್ದಾರೋ, ಅದಕ್ಕೆ ನೀವು ಸ್ವಲ್ಪ ಸಹಕಾರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್: ಇವತ್ತು ಸಹಾಯಧನ ಪಡೆಯತಕ್ಕಂಥ ಚಿತ್ರಗಳಿಗೆ ಹೊರ ರಾಜ್ಯಗಳಲ್ಲಿ ಚಿತ್ರೀಕರಣ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಈಗ ಅವಕಾಶ ಕೊಡಿ ಎಂಬ ಬೇಡಿಕೆ ಬಂದಿದೆ.

ಶ್ರೀ ಬಿ. ಶಿವರಾಂ: ಅದಕ್ಕೆ ಮೊದಲಿನಿಂದಲೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಸಹಾಯಧನ ಪಡೆಯುವುದಕ್ಕೆ ಇಲ್ಲ. ಸಹಾಯಧನ ಪಡೆಯಬೇಕಾದರೆ ಕರ್ನಾಟಕದಲ್ಲಿ ಮಾತ್ರ ತಯಾರಾಗಿರಬೇಕು ಎಂದು ಇದೆ. ಕೊನೆಯದಾಗಿ, ಈ ವಾರ್ತಾ ಇಲಾಖೆ ಬಗ್ಗೆ . . . . .

ಶ್ರೀ ಬಿ. ಶಿವರಾಂ: ಈಗ ಅದನ್ನು ಬಗೆಹರಿಸಲೇ? ಹೊರ ರಾಜ್ಯ . . . . .

ಶ್ರೀ ವಾಟಾಳ್ ನಾಗರಾಜ್: ಅದರ ಬಗ್ಗೆ ಆಮೇಲೆ ಹೇಳಿ. ಈ ವಾರ್ತಾ ಇಲಾಖೆ ಎಲ್ಲರಿಗೂ ಬೇಕಾಗಿರುವಂತಹ ಇಲಾಖೆಯಾಗಿದೆ. ಎಲ್ಲಾ ಇಲಾಖೆಗಳಿಗೂ ಪ್ರಚಾರಕ್ಕಾಗಿ ಇದು ಬೇಕಾಗಿದೆ. ಪ್ರತಿ ದಿನ ವಾರ್ತಾ ಇಲಾಖೆ ಮೂಲಕವೇ ಪ್ರಚಾರವಾಗಬೇಕು. ನನಗನಿಸುತ್ತದೆ, ನಮ್ಮ ಇಡೀ ಆಯವ್ಯಯದಲ್ಲಿ ಎಲ್ಲಾ ಇಲಾಖೆಯ ಪರವಾಗಿ ಕನಿಷ್ಠ ಶೇಕಡ 2ರಷ್ಟು ಭಾಗ ಹಣವನ್ನು ವಾರ್ತಾ ಇಲಾಖೆಗೆ ಮುಡಿಪಾಗಿಡಿ. ಕಾರಣವೇನು? ಜಾಹಿರಾತು ಇರಬಹುದು, ಪ್ರಚಾರ ಇರಬಹುದು, ಯಾವುದಕ್ಕಾದರೂ ವಾರ್ತಾ ಇಲಾಖೆಯನ್ನು ಎಲ್ಲರೂ ಅವಲಂಬಿಸಬೇಕಾಗಿದೆ. ಎಲ್ಲರಿಗೂ ಪ್ರಚಾರ ಬೇಕು. ಅದಕ್ಕಾಗಿ ಮಾತೆತ್ತಿದರೆ ವಾರ್ತಾ ಇಲಾಖೆ ಕರೆಯಬೇಕು. ಆದರೆ ವಾರ್ತಾ ಇಲಾಖೆ ಮಾತ್ರ ಸಾಕುವುದು ಬೇಡ. ಕಾಲು ಮುರಿದು ಹೋಗಿದ್ದರೆ, ಅದನ್ನು ಕಟ್ಟುವುದು ಬೇಡ, ಅದು ಮುರಿದು ಹೋಗಲಿ. ತಲೆ ಇಲ್ಲದಿರಲಿ, ಹೆಳವನಾಗಿರಲಿ ಅದು ಹಾಗೆಯೇ ಇರಲಿ ಎಂದು ಇರುವುದು ಸರಿಯಲ್ಲ. ವಾರ್ತಾ ಇಲಾಖೆಯ ಬಗ್ಗೆ ಸರ್ಕಾರ ಪ್ರಾಮಾಣಿಕವಾದಂತಹ ಚಿಂತನೆ ಮಾಡಬೇಕೆಂದು ನಾನು ಹೇಳುತ್ತೇನೆ. ವಾರ್ತಾ ಇಲಾಖೆಯನ್ನು ಪ್ರತಿ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಬೇಕು. ಜಿಲ್ಲಾ ವಾರ್ತಾಧಿಕಾರಿಗಳಿಗೆ ವಾಹನಗಳನ್ನು ಕೊಡಬೇಕು. ಜಿಲ್ಲಾ ವಾರ್ತಾಧಿಕಾರಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡಬೇಕು. ಜೊತೆಗೆ, ಈ ವಾರ್ತಾ ಮತ್ತು ಪ್ರಚಾರ ಇಲಾಖೆ ಕಟ್ಟಡ. ಎಷ್ಟು ವರ್ಷಗಳಾಯಿತು? ಮಾನ್ಯ ಶಿವರಾಂರವರೆ. ನನಗನ್ನಿಸುತ್ತದೆ, ಈ ಕಟ್ಟಡ ಆಗಬೇಕು. ಈ ಕಟ್ಟಡ ಆಗಿ ಮಂತ್ರಿಗಳು, ಮುಖ್ಯಮಂತ್ರಿಗಳು ಇಲ್ಲೇ ಹೋಗಿ ಪತ್ರಿಕಾ ಸಭೆ ನಡೆಸಬೇಕು, ಇಲ್ಲೇ ಈ ವಾರ್ತಾ ಭವನದಲ್ಲೇ ಪತ್ರಿಕಾ ಸಭೆ ನಡೆಸಬೇಕು., ಅಂತಹ ಸುಸಜ್ಜಿತವಾದಂತಹ ವಾರ್ತಾ ಭವನ ಕಟ್ಟುವುದಕ್ಕೆ ಎಲ್ಲಾ ವಿಧದಲ್ಲೂ ಸಂಪೂರ್ಣವಾಗಿ ಇರತಕ್ಕಂಥದ್ದು ಮಾಡಬೇಕು. ಜೊತೆಗೆ, ಬಹಳ ಪ್ರಾಮುಖ್ಯವಾಗಿ, ಕೆಲವರ ನೆನಪುಗಳನ್ನು ಇವತ್ತು ಮಾಡಿಕೊಳ್ಳಬೇಕು. ಪ್ರಜಾವಾಣಿಯ ಸಂಪಾದಕರಲ್ಲಿ ಟಿ.ಎಸ್. ರಾಮಚಂದ್ರರಾವ್ ಧ್ರುವತಾರೆಯಾಗಿದ್ದರು. ಪುಟ್ಟಸ್ವಾಮಯ್ಯನವರು ಪ್ರಜಾವಾಣಿಯ ಮೊದಲನೇ ಸಂಪಾದಕರಾಗಿದ್ದರು. ಆ ಪೇಪರ್ ಆರಂಭ ಮಾಡಿದವರು ಸಿ.ಜಿ.ಕೆ. ರೆಡ್ಡಿ., ಕೆ. ವೆಂಕಟಸ್ವಾಮಿ, ಕೆ. ಗುರುಸ್ವಾಮಿ. ಆ ಕಾಲದಲ್ಲೇ ಆ ಪತ್ರಿಕೆಯನ್ನು ಬಹಳ ಪರಿಣಾಮಕಾರಿಯಾಗಿ ನಡೆಸುತ್ತಿದ್ದರು. ನಾನೇನು ಹೇಳುತ್ತಿದ್ದೇನೆ ಎಂದರೆ, ಇವತ್ತು ನೀವು ಟಿ.ಎಸ್. ರಾಮಚಂದ್ರರಾವ್ ಅವರ ಹೆಸರಿನಲ್ಲಿ ಮಾತ್ರ ಕೊಡುತ್ತಿದ್ದೀರಿ. ಆ ಕಾಲದಲ್ಲಿ ನಾವೆಲ್ಲಾ ಒತ್ತಾಯ ಮಾಡಿ ಅದನ್ನು ಮಾಡಿದ್ದೆವು. ಈಗ ವಿಶಾಲವಾಗಿದೆ. ಆದ್ದರಿಂದ ಮತ್ತೆ ಕೆಲವರ ಹೆಸರಿನಲ್ಲೂ ಕೊಡಿ. ಖಾದ್ರಿ ಶಾಮಣ್ಣ, ಕಿಡಿ ಶೇಷಪ್ಪ. ಖಾದ್ರಿ ಶಾಮಣ್ಣ ಮಹತ್ತರವಾಗಿ ಕರ್ನಾಟಕದಲ್ಲಿ ಸೇವೆ ಮಾಡಿರತಕ್ಕವರು. ಒಂದು ಕಾಲದಲ್ಲಿ ಕಿಡಿ ಶೇಷಪ್ಪನವರ ನಾಲ್ಕೇ ಪುಟಗಳ 'ಕಿಡಿ' ಪತ್ರಿಕೆ ಹೊರಗಡೆ ಬಂತು ಎಂದರೆ, ಇಡೀ ರಾಜ್ಯದ ರಾಜಕಾರಣವನ್ನೇ ಬದಲಾವಣೆ ಮಾಡಿರತಕ್ಕಂಥ ಇತಿಹಾಸ ಅದರದು. . ಜೊತೆಗೆ, ನೆಟ್ಟಕಲ್ಲಪ್ಪ ಈಗ ಮಾಲೀಕರುಗಳಾಗಿರುವವರು ಅವರ ಮಕ್ಕಳು, ಇವರ ತಂದೆ ನೆಟ್ಟಕಲ್ಲಪ್ಪನವರು. ಅವರು

ಸಾಮಾನ್ಯರ ತರಹ ಇದ್ದರು. ನನ್ನ ಅವರ ಬಾಂಧವ್ಯ ಬಹಳ ಹಳೆಯದು. 'ಹೋಗಯ್ಯ' 'ಬಾರಯ್ಯ' ಎನ್ನುವಷ್ಟು ಸ್ನೇಹ. ಬಿ.ಎನ್. ಗುಪ್ತ, 'ಜನ ಪ್ರಗತಿ' ಒಂದು ಇತಿಹಾಸದ ಕ್ರಾಂತಿಕಾರರು. ಪಾಟೀಲ್ ಪುಟ್ಟಪ್ಪ ಸಿದ್ಧವನಹಳ್ಳಿ ಕೃಷ್ಣಶರ್ಮ, ತೀತಾ ಶರ್ಮ ಇವರುಗಳ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಗಳ ಮೌಲ್ಯದ ಪ್ರಶಸ್ತಿಗಳನ್ನು ವರ್ಷಕ್ಕೊಮ್ಮೆ ನೀಡಬೇಕು. ನನಗನ್ನಿಸುತ್ತದೆ, ಸರ್ಕಾರಕ್ಕೇನೂ ಬಡತನವಿಲ್ಲ, ಇವರ ಹೆಸರಿನಲ್ಲಿ ಸಂಪೂರ್ಣವಾಗಿ ಪ್ರಶಸ್ತಿಗಳನ್ನು ನೀಡಬೇಕಾದುದು ಅತ್ಯಂತ ಆದ್ಯ ಕರ್ತವ್ಯ ಮೊದಲನೇ ಕರ್ತವ್ಯ. ಇದು ತಾವು ಹೇಳಬೇಕು, ಮುಖ್ಯಮಂತ್ರಿಗಳು ಹೇಳಬೇಕು. ಮಾನ್ಯ ಪ್ರಕಾಶ್‌ರವರೆ, ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಆಡಳಿತದ ಬಗ್ಗೆ ಹೇಳುವಾಗ ಒಂದು ವಿಷಯ ಜ್ಞಾಪಕಕ್ಕೆ ಬಂತು. ಮದ್ರಾಸ್‌ನಲ್ಲಿ ಒಬ್ಬ 100 ನಾಗರಹಾವುಗಳ ಮಧ್ಯೆ 24 ಗಂಟೆಗಳ ಕಾಲ ಮಲಗಿದ್ದ. ಅವನನ್ನು ಆ ಇತಿಹಾಸದಲ್ಲಿ ಗಿನ್ನಿಸ್ ದಾಖಲೆಗೆ ತಲುಪಿಸಿದರು. ನಮ್ಮ ಮಾನ್ಯ ಧರ್ಮ್‌ಸಿಂಗ್ ಅವನನ್ನು ಮೀರಿಸುತ್ತಾರೆಂದು ಕಾಣುತ್ತದೆ. ನಾಗರ ಹಾವುಗಳು, ಕೆರೆ ಹಾವುಗಳು, ಮಂಡಲದ ಹಾವುಗಳು, ಮತ್ತು ನೀರು ಹಾವುಗಳು, ಎಷ್ಟು ಹಾವುಗಳು, ಈ ಹಾವುಗಳ ಮಧ್ಯೆ ವರ್ಷಗಟ್ಟಲೆ ಮಲಗಿದ್ದಾರೆ. ಇದು ನಿಜವಾಗಿಯೂ ಅತ್ಯಂತ ಹೆಚ್ಚಿನ ರೀತಿಯಲ್ಲಿ ಗಿನ್ನಿಸ್ ದಾಖಲೆಗಿಂತಲೂ ಉನ್ನತವಾದ ಯಾವುದಾದರೂ ಅತ್ಯುನ್ನತ ಪ್ರಶಸ್ತಿ ದೊರಕುವುದಾದರೆ 100 ನಾಗರ ಮಧ್ಯೆ ಮಲಗಿದ್ದನ್ನು ಮೀರಿಸಿದಂತಹ ವೀರ ಯಾರಾದರೂ ಇದ್ದರೆ ಅದು ಧರ್ಮ್‌ಸಿಂಗ್‌ರವರು.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಅವರು ಏನೋ ಗಿನ್ನಿಸ್ ದಾಖಲೆಗೆ ಗಾಜಿನ ಮನೆಯಲ್ಲಿ 100 ಹಾವುಗಳ ಜೊತೆ ಮಲಗಿದ್ದರು, ಆದರೆ ಆತನಿಗೆ ನಾಗರಹಾವುಗಳ ವಿಷಕ್ಕೆ ಪರಿಹಾರ ಕೊಡತಕ್ಕಂತಹವರು ಇರಲಿಲ್ಲ. "ಆ ವಿಷದ ಹಲ್ಲನ್ನು ತೆಗೆದು ಹಾವನಾಡಿಸಬಲ್ಲಡೆ ಹಾವಿನ ವಿಷವೇ ಲೇಸಯ್ಯ, ಹಾವಿನ ಸಂಗವೇ ಲೇಸಯ್ಯ . . ಎಂದು ಅಕ್ಕಮಹಾದೇವಿಯವರು ಹೇಳುತ್ತಾರೆ. ಆ ವಿಷ ಇಳಿಸುವ ಗಾರುಡಿಗ ಮಾನ್ಯ ಧರ್ಮ್‌ಸಿಂಗ್‌ರವರ ಜೊತೆ ತಾವು ಸೇರಿಸಿದ್ದೀರಿ. ಆದ್ದರಿಂದ ಸ್ಪಷ್ಟವಾಗಿ ಹೇಳಿ, ಈ ಸರ್ಕಾರದ ವಿರುದ್ಧ ಮುಖ್ಯಮಂತ್ರಿಗಳ ವಿರುದ್ಧ ತಾವು ಇದ್ದೀರಾ? ಆತ್ಮ ಸಾಕ್ಷಿಯಿಂದ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಾನು ಅವರ ಪರವೇ. ಅದರಲ್ಲಿ ಬೇರೆ ಮಾತಿಲ್ಲ, ಅದು ಸತ್ಯ. ಇದರಲ್ಲಿ ಆಶಾಡಭೂತಿ ಬೇಡ. ಧರ್ಮ್‌ಸಿಂಗ್ ಅವರಿಗೆ ಪಕ್ಷ ಭೇದ ಇಲ್ಲ. ನಾವು ಧರ್ಮ್‌ಸಿಂಗ್ ಬಗ್ಗೆ ಪ್ರಾಮಾಣಿಕವಾಗಿ ಹೇಳುತ್ತಿದ್ದೇವೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಅವರ ಅಧಿಕಾರ ಕೊನೆಯ ಒಂದು ಓಟಿನಲ್ಲಿ ಹೋಗುತ್ತದೆ ಎಂದರೆ ನಾನು ಅವರಿಗೆ ಓಟು ಕೊಡುತ್ತೇನೆ. ಪ್ರಾಮಾಣಿಕವಾಗಿ ಓಟು ಕೊಡುತ್ತೇನೆ. ಇದರಲ್ಲಿ ಹಿಂದೆ ಮುಂದೆ ಮಾತನಾಡುವ ಪ್ರಶ್ನೆಯಿಲ್ಲ. ಬೇರೆಯವರು ಕೊಡುವುದು ಬಿಡುವುದು ಅವರಿಗೆ ಸೇರಿದ್ದು ನನ್ನ ವೈಯಕ್ತಿಕವಾದ ಅಭಿಪ್ರಾಯ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅದರಲ್ಲೇನೂ ಬೇರೆ ಮಾತಿಲ್ಲ. ಈಗ ಅವರು ಹೋದ ನಂತರ ಮುಂದೆ ಏನು ಚುನಾವಣೆ ಬರುತ್ತದೆ. ಅಂದರೆ ಚುನಾವಣೆ ಭಯಕ್ಕೋಸ್ಕರ ಬೆಂಬಲ ಕೊಡುತ್ತೇನೆಂದು ಅಲ್ಲ. ನಾನು ಮಾನ್ಯ ನಿಜಲಿಂಗಪ್ಪನವರ ಕಾಲದಿಂದ ನೋಡಿದ್ದೇನೆ. ಅವರೆಲ್ಲಾ ದೈವತ್ವಕ್ಕೆ ಹೊರಟು ಹೋದರು. ಮಾನ್ಯ ನಿಜಲಿಂಗಪ್ಪನವರು, ಮಾನ್ಯ ಹನುಮಂತಯ್ಯ ಜತ್ತಿಯವರು ಅವರೆಲ್ಲಾ ದೈವತ್ವಕ್ಕೆ ಹೊರಟು ಹೋದರು. ಪ್ರಜಾತಂತ್ರ ವ್ಯವಸ್ಥೆಯಲ್ಲಿ

ಜನಸಾಮಾನ್ಯರ ಜೊತೆಯಲ್ಲಿ ಯಾರಾದರೂ ಇದುವರೆಗೆ ಬಂದಿರತಕ್ಕಂತಹ ಮುಖ್ಯಮಂತ್ರಿಗಳು ಪಕ್ಷಭೇದ ಮರೆತು ಚುನಾಯಿತ ಪ್ರತಿನಿಧಿಗಳು ಜನಸಮಾನ್ಯರ ಜೊತೆಯಲ್ಲಿ ಪ್ರೀತಿ ವಿಶ್ವಾಸ ಅಭಿಮಾನದಿಂದ ಮಾತನಾಡಿದ ಮುಖ್ಯಮಂತ್ರಿ ಇದ್ದರೆ ಅದು ಮಾನ್ಯ ಧರ್ಮ್‌ಸಿಂಗ್, ಒಬ್ಬರೇ. ಅದರ ಬಗ್ಗೆ ಬೇರೆ ಮಾತಿಲ್ಲ. ಪಕ್ಷಾತೀತವಾಗಿ ನಾವು ಇದನ್ನು ಒಪ್ಪಿಕೊಳ್ಳಲೇ ಬೇಕು. ಯಾರು ಒಪ್ಪಿಕೊಳ್ಳುತ್ತಾರೋ ಬಿಡುತ್ತಾರೋ ಅದು ಬೇರೆ ವಿಷಯ. ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಅಭಿವೃದ್ಧಿ ಬಗ್ಗೆ ನನಗೆ ಬಹಳ ನೋವಾಗುತ್ತದೆ. ಬಹಳ ತಾರತಮ್ಯ ಇದೆ. ಜಿಲ್ಲೆಗಳ ಬಗ್ಗೆ ತಾಲ್ಲೂಕುಗಳ ಬಗ್ಗೆ ಅಭಿವೃದ್ಧಿ ಕಾರ್ಯಗಳಲ್ಲಿ ತಾರತಮ್ಯ ಇದೆ. ಇವತ್ತು ಪ್ಯಾಕೇಜ್ ಏನಾಯಿತು? ಈ ಪ್ಯಾಕೇಜಸ್ ಬಳ್ಳಾರಿ ಪ್ಯಾಕೇಜ್ ಎಂದು ಹೇಳಿದರು, ಗುಲ್ಬರ್ಗ ಪ್ಯಾಕೇಜ್ ಎಂದು ಹೇಳಿದರು, ಕೊಡಗು ಪ್ಯಾಕೇಜ್ ಎಂದು ಹೇಳಿದರು, ಹೋದ ಕಡೆಗಳಲ್ಲೆಲ್ಲಾ ಪ್ಯಾಕೇಜ್ ಎಂದು ಹೇಳಿದರು, ಪ್ಯಾಕೇಜ್ ಏನಾಯಿತು, ಅದರ ಬಗ್ಗೆ ಏನು ಮಾಡಿದ್ದೀರಿ ಎಂಬುದು ನನಗೆ ಅರ್ಥವಾಗಲಿಲ್ಲ. ಪ್ಯಾಕೇಜ್‌ಗಳ ಬಗ್ಗೆ ನಾವು ಎಲ್ಲೋ ಒಂದು ಕಡೆ ಪ್ರಾಮಾಣಿಕತೆ ಇರಬೇಕು. ಮಾನ್ಯ ಗೋವಿಂದ ಕಾರಜೋಳರವರೆ, ನಿಮ್ಮ ಕಡೆ ಎಲ್ಲಾದರೂ ಪ್ಯಾಕೇಜ್ ಬಗ್ಗೆ ಅನುಕೂಲ ಆಯಿತಾ?

ಶ್ರೀ ಗೋವಿಂದ ಎಂ. ಕಾರಜೋಳ: 650 ಕೋಟಿ ರೂ. ಬಾಗಲಕೋಟೆ ಪ್ಯಾಕೇಜ್ ಎಂದು ಇದೆ, ದಯವಿಟ್ಟು ಅದನ್ನು ನೋಡಿ. ಏಕೆಂದರೆ, ಡ್ಯಾಂಸೈಟ್, ಮನೆ, ಮಠ ಎಲ್ಲಾ ಮುಳುಗಿಸಿಕೊಂಡವರು ಇದ್ದಾರೆ. ಅವರಿಗೆ ಐದು ರೂಪಾಯಿ ಕೊಟ್ಟಿಲ್ಲ. ಬಿಡಿ ಕಾಸೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ಪ್ಯಾಕೇಜ್‌ಗಳು ಬಲಾಢ್ಯ ಮಂತ್ರಿಗಳು ಯಾವ ಯಾವ ಜಿಲ್ಲೆಯಲ್ಲಿ ಇದ್ದಾರೆ, ಅವರು ಆ ಜಿಲ್ಲೆಗೆ ಮಂತ್ರಿ. ತಮಗೆ ಹೇಳುತ್ತೇನೆ, ಏಳು ಹೊಸ ಜಿಲ್ಲೆಗಳನ್ನು ಮಾನ್ಯ ಜೆ.ಹೆಚ್. ಪಟೇಲರು ಮಾಡಿದರು. ಚಾಮರಾಜನಗರ ಸೇರಿದಂತೆ ಏಳು ಜಿಲ್ಲೆಗಳು ಮಾಡಿದರು. ಏಳು ಜಿಲ್ಲೆಗಳ ಬಗ್ಗೆ ಏನಾಗಿದೆ, ಯಾವುದೇ ವಿಧವಾದ ಅಭಿವೃದ್ಧಿ ಕಾರ್ಯಕ್ರಮಗಳು ಆಗಲಿಲ್ಲ. ಮಾನ್ಯ ಪ್ರಕಾಶ್‌ರವರು ಕಂದಾಯ ಸಚಿವರು. ಮಾನ್ಯ ಜೆ.ಹೆಚ್. ಪಟೇಲರ ಕಾಲದಲ್ಲಿ ಏಳು ಜಿಲ್ಲೆಗಳು ರಚನೆ ಆದವು.

(ಈ ಹಂತದಲ್ಲಿ ಆರಗ ಜ್ಞಾನೇಂದ್ರ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ಏಳು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಏನು ಹಣ ಇಟ್ಟಿದ್ದೀರಿ ನೀವು ಏನು ಮಾಡಿದ್ದೀರಿ? ಏನು ಯೋಜನೆ ಕೊಟ್ಟಿದ್ದೀರಿ? ಜಿಲ್ಲೆಗಳು ಮಾಡಿದರೂ ನಿಜಕ್ಕೂ ಇವತ್ತು ಕರ್ನಾಟಕ ಏಕೀಕರಣ ಎಂದರೆ ಮಾನ್ಯ ನಿಜಲಿಂಗಪ್ಪನವರು, ಕರ್ನಾಟಕ ನಾಮಕರಣ ಎಂದರೆ ಮಾನ್ಯ ದೇವರಾಜ್ ಅರಸ್‌ರವರು, ಹೊಸ ಜಿಲ್ಲೆಗಳ ನಿರ್ಮಾಣ ಎಂದರೆ ಶ್ರೀ ಜೆ.ಹೆಚ್. ಪಟೇಲರು. ಅದು ಇತಿಹಾಸದಲ್ಲಿ ಹೋಗುತ್ತದೆ. ಇದು ಬಹಳ ಪ್ರಮುಖವಾಗಿ ಹೇಳುತ್ತಿದ್ದೇನೆ. ಕರ್ನಾಟಕಕ್ಕೋಸ್ಕರ ಅಧಿಕಾರ ಕಳೆದುಕೊಂಡವರು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು. ಇದು ಇತಿಹಾಸದಲ್ಲಿ ಹೋಗುತ್ತದೆ. ಆ ಏಳು ಜಿಲ್ಲೆಗಳ ಸಮಗ್ರ ಅಭಿವೃದ್ಧಿ ಬಗ್ಗೆ ನಾವು ಏನೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಈ ಪರಿಸ್ಥಿತಿ ಎಲ್ಲಿ ತಲುಪಬೇಕು, ನಾವು ಎಲ್ಲಿಗೆ ಹೋಗಬೇಕಾಗಿದೆ?

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ತಮಗೆ ಕೂಡ ಗೊತ್ತಿದೆ. ಈಗಾಗಲೇ 16 ಕೋಟಿ 60 ಲಕ್ಷ ರೂಪಾಯಿಗಳು ನಿಮ್ಮ ಜಿಲ್ಲಾಧಿಕಾರಿಗಳ ಕಛೇರಿಯ ಸಮುಚ್ಛಯ ಚಾಮರಾಜನಗರ ಜಿಲ್ಲೆಯಲ್ಲಿ ತಯಾರಾಗಿದೆ. ಬೇರೆ ಏಳು ಜಿಲ್ಲೆಗಳಲ್ಲಿ ನಾಲ್ಕು ಕಡೆಗಳಲ್ಲಿ ಈ ರೀತಿ ಸುಮಾರು 18 ರಿಂದ 20 ಕೋಟಿ ರೂಪಾಯಿಯವರೆಗೆ ಖರ್ಚು ಮಾಡಿದ್ದೇವೆ. ಎಲ್ಲಾ ಕಡೆ ನಿಮ್ಮ ಹೊಸ ಜಿಲ್ಲೆಗಳಲ್ಲಿ

ಇರತಕ್ಕಂಥದ್ದಕ್ಕೆ 70 ಕೋಟಿ ರೂಪಾಯಿ ಹೊರಟು ಹೋಗಿತ್ತು, ಅದನ್ನು ವಾಪಸ್ ತರಿಸಿ ಅದರ ಮೂಲಕ ಮಿನಿ ವಿಧಾನಸೌಧವನ್ನು ಪ್ರತಿ ತಾಲ್ಲೂಕುಗಳಲ್ಲಿ ಮಾಡುವುದು ಇದೆ. ನಾವು ಹೇಳುವುದು ಬರೀ ಕಟ್ಟಡದಿಂದ ಅಭಿವೃದ್ಧಿ ಆಗಿದೆ ಎಂದು ನಾನು ಭಾವಿಸುವುದಿಲ್ಲ. ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಚಾಮರಾಜನಗರದಲ್ಲಿ ಅನೇಕ ಹಿಂದುಳಿದ ತಾಲ್ಲೂಕುಗಳು ಇವೆ. ಅತ್ಯಂತ ಹಿಂದುಳಿದ ತಾಲ್ಲೂಕುಗಳು ಇವೆ, ಮತ್ತು ಸ್ವಲ್ಪ ಮಟ್ಟಿಗೆ ಮುಂದುವರೆದ ತಾಲ್ಲೂಕುಗಳು ಎಂದು ವರ್ಗೀಕರಣ ಮಾಡಿ ಈ ವರ್ಷದಿಂದ ನಮ್ಮ ಆಯವ್ಯಯದಲ್ಲಿ ವ್ಯತ್ಯಾಸ ಮಾಡಿರತಕ್ಕಂಥದ್ದು ಅಲ್ಲದೆ ಯೋಜನೆಗಳನ್ನು ನಾವು ಜಿಲ್ಲಾ ಸೆಕ್ಟಾರ್‌ನಲ್ಲಿ ಆದರೂ ಮಾಡಿ, ರಾಜ್ಯ ಸೆಕ್ಟಾರ್‌ನಲ್ಲಿ ಮಾಡಿ ಅವರಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಆದಾಗ ಅದರ ಇಡೀ ಫಲಾನುಭವ ಬರತಕ್ಕಂಥದ್ದು ಚಾಮರಾಜನಗರ ಜಿಲ್ಲೆಯಲ್ಲಿರತಕ್ಕಂತಹ ಅನೇಕ ತಾಲ್ಲೂಕುಗಳಿಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದು ಏಳು ಜಿಲ್ಲೆಗಳ ಬಗ್ಗೆ ಈ ಕಟ್ಟಡಗಳನ್ನು ಕಟ್ಟಿದ ತಕ್ಷಣ ಅದು ಬೆಳವಣಿಗೆ ಆಯಿತು ಎನ್ನತಕ್ಕ ಮಾತಲ್ಲ. ಅದು ಆಗಲೇ ಕಟ್ಟಡ ಪ್ರಾರಂಭ ಆಗಿ ಐದು ವರ್ಷಗಳಾಯಿತು. ಈಗ ಮುಗಿಯುತ್ತಾ ಬಂದಿದೆ. ರಸ್ತೆಗಳು ವ್ಯವಸ್ಥೆ ಹದಗೆಟ್ಟಿದೆ. ಕುಡಿಯುವ ನೀರಿನ ವ್ಯವಸ್ಥೆ ಹದಗೆಟ್ಟಿದೆ. ಬಡವರಿಗೆ ಮನೆಗಳನ್ನು ಕೊಡುವ ವ್ಯವಸ್ಥೆ ಹದಗೆಟ್ಟಿದೆ. ಅನೇಕ ವಿಚಾರಗಳಲ್ಲಿ ಏಳು ಜಿಲ್ಲೆಗಳು ಆ ಜಿಲ್ಲೆಯ ಸ್ಥಾನಮಾನಕ್ಕೆ ಬರಬೇಕಾದರೆ ಎಷ್ಟು ಕೆಲಸ ನಾವು ಮಾಡಬೇಕಾಗಿದೆ, ಆ ಕೆಲಸ ಇವತ್ತು ಪ್ರಾಮಾಣಿಕವಾಗಿ ಆಗಿಲ್ಲ. ಅದಕ್ಕೆ ನಾನು ಏಳು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ವಿಶೇಷವಾದ ಯೋಜನೆಯನ್ನು ಸರ್ಕಾರ ತಯಾರು ಮಾಡಿ ಅದಕ್ಕಾಗಿ ಆಯವ್ಯಯದಲ್ಲಿ ವಿಶೇಷವಾದ ಹಣವನ್ನು ಇಡಬೇಕೆಂದು ತಮ್ಮಲ್ಲಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ಪೊಲೀಸ್ ಸಿಬ್ಬಂದಿ ಬಗ್ಗೆ ನಾನು ಅನೇಕ ಬಾರಿ ಸದನದಲ್ಲಿ ಮಾತನಾಡಿದ್ದೇನೆ. ಅವರನ್ನು ಯಾವ ರೀತಿ ಕಾಣುತ್ತಿದ್ದೇವೆ, ಕಾಡು ಪ್ರಾಣಿಗಳನ್ನು ಪ್ರಾಣಿ ಸಂಗ್ರಹಾಲಯಗಳಲ್ಲಿ ಏನು ಸಾಕುತ್ತಿದ್ದಾರೆ, ಅದಕ್ಕಿಂತ ಕಡೆಯಾಗಿ ಕಾಣುತ್ತಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸದನದ ಅತ್ಯಂತ ಹಿರಿಯ ಸದಸ್ಯರು. ಆಡಳಿತ ಸುಧಾರಣೆಗಳ ಬಗ್ಗೆ ಅವರು ಸುದೀರ್ಘವಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಪ್ರಕಾಶ್‌ರವರು ಎಲ್ಲಿ ಹೋದರೋ ಗೊತ್ತಿಲ್ಲ. ಮಾನ್ಯ ಸಿಂಧ್ಯಾರವರು ಇದ್ದಾರೆ. ಮೂಲಭೂತವಾಗಿ ಪರಿಪಾಲನೆ ಮತ್ತು ಆಡಳಿತ ಇವೆರಡೂ ಬೇರೆ ಬೇರೆ, ರಾಜಕಾರಿಣಿ ಆದವರು ಅಧಿಕಾರದ ಸೂತ್ರ ಹಿಡಿಯತಕ್ಕಂತಹವರು ಪರಿಪಾಲನೆ ಮಾಡಬೇಕು. ಗವರ್ನೆನ್ಸ್ ಮಾಡಬೇಕು. ಆಡಳಿತವನ್ನು ಅಡ್ಮಿನಿಸ್ಟ್ರೇಷನ್‌ನ್ನು ಅಧಿಕಾರಶಾಹಿ ನೌಕರರು ಇರುತ್ತಾರೆ ಅವರು ಮಾಡುತ್ತಾರೆ. ದಿವಸ ಕಳೆದಂತೆಲ್ಲಾ ಏನಾಗಿದೆ ಆಡಳಿತವನ್ನು ರಾಜಕಾರಣಿಗಳು ಮಾಡುತ್ತಿದ್ದಾರೆ. ಕೆಳಹಂತದ ರಾಜಕಾರಣಿಗಳು ಯಾರ್‍ಯಾರಿಗೆ ಅವಕಾಶ ಸಿಗುತ್ತವೆ ಅವರೆಲ್ಲಾ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಪರಿಪಾಲನೆ ಮರೆತೇ ಬಿಟ್ಟಿದ್ದೇವೆ. ನೀವು ಅನೇಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೀರಿ, ಕೆಲವು ಪರಿಪಾಲನೆ ವ್ಯಾಪ್ತಿಗೆ ಬರುತ್ತವೆ, ಕೆಲವು ಆಡಳಿತದ ವ್ಯಾಪ್ತಿಗೆ ಬರುತ್ತವೆ. ಇವತ್ತಿಗೂ ಕೂಡ ಸರ್ಕಾರದ ಮಟ್ಟದಲ್ಲಿ ಇವರು ಪರಿಪಾಲನೆ ಮತ್ತು ಆಡಳಿತದ ಮಧ್ಯೆ ಇರತಕ್ಕಂತಹ ಲೈನ್ ಆಫ್ ಡಿಮಾರ್ಕೇಷನ್ ಏನಿದೆ ಅದನ್ನು ಗುರುತಿಸಿ ಇದು ನಮ್ಮ ಜ್ಯೂರಿಸ್ಡಿಕ್ಷನ್, ಇದು ನಿಮ್ಮ ಕೆಲಸ, ಮಾನ್ಯ ಸಿದ್ಧವೀರಪ್ಪನವರು ಅಥವಾ ಚನ್ನಬಸಪ್ಪನವರು ಅಥವಾ ಆರ್.ಎಂ. ಪಾಟೀಲರು ಅವರ

ಒಂದೆ ಇದ್ದಂತಹವರು ಸಿದ್ದಯ್ಯನವರು ಮತ್ತು ಹನುಮಂತಯ್ಯನವರು ಅವರ ಆಡಳಿತವನ್ನು ಇವತ್ತು ನಾವು ಏಕೆ ನೆನಪು ಮಾಡಿಕೊಳ್ಳುತ್ತೇವೆ, ಅವರಿಗೆ ಈ ಚಟ ಇರಲಿಲ್ಲ. ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಚಟ ಇರಲಿಲ್ಲ. ಆಡಳಿತ ನಡೆಸತಕ್ಕಂತಹವರಿಗೆ ಮಂತ್ರಿಯ ಭಯ ಇತ್ತು. ಮಂತ್ರಿಗೆ ತನ್ನ ಕಾರ್ಯಾಚರಣೆ ಏನು, ತಾನು ರೂಪಿಸಿರತಕ್ಕಂತಹ ನೀತಿ ಏನು ಅದರ ಅನುಷ್ಠಾನದ ಬಗ್ಗೆ ತನ್ನ ಹೊಣೆ ಏನು ಎನ್ನತಕ್ಕ ಅರಿವು ಇತ್ತು. ಎಲ್ಲೋ ಒಂದು ಕಡೆ ನೀವು ಸ್ವಲ್ಪ ಆ ಲೈನ್ ಅನ್ನು ಡಿ ಮಾರ್ಕೇಟ್ ಮಾಡಿ. ಪೊಲೀಸ್ ಇಲಾಖೆ ತೆಗೆದುಕೊಳ್ಳಿ, ಪೊಲೀಸ್ ಇಲಾಖೆಯನ್ನು ಯಾರು ನಡೆಸುವುದು, ಡಿ.ಜಿ. ನಡೆಸುತ್ತಾರಾ? ಹೋಮ್ ಮಿನಿಸ್ಟರ್ ನಡೆಸುತ್ತಾರಾ? ಆ ಕ್ಷೇತ್ರದ ಎಂ.ಎಲ್.ಎ.ಗಳು ನಡೆಸುತ್ತಾರಾ, ನಮಗೆ ಏನೂ ಅರ್ಥವಾಗುತ್ತಿಲ್ಲ. ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೇಬಲ್ಸ್ ಅವತ್ತು ಎಷ್ಟು ಇದ್ದರು, ಇವತ್ತು ಎಷ್ಟು ಇದ್ದಾರೆ, ಯೂನಿಫಾರಂ ಹಾಕದೆ ಬೇರೆ ಬೇರೆ ಪೋಸ್ಟ್‌ಗೆ ಹೋಗಿರತಕ್ಕಂಥವರು ಎಷ್ಟು? ಈ ರಾಜ್ಯದ ಜನಸಂಖ್ಯೆಗೆ ಇಷ್ಟು ಜನ ಐಪಿಎಸ್ ಆಫೀಸರ್ಸ್ ಅಗತ್ಯ ಇತ್ತಾ? ಇವರೆಲ್ಲರೂ ಸೇರಿ ಕ್ರೈಂ ರೇಟ್ ಅವತ್ತಿಗೂ ಮತ್ತು ಇವತ್ತಿಗೂ ಜಾಸ್ತಿಯಾಗಿದೆಯಾ ಅಥವಾ ಕಡಿಮೆಯಾಗಿದೆಯಾ ಇದರಲ್ಲಿ ಆಡಳಿತದ ಹೊಣೆ ಎಷ್ಟು? ಪರಿಪಾಲನೆಯ ಹೊಣೆ ಎಷ್ಟು? ಸ್ವಲ್ಪ ನಮಗೆ ನೀವು ವಿವರಿಸಿ ಹೇಳಿದರೆ ಸಭೆಗೂ ಅನುಕೂಲವಾಗುತ್ತದೆ. ಮಾನ್ಯ ಸಿಂಧ್ಯಾರವರು ಹೋಂ ಮಿನಿಸ್ಟರ್ ಆಗಿದ್ದವರು, ಇದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿದಂತಾಗುತ್ತದೆ ಚರ್ಚೆಗೆ ಒಂದು ಹೊಸ ಆಯಾಮ ಬರುತ್ತದೆ ಎಂಬುದು ತಮ್ಮಲ್ಲಿ ನನ್ನ ಮನವಿ.

ಶ್ರೀ ವಾಟಾಳ್ ನಾಗರಾಜ್: ಧರ್ಮವೀರ ಅವರು ವರದಿಯನ್ನು ಕೊಟ್ಟಿರುವ ಬಗ್ಗೆ ತಮಗೆ ಗೊತ್ತಿರಬಹುದು. ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ತಾವು ಓದಿದ್ದಿರೋ ಇಲ್ಲವೋ ಗೊತ್ತಿಲ್ಲ, ತಾವು ಪ್ರಾಮಾಣಿಕವಾಗಿ ಓದಿರುತ್ತೀರೆಂದು ನಾನು ಅಂದುಕೊಂಡಿದ್ದೇನೆ. ಧರ್ಮವೀರ ವರದಿ ಏನಾಯಿತು? ಸುಮ್ಮನೆ ಇವರು ಮಾತನಾಡುತ್ತಾರೆ, ಆ ವರದಿಯ ಬಗ್ಗೆ ನಾನು ಕೇಳಿದೆ, ಇಡೀ ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಒಟ್ಟು ಸಂಖ್ಯೆ: 74,716 ಮಾನ್ಯ ಈಶ್ವರಪ್ಪನವರೆ, ಹಾಗೂ ಮಾಧುಸ್ವಾಮಿಯವರೆ ಪೊಲೀಸ್ ಇಲಾಖೆಯ ಎಲ್ಲಾ ಕಾನ್ಸ್‌ಟೇಬಲ್‌ಗಳು ಸೇರಿ, ಇದರ ಬಗ್ಗೆ ತಮಗೆ ಹೇಳುತ್ತೇನೆ, ಇವತ್ತು ನಮ್ಮ ಐದೂವರೆ ಕೋಟಿ ಜನರ ಪರಿಸ್ಥಿತಿಗೆ ಈ ಸಂಖ್ಯೆಯ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಇದನ್ನು ನಾವು ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ. ಅವರನ್ನು ನಾವು ಹೀನಾಯವಾಗಿ ಕಾಣುತ್ತಿದ್ದೇವೆ. ಅವರ ಸಂಖ್ಯೆ ಏನು ಇವತ್ತು ಇಷ್ಟು ಕಡಿಮೆ ಇದೆ, ಡಿಜಿಪಿ:3, ಎಡಿಜಿಪಿ–13, ಐಜಿ:27 ಡಿಐಜಿ–32, ಎಸ್‌ಪಿ–100 ಈ ತರಹ ಒಟ್ಟು 74,716 ಕಾನ್ಸ್‌ಟೇಬಲ್‌ಗಳವರೆಗೂ ಇದರ ಬಗ್ಗೆ ನನಗೆ ಅನ್ನಿಸುತ್ತದೆ, ಇವರ ಮೇಲೆ ಕರುಣೆ ಬೇಡವೇ, ಪ್ರಾಮಾಣಿಕತೆ ಬೇಡವೇ, ಮೊದಲನೆಯದಾಗಿ ಆಡಳಿತದಲ್ಲಿ ಭ್ರಷ್ಟಾಚಾರ ನಿಲ್ಲಬೇಕಾದರೆ ವರ್ಗಾವರ್ಗಿಯ ಸುಧಾರಣೆ ಮೊದಲು ಆಗಬೇಕು. ಇದರ ಸಮಗ್ರ ಸುಧಾರಣೆ ಆಗಲೇಬೇಕು. ವರ್ಗಾವರ್ಗಿಯಲ್ಲಿ ರಾಜಕಾರಣ ಕೈಹಾಕಬಾರದು. ಇದರ ಬಗ್ಗೆ ಪ್ರಾಮಾಣಿಕವಾಗಿ ಹೇಳುತ್ತೇನೆ. ವರ್ಗಾವಣೆಯ ಬಗ್ಗೆ ಸುಧಾರಣೆಯಾಗದಿದ್ದರೆ ಇವತ್ತು ಅಪಾಯ ಕಟ್ಟಿಟ್ಟ ಬುತ್ತಿಯಾಗುತ್ತದೆ. ಇನ್ನು ನೂರು ವರ್ಷಗಳಾದರೂ ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಭ್ರಷ್ಟಾಚಾರವೆಂದರೆ, ನಾವು ಯಾರೂ ಒಬ್ಬರ ಮೇಲೆ ಒಬ್ಬರು ಹೇಳುವುದು ಬೇಕಾಗಿಲ್ಲ. ಹಿಮಾಲಯ ಪರ್ವತಕ್ಕಿಂತಲೂ

ಇದು ಹೆಚ್ಚಾಗಿ ಬೆಳೆದುಹೋಗಿದೆ. ಅದನ್ನು ನಿಲ್ಲಿಸುವುದಕ್ಕೆ ಸರಿಯಾದ ಸಮರ್ಥವಾದಂತಹ ನಾಯಕತ್ವದ ಆಡಳಿತ ಬೇಕು. ಅದು ಇವತ್ತು ಆಗುತ್ತಿಲ್ಲ, ನಾನು ತಯಾರಾಗಿದ್ದೇನೆ, ನಮ್ಮ ಅನೇಕ ಶಾಸಕರೂ ಕೂಡ ತಯಾರಾಗಿದ್ದೇವೆ, ವರ್ಗಾವರ್ಗಿಯ ವಿಚಾರದಲ್ಲಿ ನಾವು ರಾಜಕಾರಣಿಗಳು ಕೈಹಾಕುವುದಿಲ್ಲ. ಅಂದಮೇಲೆ ಅಧಿಕಾರಿಗಳು ಅವರು ಸರಿ ಇರಬೇಕಲ್ಲಾ, ಅವರು ಪ್ರಾಮಾಣಿಕರಾಗಿರಬೇಕು. ಆದ್ದರಿಂದ ವರ್ಗಾವರ್ಗಿಯ ಸಮಗ್ರವಾದ ನೀತಿ ಬದಲಾವಣೆಯಾಗದಿದ್ದರೆ ಭ್ರಷ್ಟಾಚಾರ ನಿಲ್ಲುವುದಿಲ್ಲ. ಇನ್ನು ಎರಡನೆಯದು ಅಧ್ಯಕ್ಷರೆ, ನೀವು ಪೋಲೀಸ್‌ನವರಿಗೆ 24 ಗಂಟೆಗಳ ಕಾಲ ದುಡಿಯಬೇಕು ಎಂದು ಹೇಳುತ್ತಿರಲ್ಲಾ, ಏಕೆ? 24 ಗಂಟೆಗಳ ಕಾಲ ಅವರು ಏಕೆ ದುಡಿಯಬೇಕು? ನಮ್ಮ ಸರ್ಕಾರಿ ನೌಕರರಿಗೆ 8 ಗಂಟೆಗಳ ಕಾಲ ಕೆಲಸ; ಅವರೂ ಸರ್ಕಾರಿ ನೌಕರರು; ಮಾನ್ಯ ಶಿವಕುಮಾರ್‌ರವರೆ, ಇದನ್ನು ತಾವು ಒಪ್ಪುತ್ತೀರೋ?

ಶ್ರೀ ಡಿ.ಕೆ. ಶಿವಕುಮಾರ್: ಮೊದಲು ವರ್ಗಾವರ್ಗಿಯ ಬಗ್ಗೆ ಮೊದಲು ನಿಮ್ಮಿಂದ ಅಂದರೆ ನಿಮ್ಮ ಕ್ಷೇತ್ರದಿಂದ ಪಾಲನೆಯಾಗುತ್ತದೆಯೇ ಎಂದು ನಾನು ನನ್ನ ಫ್ರೆಂಡ್ ಜೊತೆ ಚಿಂತನೆಯನ್ನು ಮಾಡುತ್ತಿದ್ದೇನೆ. ಹಿಂದೆ ಆರ್. ಕೃಷ್ಣಮೂರ್ತಿಯ ಬಗ್ಗೆ ಚಿಂತೆ ಮಾಡುತ್ತಿದ್ದೆವು, ಈಗ ಇವರ ಬಗ್ಗೆ ಚಿಂತೆ ಮಾಡಬೇಕಾಗಿದೆ. ವರ್ಗಾವರ್ಗಿಯ ಬಗ್ಗೆ; ನಿಮ್ಮ ಕ್ಷೇತ್ರದಲ್ಲಿಯಾದರೂ ಕೂಡ ನೀವು ಬಾಯಿ ಹಾಕದಿರುವುದು ನಿಮ್ಮಿಂದ ಪ್ರಾರಂಭವಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್: ಏನು ಇಲ್ಲವಲ್ಲಾ, ಅವರು ಹೇಳಿದ್ದೆಲ್ಲಾ ಹಾಕಿಕೊಟ್ಟಿದ್ದೇವಲ್ಲಾ. ಮಾನ್ಯ ಶಿವಕುಮಾರ್‌ರವರು ಹೇಳಿದ್ದಾರೆಂದ ಕೂಡಲೇ ಹಾಕಿಸಿಕೊಟ್ಟಿದ್ದೇವಲ್ಲಾ. ಈಗ ನೀವು ಎತ್ತಿಕಟ್ಟುವುದು ನೋಡಿ. ಇದು ಹೇಗಿದೆ ನೋಡಿ.

ಶ್ರೀ ಆರ್. ಧ್ರುವನಾರಾಯಣ: ಮಾನ್ಯ ಸದಸ್ಯರು ಎದೆಮುಟ್ಟಿಕೊಂಡು ಹೇಳಬೇಕು ಈ ವರ್ಗಾವರ್ಗಿಯ ಬಗ್ಗೆ, ಇದರಲ್ಲಿ ನಿಜವಾಗಿಯೂ ಕೂಡ ಯಾರೂ ರಾಜಕೀಯ ಹಸ್ತಕ್ಷೇಪ ಮಾಡಬಾರದು ಎನ್ನುವುದನ್ನು.

ಶ್ರೀ ವಾಟಾಳ್ ನಾಗರಾಜ್: ನಾನು ಎದೆಯನ್ನೇ ಮುಟ್ಟಿಕೊಂಡು ಹೇಳುತ್ತಿದ್ದೇನೆ. ನಾವೇನು ಕೈಕಾಲು ಮುಟ್ಟುತ್ತಿದ್ದೇವಾ? ನಾವು ಎದೆಯನ್ನು ಮುಟ್ಟಿಕೊಂಡು ಹೇಳುತ್ತಿದ್ದೇವೆ. ಎರಡು ಕೈಯಲ್ಲಿ ಮುಟ್ಟುತ್ತಿದ್ದೇವೆ, ನೀವು ಒಂದು ಕೈಯಲ್ಲಿ ಮುಟ್ಟುತ್ತೀರಿ, ನಾವು ಎರಡು ಕೈಯಲ್ಲಿ ಮುಟ್ಟುತ್ತೇವೆ. ನೀವು ಮಾಡುವಾಗ ಎದೆಯನ್ನು ಮುಟ್ಟಿಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕುಮಾರ್: ಏನೂ ಇಲ್ಲ, ವರ್ಗಾವರ್ಗಿಗೆ ಕೈಹಾಕಲೇಬೇಕು ಎಂದು ಅವರು ಹೇಳುತ್ತಿದ್ದಾರೆ. ನೀವು ಹಾಕಬಾರದು ಎಂದು ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಅದನ್ನೇ ನಾನು ಹೇಳುತ್ತಿರುವುದು. ಹಾಕಬಾರದು ಎಂದು ಹಾಕಿದರೆ ನಾವೆಲ್ಲರೂ ಇದರಲ್ಲಿ ಪಕ್ಷಾತೀತವಾಗಿ ಮಾಡಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಛೇರ್ಮನ್‌ರವರೆ, ನಾನು ಮತ್ತೊಮ್ಮೆ ತಮಗೆ ಸಹಾಯವನ್ನು ಮಾಡುತ್ತೇನೆ. ಅದಕ್ಕಾಗಿ ನಾನು ಕಾಯುತ್ತಿದ್ದೇನೆ, ಇದು ಎಲ್ಲಿಂದ ಪ್ರಾರಂಭವಾಗುತ್ತದೆ. ಮಂತ್ರಿಯಾದವರಿಗೆ ಆಪ್ತ ಕಾರ್ಯದರ್ಶಿ, ಅವರ ಸಂಬಂಧಿಕನೋ ಅಥವಾ ಅವರ ಜಾತಿಯವನು ಬೇಕು. ಅಥವಾ ಆಪ್ತ ಕಾರ್ಯದರ್ಶಿಯಾಗಿ ನಾಮಕಾವಸ್ತೆಯಾಗಿ ಒಬ್ಬರನ್ನು ಇಟ್ಟುಕೊಳ್ಳುತ್ತಾರೆ, ಒಬ್ಬ ಪಿ.ಎ. ಬಹಳ ಪ್ರಭಲಸ್ಥರಾಗಿರುವವರನ್ನು ಸಂಬಂಧಿಕನು ಅಥವಾ

ಜಾತಿಯವನೋ ಇರುತ್ತಾನೆ. ಯಾವನೋ ಒಬ್ಬ ಹಲ್ಕಾ ಕೆಲಸ ಮಾಡುವ ಇನ್ಸ್‌ಪೆಕ್ಟರ್ ಇದ್ದರೆ ಅವನ ಜಾತಿಯವನು ಇದ್ದರೆ ಅವನನ್ನು ಸಸ್ಪೆಂಡ್ ಮಾಡಕೂಡದು. ಈ ಜಾತಿ ಇದೆಯಲ್ಲಾ, ಭ್ರಷ್ಟಾಚಾರಕ್ಕಿಂತಲೂ ಹೊಲಸು. ಭ್ರಷ್ಟಾಚಾರ ಹೇಗೆ ಪ್ರಾರಂಭವಾಗುತ್ತದೆ. ಎಲ್ಲಾ ಇನ್ಸ್‌ಪೆಕ್ಟರ್‌ಗಳ ಪೋಸ್ಟ್ ಸಮನಾದರೆ ದುಡ್ಡು ಯಾರು ಕೊಡುತ್ತಾರೆ; ಕೆಲವು ಇನ್ಸ್‌ಪೆಕ್ಟರ್‌ಗಳ ಪೋಸ್ಟ್ ದುಡ್ಡು ಸಂಪಾದನೆಗೆ ಅವಕಾಶವನ್ನು ಕೊಡುತ್ತದೆ. ಕೆಲವು ಪೋಸ್ಟ್‌ಗಳಲ್ಲಿ ದುಡ್ಡು ಇರುವುದಿಲ್ಲ. ದುಡ್ಡು ಇರುವ ಜಾಗಕ್ಕೆ ಅವನು ಹೋಗಬೇಕಾದರೆ ಅವನು ನಮ್ಮಂತವರಿಗೆ ಬಂದು ಹೇಳುತ್ತಾನೆ. ನೀವು ಮಾಡಿ ಕೊಡಿ ಸಾರ್ ನಿಮಗೇನಾದರೂ ಕೊಡುತ್ತೇನೆಂದು ಹೇಳುತ್ತಾನೆ. ನಾವು ಸುಮಾರು ದುಡ್ಡನ್ನು ಖರ್ಚು ಮಾಡಿಕೊಂಡು ಬಂದಿರುತ್ತೇವೆ ಏನೋ ಕೊಟ್ಟಿದ್ದು ಕೊಡಪ್ಪಾ ಎಂದು ಹೇಳುತ್ತೇವೆ. ಆಗ ನಾವು ಹೆದರಿಸುತ್ತೇವೆ. ನಾನು ಏನು ಹೇಳುತ್ತೇನೆಂದರೆ, ಎಲ್ಲಿಂದ ಪ್ರಾರಂಭವಾಗುತ್ತಿದೆ ಇದು, ಇದಕ್ಕೆ ಕೊನೆ ಏನು? ನಾವು ಮುಕ್ತವಾಗಿ ಮಾತನಾಡುವಾಗ ಆತ್ಮಸಂಶೋಧನೆಗೆ ನಮ್ಮನ್ನು ನಾವು ಒಳಪಡಿಸಿಕೊಳ್ಳಬೇಕಾಗುತ್ತದೆ. ಹಿಂದೆ ಪಟೇಲ್‌ರವರು ಇದ್ದಾಗ ಕೆಪಿಟಿಸಿಎಲ್ ವಿಚಾರ ಬಂದಾಗ ನಾವು ಮಾತನಾಡಿಕೊಂಡೆವು. ಎಲ್ಲರೂ ಆಗ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡೆವು. ಈಗ ಸ್ವಲ್ಪ ಹೊತ್ತಿನ ಮುಂಚೆ ಆಯೋಗದ ವಿಚಾರದ ಬಗ್ಗೆ ರಾಜೇಂದ್ರನ್ ಮಾತನಾಡುವಾಗ ಹೇಳಿದರು. ಸರ್ಕಸ್ ದುರಂತವಾಯಿತು, ಆಯೋಗ ರಚನೆಯಾಯಿತು, ಅಧಿಕಾರಿಗಳ ಮೇಲೆ ಏನೂ ಕ್ರಮವನ್ನು ಜರುಗಿಸಲಿಲ್ಲ, ಕಾರಣವೇನು? ಯಾರೋ ಸಂಬಂಧ ಇರುವವರನ್ನು ಹಿಡಿದುಕೊಳ್ಳುತ್ತಾರೆ. ಗಂಗಾರಾಂ ಕಟ್ಟಡದ ದುರಂತವಾಯಿತು, ಸಂಬಂಧಪಟ್ಟವರಿಗೆ ಶಿಕ್ಷೆಯೇ ಆಗಲಿಲ್ಲ. ಸತ್ತವರು ಸತ್ತರು, ಭ್ರಷ್ಟಾಚಾರ ಎಂದರೆ ಬರೀ ಹಣ ಕೊಡುವುದು ತೆಗೆದುಕೊಳ್ಳುವುದು ಅದು ಅಷ್ಟೇ ಭಷ್ಟಾಚಾರ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಈ ಭ್ರಷ್ಟಾಚಾರಕ್ಕೆ ವಿವಿಧ ಆಯಾಮಗಳು ಇವೆ. ಸ್ವಜನ ಪಕ್ಷಪಾತ, ರಾಜಕೀಯ ನಿರ್ಬಂಧಕ್ಕಾಗಿ ಮಾಡುವುದು, ಹಣಕ್ಕಾಗಿ ಮಾಡುವುದು, ಬೇರೆ ಕೆಲವು ದೌರ್ಬಲ್ಯಗಳನ್ನು ನಿವಾರಿಸಿಕೊಳ್ಳುವುದಕ್ಕೆ ನಾವು ರೋಗಕ್ಕೆ ಒಳಗಾಗಿ ಈಲ್ಡ್ ಆಗಿ ಅಧಿಕಾರವನ್ನು ದುರುಪಯೋಗ ಮಾಡುವುದು, ಇದಕ್ಕೆ ಒಂದು ಬಾರ್ಡರ್‌ಲೈನೇ ಇಲ್ಲ. ಇವೆಲ್ಲದರ ಒಟ್ಟು ಪರಿಣಾಮ ನಾವು ಇಲ್ಲಿಗೆ ಬಂದು ತಲುಪುತ್ತೇವೆ. ಆಮೇಲೆ ಮೇಲಾಧಿಕಾರಿಗಳಿಗೆ ಕೆಳಗಿರುವವರ ಮೇಲೆ ಪ್ರಿಜುಡೀಸ್ ಇರುತ್ತದೆ. ಅವರು ಹೇಳಿದ ಹಾಗೆ ಮತ್ತೊಬ್ಬರಿಗೆ ಶಿಕ್ಷೆ ಮಾಡುವುದು, ಕೆಲವು ಸಲ ಮೇಲಾಧಿಕಾರಿಗಳು ಪಾಪ ಪ್ರಾಮಾಣಿಕವಾಗಿದ್ದರೆ ಕೆಳಗಿನವನಿಗೆ ಹೆಚ್ಚು ಸಲಿಗೆಯನ್ನು ಕೊಟ್ಟು ಮೇಲಿರುವಂತಹ ಅಧಿಕಾರಿಯನ್ನು ನಿರುಪಯುಕ್ತರನ್ನಾಗಿ ಮಾಡುವುದು.

ಶ್ರೀ ವಾಟಾಳ್ ನಾಗರಾಜ್: ನಾನು ನಿಮ್ಮ ವಾದವನ್ನು ಒಪ್ಪುತ್ತೇನೆ. ಇದು ಭ್ರಷ್ಟಾಚಾರದ ನಾನಾ ಮುಖಗಳು. ಇದು ಆರಂಭದಲ್ಲಿಯೇ ಶುರುವಾಗುತ್ತದೆ. ಅದನ್ನು ನಾನು ಒಪ್ಪುತ್ತೇನೆ. ಈಗ ಮಂತ್ರಿಯಾದ ತಕ್ಷಣ, ಈ ಸದನಕ್ಕೆ ಒಳಗಡೆ ಕೆಂಗಲ್ ಹನುಮಂತಯ್ಯನವರು ಬರುವುದಕ್ಕಾಗಲಿಲ್ಲ. ಈ ಸದನ ಕಟ್ಟಿಸಿದಂತಹ ಕೆಂಗಲ್ ಹನುಮಂತಯ್ಯನವರು ಬರುವುದಕ್ಕಾಗಲಿಲ್ಲ. ನಾವು ಮಂತ್ರಿಯಾಗಿ ಪ್ರಮಾಣವಚನ ತೆಗೆದುಕೊಳ್ಳುವಾಗ ಬಂದು ಇಲ್ಲಿ ಏನು ಮಾಡುತ್ತೇವೆ, ವಿಧಾನಸೌಧದಲ್ಲಿ, ಎಲ್ಲಾ ರೂಮುಗಳಲ್ಲಿ ಪೂಜೆಯನ್ನು ಶುರು ಮಾಡುತ್ತೇವೆ. ಆಪ್ತ ಕಾರ್ಯದರ್ಶಿಗಳು ಯಾರು ಬೇಕು, ಅವರಿಗೆ ಬಹಳ ಬೇಕಾದವರನ್ನು ಇಟ್ಟುಕೊಳ್ಳುತ್ತಾರೆ ನಾವು ಎಲ್ಲಿಗೆ ತಲುಪುತ್ತಿದ್ದೇವೆ, ಇದು ಹೋಗಬೇಕು, ಭ್ರಷ್ಟಾಚಾರದ ನಾನಾಮುಖಗಳು ಇದಕ್ಕೆ ಆಡಳಿತ ಸುಧಾರಣೆಯಾಗಬೇಕು. ಆಡಳಿತದಲ್ಲಿ ದಕ್ಷತೆ

ಇರಬೇಕೆನ್ನುವ ಬಗ್ಗೆ ನಾನು ನಿಮ್ಮ ಸಂಪೂರ್ಣವಾದ ಾದವನ್ನು ಒಪ್ಪುತ್ತೇನೆ. ಇದರಲ್ಲಿ ನಾವೆಲ್ಲರೂ ಕೂಡ ಸೇರಬೇಕು. ವರ್ಗಾವರ್ಗಿಯಲ್ಲಿ ನಡೆಯುವು ನ್ನು ನೀವು ಎಳೆಎಳೆಯದಾಗಿ ಬಿಡಿಸುತ್ತಿದ್ದರೆ, ರೇಟ್‌ನ್ನು ನಾವು ಇಲ್ಲಿ ಪ್ರಕಟಣೆ ಮಾಡಬಹುದು. ಅದು ದರಿದ್ರ, ಯಾವ ಯಾವ ಇಲಾಖೆಗೆ, ಯಾವ ಯಾವ ಪೋಸ್ಟ್‌ಗೆ ಯಾರ್ಯಾರಿಗೆ, ಎಲ್ಲೆಲ್ಲಿ ಯಾವ ಯಾವ ಸ್ಥಳಕ್ಕೆ ಎಷ್ಟು ಎನ್ನತಕ್ಕ ಬಗ್ಗೆ ರೇಟ್ ಇದೆ. ಇದನ್ನು ಹೇಳುತ್ತಾ ಕುಳಿತುಕೊಂಡರೆ ರ್ಥವಿಲ್ಲದಂತಾಗುತ್ತದೆ. ಇದು ಒಂದು ದೊಡ್ಡ ದುರಂತ. ಇದನ್ನು ಮಾತನಾಡುವುದಕ್ಕೆ ಹೋ ರೆ ನಾಚಿಕೆಗೇಡಾಗುತ್ತದೆ. ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಪೊಲೀಸ್ ಇಲಾಖೆಯವರು ದ್ದರೆ ಬಿದ್ದರೆ 24 ಗಂಟೆಗಳ ಕಾಲವೂ ಅವರುಗಳು ಕೆಲಸವನ್ನು ಮಾಡಬೇಕು ಅದಕ್ಕಾಗಿ ಅವರಿಗೂ ಕೂಡ ಕಾಲಮಿತಿಯನ್ನು ನಿಗದಿ ಮಾಡಿ. ಇಲ್ಲಾ 24 ಗಂಟೆಗಳ ಕಾಲ ನೀವು ಕೊಡುವುದಾದರೆ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು. ಬೇರೆ ನೌಕರರುಗಳಿಗೆ ಕೊಡತಕ್ಕಂತಹ ಸವಲತ್ತುಗಳನ್ನು ಅವರಿಗೆ ಕೊಡಬೇಕು. ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಬರುವಾಗ ಒಬ್ಬ ಪೊಲೀಸ್ ಮೀಸಲು ಪಡೆಯವನು ಈ ತರಹ ನಮಗೆ ಬೆಲ್ಟ್‌ನ್ನು ಕೊಡುತ್ತಾರೆ ಸೊಂಟಕ್ಕೆ ಹಾಕುವುದಕ್ಕೆ ಕೊಡುತ್ತಾರೆ, ಈ ನಡುಪಟ್ಟಿ ಇದು ನಮಗೆ ಒಂದು ತಿಂಗಳು ಕಾಲ ಉಳಿಯುವುದಿಲ್ಲ. ಇದನ್ನು ನಮಗೆ ಏತಕ್ಕಾಗಿ ಕೊಡಬೇಕು? ಇದನ್ನು ಯಾರಿಗೋಸ್ಕರ ಕೊಡಬೇಕು ಅದಕ್ಕಾಗಿ ಚರ್ಮದ್ದು ಉತ್ತಮವಾದದ್ದನ್ನೂ ಕೊಡಿ ಎಂದು ಹೇಳಿದರೆ ಈ ಬಟ್ಟೆಯದು ಕೊಡುತ್ತಾರೆ. ಇದು ಎಷ್ಟು ದಿವಸ ನಮಗೆ ಉಳಿಯುತ್ತದೆ? ನಮಗೆ ಸೋಪು ಇಲ್ಲ, ಮನೆಗೆ ಸುಣ್ಣ ಇಲ್ಲ, ಭತ್ಯೆ ಇಲ್ಲ, ಮತ್ತು ವ್ಯಾನ್‌ನಲ್ಲಿ ಕುಳಿತಿರುತ್ತೇವೆ. ಒಟ್ಟು 24 ಗಂಟೆಯಲ್ಲಿ 16 ಗಂಟೆ ಕುಳಿತಿರುತ್ತೇವೆ. ನಮ್ಮ ಹಣೆಬರಹ ಏನು? ಎಂದು ಹೇಳುತ್ತಾರೆ. ಇದೆಲ್ಲವೂ ನೋಡಿದರೆ ಇಡೀ ಪೊಲೀಸ್‌ನವರನ್ನು ಪ್ರಾಣಿಗಳನ್ನಾಗಿ ಮಾಡಿದ್ದೇವೆ. 'ಒಂದು ರೀತಿ ಅವರನ್ನು ಕಡೆಗಾಣಿಸಿದ್ದೇವೆ; ಅವರನ್ನು ಈ ಪ್ರಾಣಿ ಸಂಗ್ರಹಾಲಯದಲ್ಲಿ ಇಡುವ ರೀತಿಯಲ್ಲಿ ಇಟ್ಟಿದ್ದೇವೆ. ಆ ರೀತಿ ಇಡುವುದರಿಂದ ಯಾವುದೇ ಚಳುವಳಿಗಳು ಆದಾಗ ಅವರು ಲಾಠಿ ಚಾರ್ಜ್ ಮಾಡಿದಾಗ ಸಿಕ್ಕ ಸಿಕ್ಕವರಿಗೆ ಹೊಡೆಯುತ್ತಾರೆ. ಅವರ ಪರಿಸ್ಥಿತಿ ಹಾಗೆ ಆಗಿದೆ. ಆದ್ದರಿಂದ ಅವರ ಸಮಗ್ರ ಅಭಿವೃದ್ಧಿ ಬಗ್ಗೆ ಇರುವಂತಹ ಧರ್ಮವೀರ ಸಮಿತಿ ವರದಿಯನ್ನು ಸಂಪೂರ್ಣವಾಗಿ ಒಪ್ಪಬೇಕು. ಮತ್ತು ಅವರಿಗೆ ಬೇಕಾದಂತಹ ಉಡುಪುಗಳು, ನಡುಪಟ್ಟಿ ಇವೆಲ್ಲಾ ಕೊಡಬೇಕು. ನಾನು ಅನೇಕ ಸಾರಿ ಹೇಳುತ್ತೇನೆ, ಹಾಗೂ ತಮಗೆ ಗೊತ್ತಿದೆ, ಈ ಸಂಚಾರಿ ಪೊಲೀಸ್‌ನವರ ಗತಿಯೇನು? ಅವರು 24 ಗಂಟೆ ನಿಂತಿರಬೇಕು. ಅವರ ಕಿವಿ ಹೋಗುತ್ತದೆ, ಕಣ್ಣು ಹೋಗುತ್ತದೆ, ಮೂಗು ಹೋಗುತ್ತದೆ ಹಾಗೂ ಅಂತಿಮವಾಗಿ ಹುಚ್ಚು ಹಿಡಿಯುತ್ತದೆ. ಅವರಿಗೆ ನಾವು ಏನು ಕೊಡುತ್ತಿದ್ದೇವೆ? ಯಾವುದು ಕೊಡುತ್ತಿದ್ದೇವೆ? ಸತ್ಯ ಮಾತನಾಡೋಣ, ಇದು ಹಾಸ್ಯವಲ್ಲ. ಪ್ರಾಮಾಣಿಕವಾಗಿ ಮಾತನಾಡೋಣ. ಅವರು ನಿಂತಿರುತ್ತಾರೆ. ಮತ್ತೆ ಕಂಟ್ರೋಲ್ ರೂಮ್. ಅಲ್ಲಿ ಪ್ರತಿದಿನ ಕಿವಿಯಲ್ಲಿ ಇಟ್ಟುಕೊಂಡಿರಬೇಕು. ಬಂದವರದೆಲ್ಲಾ ಕೇಳುತ್ತಾ ಕೇಳುತ್ತಾ, ಕೇಳುತ್ತಿರಬೇಕು. ಅವನ ಕಿವಿ ಗತಿ ಏನು? ಯಾವ ಪೊಲೀಸ್ ನಿಮಗೆ ಅಥವಾ ಮಂತ್ರಿಗಳಿಗೆ ಹಿಡಿಸಲಿಲ್ಲವೋ ಶಾಸಕರಿಗೆ ಹಿಡಿಸಲಿಲ್ಲವೋ, ಮಾನ್ಯ ಮುಖ್ಯಮಂತ್ರಿಗಳಿಗೆ ಹಿಡಿಸಲಿಲ್ಲವೋ ಅವನನ್ನು ತೆಗೆದುಕೊಂಡು ಹೋಗಿ ಬೇರೆ ಕಡೆ ಹಾಕುವುದು. ನರಕ, ಪೊಲೀಸ್ ಇಲಾಖೆಯಲ್ಲಿ ಸ್ವರ್ಗ ಎಂದು ಇದೆ, ಅದಕ್ಕೆ ಒಂದು ಗುಂಪು. ನರಕ ಎಂದು ಇನ್ನೊಂದು ಇದೆ. ಯಾರು ನಿಮ್ಮ ಮಾತು ಕೇಳುವುದಿಲ್ಲ ಅವರನ್ನು ನರಕಕ್ಕೆ ತಳ್ಳುವುದು. ನೀವು ಅಲ್ಲಿ ನರಕಕ್ಕೆ ಹೋಗಿ ಎಂದು. ನೀವು ನರಕಕ್ಕೆ, ನೀವು ಸ್ವರ್ಗಕ್ಕೆ ಎಂದು ಈ ರೀತಿ ಪೊಲೀಸ್ ಇಲಾಖೆಯಲ್ಲಿ ದಕ್ಷತೆ ಹೋಗುತ್ತಿದೆ. ಪ್ರಾಮಾಣಿಕತೆ ಹೋಗುತ್ತಿದೆ. ಕಾರಣ ಏನು? 'ನಾವು ಅವರನ್ನು ನಡೆಸಿಕೊಳ್ಳತಕ್ಕಂಥ ರೀತಿ ಈ ಪರಿಸ್ಥಿತಿಯಲ್ಲಿ ಇದೆ. ಇನ್ನು ಕೊನೆಯದಾಗಿ,

ನಂಜುಂಡಪ್ಪ ವರದಿ, ಇದರ ಬಗ್ಗೆ ಬರಿ ಸರ್ಕಾರ ಮಾತನಾಡುತ್ತಿದೆ. ಸರ್ಕಾರದವರು ಘೋಷಣೆ ಮಾಡುತ್ತಿದ್ದಾರೆ. ಮೂಗಿನ ಮೇಲೆ ತುಪ್ಪ ಹಚ್ಚಿದ್ದಾರೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕೂಡ ಆಗಲಿಲ್ಲ. ನಮ್ಮ ಮಾನ್ಯ ವೈಜನಾಥ್ ಪಾಟೀಲ್ ಒಂದೇ ಸಮನೆ ಹೇಳುತ್ತಿದ್ದಾರೆ. ಅವರ ಬಗ್ಗೆ ಕೂಡ ಗಮನ ಕೊಡಲಿಲ್ಲ. ನಂಜುಂಡಪ್ಪ ವರದಿ ಪ್ರಾಮಾಣಿಕವಾಗಿ ಜಾರಿಯಾಗಲಿಲ್ಲ. ಮತ್ತೊಂದು ಕಡೆ ಕೊಡಗು, ಕೊಡವರ ಬಗ್ಗೆ ಕೂಡ ಗಮನ ಇಲ್ಲ. ನಾನು ಹೇಳುತ್ತೇನೆ ಸರ್ಕಾರ ಪ್ರಾಮಾಣಿಕವಾಗಿ ನಂಜುಂಡಪ್ಪ ವರದಿಯನ್ನು ಸಮಗ್ರವಾಗಿ ಜಾರಿ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಲಿವೆಂದರೆ ಆಂಧ್ರದ ಪರಿಸ್ಥಿತಿ ಇಲ್ಲೂ ಆಗುತ್ತದೆ. ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ತೆಲಂಗಾಣ ಮಾದರಿ ಚಳುವಳಿಯಾಗುತ್ತದೆ. ಎಚ್ಚರಿಕೆ ಕೊಡುತ್ತಿದ್ದೇನೆ. ಆದುದರಿಂದ ಸರ್ಕಾರ ಎಚ್ಚರ ವಹಿಸಿ ಗಂಭೀರವಾಗಿ ನಂಜುಂಡಪ್ಪ ವರದಿಯನ್ನು ಕಾಲಮಿತಿ ಹಾಕಿ ಪ್ರಾಮಾಣಿಕವಾಗಿ ಅದನ್ನು ಮಾಡಬೇಕಾದ್ದು ಕರ್ತವ್ಯವಾಗಿದೆ. ಜೊತೆಗೆ ಕೊಡಗು ಜನರನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ. ಕರ್ನಾಟಕದ ಕಾಶ್ಮೀರ ಎಂದು ಹೇಳಿ ಕೂಡ ಕಡೆಗಾಣಿಸಿದ್ದಾರೆ ಎಂದು ಹೇಳಿ ಅವರು ನಿತ್ಯ ನಿರಂತರವಾಗಿ ಹೋರಾಟವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನವನ್ನು ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ಎಂ.ಸಿ.ಎಫ್. ಕಾರ್ಮಿಕರು ಉಪವಾಸ ಮುಷ್ಕರ ನಡೆಸುತ್ತಿರುವ ಬಗ್ಗೆ ಒಂದು ನಿಮಿಷ.

† **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:** ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಮಾನ್ಯ ಸಿಂಧ್ಯಾರವರು ಇದ್ದಾರೆ. ನಾನು ನಿನ್ನೆ ದಿವಸ ಟಿ.ವಿ.ಯಲ್ಲಿ ನೋಡಿದೆ ಹಾಗೂ ಇವತ್ತು ಪತ್ರಿಕೆಯಲ್ಲಿ ಬಂದಿದೆ. ಎಂಸಿಎಫ್‌ನಲ್ಲಿ ಕಾರ್ಮಿಕರು ಉಪವಾಸ ಮುಷ್ಕರ ಕುಳಿತಿರುವವರಲ್ಲಿ ಮೂರು ಜನ ಸತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ, ಅದರ ಬಗ್ಗೆ ಸ್ವಲ್ಪ ಕ್ರಮ ಕೈಗೊಳ್ಳಬೇಕು. ಮತ್ತು ಆ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖೇನ ಮಾನ್ಯ ಸಿಂಧ್ಯಾರವರನ್ನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಮಾನ್ಯ ಸದಸ್ಯರು ಹೇಳಿರುವ ಸಮಸ್ಯೆ ವಿಚಾರದಲ್ಲಿ ಹೇಳುವುದಾದರೆ, ಎಂಸಿಎಫ್ ಮ್ಯಾನೇಜ್‌ಮೆಂಟ್ ಜೊತೆಯಲ್ಲಿ ಮಾತನಾಡಿದ್ದೇನೆ. ನನಗಿಂತ ಹೆಚ್ಚಾಗಿ ನಮ್ಮ ಕಾರ್ಮಿಕ ಸಚಿವರಾಗಿರತಕ್ಕಂಥ ಮಾನ್ಯ ತನ್ವೀರ್ ಸೇಠ್ ಅವರು ಹಲವಾರು ಬಾರಿ ಆಡಳಿತ ಮಂಡಲಿ ಮತ್ತು ಕಾರ್ಮಿಕ ಮುಖಂಡರುಗಳನ್ನು ಕರೆಸಿ ಮಾತುಕತೆಗಳನ್ನು ಮಾಡಿದ್ದಾರೆ. ಆದರೆ ಮಾತುಕತೆಗಳು ವಿಫಲವಾಗಿವೆ. ಆದರೆ ನಾನೂ ಸಹ ನಿನ್ನೆ ನೋಡಿದೆ, ಈಗಾಗಲೇ 2–3 ಜನ ಮುಷ್ಕರ ನಿರತ ಕಾರ್ಮಿಕರು ಸತ್ತಿದ್ದಾರೆ ಎನ್ನುವುದನ್ನು ನೋಡಿದ್ದೇನೆ. ಆದ್ದರಿಂದ ನಾನು ನಾಳೆ ದಿನ ರಾಜ್ಯಕ್ಕೆ ಸಂಬಂಧಪಟ್ಟಂತಹ ವಾಣಿಜ್ಯೋದ್ಯಮಿಗಳ ಸಭೆ ಹೈದರಾಬಾದ್‌ನಲ್ಲಿ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳ ಜೊತೆ ಹೋಗುತ್ತಿದ್ದೇನೆ. ನಾಡಿದ್ದು ನಾನು ಹೈದರಾಬಾದ್‌ನಿಂದ ಬಂದಮೇಲೆ ಆ ಒಂದು ಆಡಳಿತ ಮಂಡಲಿಯ ಮುಖಂಡರುಗಳನ್ನು ಕರೆಸಿ, ಕಾರ್ಮಿಕ ಮುಖಂಡರುಗಳನ್ನು ಸಹ ಕರೆಸಿ ತತ್‌ಕ್ಷಣ ಆ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕೆ ಕಾರ್ಮಿಕ ಸಚಿವರು ಮತ್ತು ನಾನು ಪ್ರಯತ್ನ ಮಾಡುತ್ತೇವೆ.

ಚೇರ್‌ಮನ್:– ಈಗ ಮಾನ್ಯ ರಾಮಸ್ವಾಮಿಯವರು ಮಾತನಾಡಿ.

---

† ಮಾನ್ಯ ಸದಸ್ಯರಿಂದ ಈ ಭಾಷಣವು ಪರಿಷ್ಕರಿಸಲ್ಪಟ್ಟಿರುತ್ತದೆ.